

ಸಾಹಿತ್ಯ

ಸಂವಾದ - ೪೬

ಸಾಹಿತ್ಯ ಸಂವಾದ - ೪೬

ಸಾಹಿತ್ಯಿಕ ಸಾಂಸ್ಕೃತಿಕ ಸಂಕಲನ

ಜುಲೈ - ಆಗಸ್ಟ್ ೧೯೯೭

- ☐ ನಮ್ಮ ಸಾಹಿತ್ಯಿಕ - ಸಾಂಸ್ಕೃತಿಕ ಬದುಕಿನ ಸ್ಪಂದನಕ್ಕೆ
- ☐ ವಸ್ತುನಿಷ್ಠ ಸತ್ಯದ ಆವಿಷ್ಕಾರಕ್ಕಾಗಿ

ಸಂಪಾದಕ

ರಾಘವೇಂದ್ರ ಪಾಟೀಲ

ಚಂದಾ ವಿವರ

ಆಜೀವ ಚಂದಾ : ರೂ. ೫೦೦ (ವ್ಯಕ್ತಿಗಳಿಗೆ); ರೂ. ೭೫೦ (ಸಂಸ್ಥೆಗಳಿಗೆ)

ವಾರ್ಷಿಕ ಚಂದಾ : ರೂ. ೫೦ (ವ್ಯಕ್ತಿಗಳಿಗೆ); ರೂ. ೭೫ (ಸಂಸ್ಥೆಗಳಿಗೆ)

ಮುಖಪುಟ

ಶಂಕರ ಪಾಟೀಲ

ಮುದ್ರಣ - ಪ್ರಕಾಶನ - ಹಾಗೂ ಸಂಪಾದನೆ

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ - ೫೭೭ ೫೩೧

ಮುದ್ರಣ

ಲಿಪಿ ಮುದ್ರಣ

ಬ್ಯೂಗಲ್ ರಾಕ್ ರಸ್ತೆ, ಬೆಂಗಳೂರು - ೫೬೦ ೦೦೪

ಫೋನ್ : ೬೨೪೬೫೩

ಸಾಹಿತ್ಯ ಸಂವಾದ – ೪೬

ಸಂಪುಟ : ೮ ಜುಲೈ-ಆಗಸ್ಟ್ ೧೯೯೭ ಸಂಚಿಕೆ : ೪

ಈ ಸಂಚಿಕೆಯಲ್ಲಿ......

ಕೀಲಿಯ ಕೈ

-ಇಸಾಕ್ ಬಾಶೆವಿಸ್ ಸಿಂಗರ್

ಮಧ್ಯಾಹ್ನದ ಮೂರುಗಂಟೆಯ ಸುಮಾರಿಗೇ ಬೆಸ್ಸಿ ಪಾಪ್ಕಿನ್ ಹೊರಗೆ ಹೊರಡಲು ಸಿದ್ಧವಾಗತೊಡಗಿದಳು. ಹೊರಗೆ ಹೊರಡುವುದೆಂದರೆ ಬೆಸ್ಸಿಗೆ ಮೈಸುತ್ತಲೇ ಬಂದಂತಾಗುತ್ತಿತ್ತು - ಹೊರಗೆ ಹೊರಡುವುದೆಂದರೆ ಅನೇಕ ತೊಂದರೆಗಳಲ್ಲಿ ಸಿಕ್ಕಿಹಾಕಿಕೊಂಡಂತೆ. ಅದೂ ಬೇಸಿಗೆಯ ಶಖೆಯ ದಿನವಂತೂ ಬೇಡವೇ ಬೇಡ!... ಬೊಜ್ಜಿನ ದೇಹವನ್ನು ಒಳ ಚಡ್ಡಿಯಲ್ಲಿ ತೂರಬೇಕು ... ಊದಿದ ಪಾದಗಳನ್ನು ಹಿಂಡಿ ಹಿಚುಕಿ ಬೂಟುಗಳಲ್ಲಿ ಸೇರಿಸಬೇಕು. ... ಮತ್ತು ಎತ್ತೆತ್ತಲೋ ಕೆದರಿಕೊಂಡಿರುವ, ಬಣ್ಣ ಹಾಕಿದ್ದರಿಂದ ಹಳದೀ -ಕರೀ - ಬೂದು - ಕೆಂಪು ಹೀಗೆ ನಾನಾ ಬಣ್ಣಗಳನ್ನು ತೋರುತ್ತಿದ್ದ ಕೂದಲನ್ನು ಬಾಚಿಕೊಳ್ಳಬೇಕು. ಇಷ್ಟಾದಮೇಲೆ ಪಕ್ಕದ ಮನೆಗಳವರು ಮನೆಯೊಳಗೆ ನುಸುಳಿ ಬಟ್ಟೆಬರೆ, ಕಾಗದ ಪತ್ರಗಳನ್ನು ಹಾರಿಸದಂತೆ ಅಥವಾ ಅವುಗಳು ಸಿಗದಂತೆ ಚಲ್ಲಾಪಿಲ್ಲಿಯಾಗಿ ಅವುಗಳನ್ನು ಚಲ್ಲಾಡಿಹೋಗದಂತೆ ಕಾಳಜಿ ವಹಿಸಬೇಕು ...

ಬೆಸ್ಸಿಗೆ ಇಲ್ಲಿನ ಸುತ್ತಮುತ್ತಲಿನ ಮನುಷ್ಯರ ಕಾಟ ಸಾಲದೇನೋ ಎನ್ನುವಂತೆ ದೆವ್ವ ಪಿಶಾಚಿಗಳಂತಹ ದುಷ್ಟಶಕ್ತಿಗಳ ಕಾಟ ಬೇರೆ ಸುರುವಾಗಿದೆ. ಟೇಬಲ್ಲಿನ ಡ್ರಾವಿನಲ್ಲಿ ಮುಚ್ಚಿಟ್ಟ ಚಾಳೀಸು ಮರುದಿನ ನೋಡಿದರೆ ಅವಳ ಚಪ್ಪಲಿಯಲ್ಲಿ ಇರುತ್ತದೆ! ಔಷಧದ ಕಪಾಟಿನಲ್ಲಿಟ್ಟ ಕೂದಲಿನ ಬಣ್ಣದ ಸೀಸೆ ತಲೆದಿಂಬಿನ ಬುಡದಲ್ಲಿ ಸಿಗುತ್ತದೆ. ಒಮ್ಮೆ ರೆಫ್ರಿಜರೇಟರಿನಲ್ಲಿಟ್ಟಿದ್ದ ಗಿಣ್ಣದ ಪಾತ್ರೆಯನ್ನು 'ಕಾಣದ ಕೈಯು' ಅಲ್ಲಿಂದ ಮಾಯಮಾಡಿಬಿಟ್ಟಿತ್ತು. ಬೆಸ್ಸಿ ಹುಡುಕಿಯೇ ಹುಡುಕಿದಳು. ಕೊನೆಗೆ ಅದು ಅವಳ ಬಟ್ಟೆಯ ಕಪಾಟಿನಲ್ಲಿ ಸಿಕ್ಕಿತು. ... ನೋಡಿದರೆ ಅದರ ಮೇಲ್ಭಾಗದಲ್ಲಿ ಇಷ್ಟು ದಪ್ಪ.. ಮೇಣದಂತಹ ಕೊಬ್ಬು ಕೆನೆಗಟ್ಟಿ ಕೂತಿತ್ತು. ಕೊಳಕು ಗುನುಗು ವಾಸನೆ ಬೇರೆ ...

ಬೆಸ್ಸಿ ಅನುಭವಿಸಿದ ಪಡಿಪಾಟಲುಗಳು - ಆಕೆಯನ್ನು ಮೋಸಗೊಳಿಸಲು ಹೂಡಿದ ವಿವಿಧ ಆಟಗಳು - ಈಕೆ ಇವುಗಳಲ್ಲಿ ನಾಶವಾಗದಂತೆ - ಹುಚ್ಚುಹಿಡಿಯದಂತೆ_ನಡೆಸಿದ ಹೋರಾಟಗಳು... ಇವೆಲ್ಲವುಗಳ ಲೆಕ್ಕವನ್ನು ಆ ದೇವರೇ ಬಲ್ಲ! ಆಕೆ ಟೆಲಿಫೋನು ಎತ್ತುವುದನ್ನು ನಿಲ್ಲಿಸಿಯೇ ಬಿಟ್ಟಿದ್ದಳು. ಯಾಕೆಂದರೆ ಕೆಡಕು ಮಂದಿ ಮತ್ತು ಮೋಸಗಾರರು ಅವಳ ಬೆನ್ನುಹತ್ತಿಬಿಟ್ಟಿದ್ದರು ... ಏನಾದರೂ ಮಾಡಿ ಅವಳಿಂದ ರಹಸ್ಯಗಳನ್ನು ತಿಳಿಯಲು

ಹಗಲೆಲ್ಲ ಅವಳಿಗೆ ಫೋನು ಮಾಡುವರು. ಹಾಲಿನ ಪೈರ್ರ್ರೊ ಒಮ್ಮೆ ಅವಳ ಕೈಹಿಡಿದು ಎಳೆದಿದ್ದ - ಕಿರಾಣಿ ಅಂಗಡಿಯ ಕೆಲಸದ ಹುಡುಗ ಇಕಿಯ ಸಾಮಾನುಗಳನ್ನು ಉರಿಯುವ ಸಿಗರೇಟಿನಿಂದ ಸುಟ್ಟುಹಾಕಲು ನೋಡಿದ್ದ. ಬಾಡಿಗೆ ನಿಯಂತ್ರಣದವರಿಂದ ಪಡೆದು ಕಳೆದ ಮೂವತ್ತೈದು ವರ್ಷಗಳಿಂದ ವಾಸಮಾಡಿದ ಮನೆಯನ್ನು ಬಿಡಿಸಲು ಅಪಾರ್ಟಮೆಂಟಿನ ಕಂಪನಿಯವರು - ಆ ಕಂಪನಿಯ ಸುಪರಿಂಟೆಂಡೆಂಟ್ ಇಬ್ಬರೂ ಸೇರಿ ಅವಳ ಮನೆಯಲ್ಲಿ ತಗಣಿ - ಇಲಿ - ಹೆಗ್ಗಣಗಳನ್ನು - ಜೊಂಡಿಗಗಳನ್ನು ಹೊಗಿಸುತ್ತಿದ್ದಾರೆ.... ಇದರ ನಿವಾರಣೆಗೆ ಉಕ್ಕಿನ ಬಾಗಿಲು, ವಿಶೇಷ ಬೀಗದ ವ್ಯವಸ್ಥೆ - ಪೋಲೀಸರಿಗೆ, ಮೇಯರನಿಗೆ, ಗೂಢಚಾರ ಡಿಪಾರ್ಟಮೆಂಟಿನವರಿಗೆ ...ಇಷ್ಟೇ ಅಲ್ಲ ..ವಾಶಿಂಗ್ಟನ್ನಿನಲ್ಲಿದ್ದ ಅಧ್ಯಕ್ಷನಿಗೆ ಪತ್ರಬರೆಯುವುದು...ಇವಾವುವೂ ಪ್ರಯೋಜನವಿಲ್ಲವೆಂದು ಬೆಸ್ಸಿಗೆ ಗೊತ್ತಾಗಿ ಹೋಗಿದ್ದಿತು. ಆದರೆ ಬೆಸ್ಸಿ ನಿರಂತರವಾಗಿ ಹೊರಗೆ ಹೋಗದೆ ಒಳಗೇ ಕುಳಿತುಕೊಳ್ಳಲು ಸಾಧ್ಯವೇ? ಅವಳು ಉಸಿರಾಡುತ್ತಿರುವವಳಾದ್ದರಿಂದ ಊಟವನ್ನೂ ಮಾಡಬೇಕಲ್ಲ!

ಆಕೆ ಹೊರಗೆ ಹೋಗುವಾಗೆಲ್ಲ ಕಿಡಕಿ - ವೆಂಟಿಲೇಟರುಗಳನ್ನು, ಹೊಗೆಕೊಳವೆಯನ್ನು ಮುಚ್ಚಲು - ಡ್ರಾವರುಗಳನ್ನು ಭದ್ರಪಡಿಸಲು ಗಂಟೆಗಟ್ಟಲೆ ಸಮಯ ತೆಗೆದುಕೊಳ್ಳುತ್ತಿದ್ದಳು. ...ನೋಟುಗಳನ್ನು ಎನ್‌ಸೈಕ್ಲೋಪಿಡಿಯದ ಇಲ್ಲವೆ ನ್ಯಾಶನಲ್ ಜಿಯಾಗ್ರಾಫಿಕ್‌ನ ಹಳೆಯ ಸಂಚಿಕೆಗಳ ಪುಟಗಳಲ್ಲಿ ಅಥವಾ - ಸ್ಯಾಮ್ ಪಾಪ್ಕಿನ್‌ನ ಹಳೆಯ ಲೆಕ್ಕದ ಪುಸ್ತಕದ ಪೇಜುಗಳ ನಡುವೆ ಇಡುತ್ತಿದ್ದಳು. ಸ್ಟಾಕ್ ಸರ್ಟಿಫಿಕೇಟುಗಳು ಮತ್ತು ಬಾಂಡುಗಳನ್ನು, ಬೆಸ್ಸಿ, ಎಂದೆಂದೂ ಉರಿಸದಿರುವ ಒಲೆಯಲ್ಲಿನ ಕಟ್ಟಿಗೆಯ ಬೊಡ್ಡೆಗಳ ನಡುವೆ ಸಿಕ್ಕಿಸಿರುತ್ತಿದ್ದಳು, ಅಥವಾ ಆರಾಮುಖುರ್ಚಿಗಳ ಸೀಟುಗಳ ಅಡಿಗೆ ಇಟ್ಟಿರುತ್ತಿದ್ದಳು. ಆಭರಣಗಳನ್ನು ಚಾಪೆಯ ಸುರುಳಿಗಳಲ್ಲಿ ಸುತ್ತಿರುತ್ತಿದ್ದಳು... ಹಿಂದೊಮ್ಮೆ ಬೆಸ್ಸಿ, ಬ್ಯಾಂಕಿನಲ್ಲಿ ಸೇಫ್ ಲಾಕರು ಇಟ್ಟುಕೊಂಡಿದ್ದಳು. ಆದರೆ ಬ್ಯಾಂಕಿನ ಮ್ಯಾನೇಜರನ ಹತ್ತಿರ ತನ್ನ ಲಾಕರಿನ ಬೀಗದ ಕೈಯ ನಕಲು ಇರುತ್ತದೆ ಎಂದು ತಿಳಿದ ಮೇಲೆ ಲಾಕರುಗಳ ಉಸಾಬರಿ ಬಿಟ್ಟು ಬಿಟ್ಟಳು.

...ಅಂತೂ ಐದುಗಂಟೆಯ ಹೊತ್ತಿಗೆ ಬೆಸ್ಸಿ ಮನೆಯಿಂದ ಹೊರಡಲು ತಯಾರಾದಳು... ಹೊರಡುವ ಮೊದಲಿಗೆ ಕೊನೆಯದಾಗಿ ಒಮ್ಮೆ ಕನ್ನಡಿಯಲ್ಲಿ ಮುಖವನ್ನು ನೋಡಿಕೊಂಡಳು ...ಚಿಕ್ಕ ಮುಖ.. ಕಿರಿದಾದ ಹಣೆ, ಚಪ್ಪಟೆಮೂಗು, ಅರೆಮುಚ್ಚಿದಂತೆ ಕಾಣುವ ಚೀನೀಯರಂತಹ ಕಣ್ಣುಗಳು... ಗದ್ದದಿಂದ ಚಿಗಿತ ಬಿಳಿಯ ಗಡ್ಡದ ಮೊಳಕೆಗಳು ...ಹೂವಿನ ಪ್ರಿಂಟುಗಳಿದ್ದ ಮಾಸಿದ ಉಡುಪು ಧರಿಸಿ ಅಂದಗೆಟ್ಟ ಒಂದು ಗರಿಕೆಯ ಹ್ಯಾಟನ್ನು ಹಾಕಿಕೊಂಡಿದ್ದಳು. ಆ ಹ್ಯಾಟಿನ ಅಂಚಿಗೆ ಬೆರ್ರಿ ಮತ್ತು ದ್ರಾಕ್ಷಿಯ ಹಣ್ಣುಗಳ ಕಟ್ಟಿಗೆಯ ಕಾರಗಳ ಜೋಡಣೆ ಇದ್ದಿತು. ಅಂದಗೆಟ್ಟ ಶೂ ಹಾಕಿಕೊಂಡಿದ್ದಳು. ಮನೆಯಿಂದ ಹೊರಬೀಳುವ ಮೊದಲು ಇನ್ನೊಮ್ಮೆ ಮೂರೂ ಕೋಣೆಗಳ ಮತ್ತು ಅಡಿಗೆ ಮನೆಯ ವೀಕ್ಷಣೆ ನಡೆಸಿದಳು. ಎಲ್ಲಕಡೆ ಪಾದರಕ್ಷೆಗಳು ಮತ್ತು ತೆರೆಯದೇ ಇದ್ದ ಪತ್ರಗಳ ಪಾಕೀಟುಗಳ ಪೆಂಡೆಗಳಿದ್ದವು. ಬೆಸ್ಸಿಯ ಗಂಡ ಸ್ಯಾಮ್ ಪಾಪ್ಕಿನ್ ಸತ್ತು ಆಗಲೇ ಇಪ್ಪತ್ತು ವರ್ಷಗಳು ಕಳೆದು ಹೋಗಿವೆ. ಸ್ಯಾಮ್ ಪಾಪ್ಕಿನ್ ತಾನು ಸಾಯುವ ಮೊದಲೇ ತನ್ನ ಭೂಮಿ ಸೀಮಿಯ ಲೇವಾ

ದೇವಿ ವ್ಯವಹಾರವನ್ನು ನಿಲ್ಲಿಸಿ ಬಿಟ್ಟಿದ್ದನು . ಯಾಕೆಂದರೆ ಅವನು ಫ್ಲೋರಿಡಾಕ್ಕೆ ಹೋಗಿ ಅಲ್ಲಿಯೇ ಆರಾಮವಾಗಿ ನೆಲೆಸಬೇಕೆಂದು ನಿರ್ಧರಿಸಿದ್ದನು. ಬೆಸ್ಸಿಗೆ ಸ್ಯಾಮ್ ಸಾಕಾಗುವಷ್ಟು ಬಿಟ್ಟು ಹೋಗಿದ್ದನು ...ಸ್ಟಾಕುಗಳು , ಬಾಂಡ್‌ಗಳು , ಅನೇಕ ಬ್ಯಾಂಕುಗಳಲ್ಲಿನ ಉಳಿತಾಯ ಖಾತೆಗಳ ಪಾಸ್ ಪುಸ್ತಕಗಳು ಮತ್ತು ಒಂದಿಷ್ಟು ಅಡವಿಟ್ಟುಕೊಂಡ ಆಸ್ತಿಗಳನ್ನು ಕೂಡ ಅವನು ಬಿಟ್ಟು ಹೋಗಿದ್ದ . ಈವತ್ತಿಗೂ ಅನೇಕ ಸಂಸ್ಥೆಗಳು ಬೆಸ್ಸಿಯ ಹೆಸರಿಗೆ ರಿಪೋರ್ಟುಗಳನ್ನು - ಚೆಕ್ಕುಗಳನ್ನು ಕಳಿಸುತ್ತವೆ . ಆಂತರಿಕ ಕಂದಾಯ ಇಲಾಖೆಯು ಈ ಬಗ್ಗೆ ಅವಳಿಂದ ತೆರಿಗೆಯನ್ನೂ ವಸೂಲುಮಾಡುತ್ತದೆ . ಅಂತ್ಯಸಂಸ್ಕಾರದ ವ್ಯವಸ್ಥೆ ಮಾಡುವ ವಾಣಿಜ್ಯ ಕಂಪನಿಯೊಂದು ತಾನು ಸಾಕಷ್ಟು ವಿಶಾಲವಾದ , ಗಾಳಿಯಾಡುವ ಸ್ಮಶಾನದಲ್ಲಿ ಸ್ಥಳಗಳನ್ನು ಮಾರುವುದಾಗಿ ತಿಳಿಸುವ ಜಾಹೀರಾತುಗಳನ್ನು ಪ್ರತಿವಾರವೂ ಬೆಸ್ಸಿಗೆ ಕಳಿಸುತ್ತಿದ್ದಿತು .... ಮೊದಲಿನ ಕೆಲವು ವರ್ಷಗಳ ವರೆಗೆ, ಬೆಸ್ಸಿ ತನಗೆ ಬರುತ್ತಿದ್ದ ಪತ್ರಗಳಿಗೆ ಉತ್ತರ ಬರೆಯುತ್ತಿದ್ದಳು - ಬರುತ್ತಿದ್ದ ಚೆಕ್ಕುಗಳನ್ನು ತನ್ನ ಖಾತೆಗೆ ಹಾಕುತ್ತಿದ್ದಳು. ಆದಾಯ ವೆಚ್ಚಗಳನ್ನು ಪರಿಶೀಲಿಸುತ್ತಿದ್ದಳು . ಆದರೆ ಕ್ರಮೇಣ ಎಲ್ಲವನ್ನೂ ನಿರ್ಲಕ್ಷಿಸಿದಳು. ಈಗ ವರ್ತಮಾನ ಪತ್ರಿಕೆಗಳ ವಾಣಿಜ್ಯವಿಭಾಗವನ್ನು ಓದುವುದು ಹೋಗಲಿ ಅವುಗಳನ್ನು ಕೊಳ್ಳುವುದನ್ನೇ ಬಿಟ್ಟಿದ್ದಾಳೆ .

ಬಾಗಿಲು ಮತ್ತು ಬಾಗಿಲಚೌಕಟ್ಟಿನ ನಡುವೆ ತನಗೆ ಮಾತ್ರ ತಿಳಿಯಬಹುದಾದ ರೀತಿಯಲ್ಲಿ ಗುರುತುಮಾಡಿದ ಕಾಗದಗಳನ್ನು ಸಿಕ್ಕಿಸಿದಳು. ಬೀಗ ಹಾಕಿದ ಮೇಲೆ ಬೀಗದಕೈಯರಂಧ್ರವನ್ನು ಮೇಣದಿಂದ ತುಂಬಿದಳು . ಮಕ್ಕಳುಮರಿಗಳಿಲ್ಲದ - ಸಂಬಂಧಿಕರಿಲ್ಲದ - ಸ್ನೇಹಿತರಾರೂ ಇಲ್ಲದ ಆ ವಿಧವೆ ಹೆಂಗಸು ಇದಲ್ಲದೆ ಇನ್ನೇನು ಮಾಡಬಲ್ಲಳು ?... ಮೊದಮೊದಲು ಅಕ್ಕಪಕ್ಕದ ಮನೆಗಳವರು ಬಾಗಿಲು ತೆರೆದು ಹಣಿಕಿ ನೋಡಿ , ಬೆಸ್ಸಿಯ ಈ ವಿಪರೀತದ ಕಾಳಜಿಯನ್ನು ಕಂಡು ನಗುತ್ತಿದ್ದರು , ಕೆಲವರು ಈ ಬಗ್ಗೆ ಆಕೆಯನ್ನು ತಮಾಷೆ ಮಾಡುತ್ತಿದ್ದರು. ಅಂಥದೆಲ್ಲ ನಿಂತು ಬಹಳ ದಿನಗಳಾಗಿ ಹೋಗಿದೆ : ಬೆಸ್ಸಿ ಯಾರೊಂದಿಗೂ ಮಾತಾಡುವುದಿಲ್ಲ. ಆಕೆ ಯಾರನ್ನೂ ತಲೆಯೆತ್ತಿ ನೋಡುವುದೂ ಇಲ್ಲ ... ಅನೇಕ ವರ್ಷಗಳಿಂದ ಉಪಯೋಗಿಸುತ್ತಿದ್ದ ಆಕೆಯ ಚಾಳೀಸು ಈಗ ಆಕೆಗೆ ಏನೇನೂ ಪ್ರಯೋಜನವಿಲ್ಲದ್ದಾಗಿತ್ತು . ಕಣ್ಣಿನ ಡಾಕ್ಟರರ ಹತ್ತಿರ ಹೋಗಿ ಹೊಸ ಚಾಳೀಸು ಕೊಳ್ಳುವುದು ಅವಳಿಗೆ ಆಗದ ಕೆಲಸವಾಗಿತ್ತು ... ಎಲ್ಲವೂ ಕಠಿಣವಾಗುತ್ತಿವೆ ... ಲಿಫ್ಟಿನೊಳಗೆ ಹೋಗುವುದಾಗಲೀ ಅದರೊಳಗಿಂದ ಹೊರಗೆ ಬರುವುದಾಗಲೀ ... ಅದರ ಬಾಗಿಲು ಯಾವಾಗಲೂ ಬಿಗಿಯಾಗಿ ಬಡಿದುಕೊಂಡೇ ಇರುತ್ತದೆ !

ಬೆಸ್ಸಿ ತನ್ನ ಬಿಲ್ಡಿಂಗಿನಿಂದ ಎರಡು ಬ್ಲಾಕುಗಳಾಚೆ ಹೋಗುತ್ತಲೇ ಇರಲಿಲ್ಲ. ದೊಡ್ಡಬೀದಿ ಮತ್ತು ನದಿಯ ಘಾಟ್ ಮಧ್ಯದ ಹಾದಿ ದಿನೇ ದಿನೇ ವಿಪರೀತ ಗದ್ದಲದ್ದು - ಕೊಳಕಾದದ್ದು ಆಗುತ್ತಿದೆ. ಅರೆಬೆತ್ತಲಿನ ಭಿಕ್ಷುಕರ ದಂಡು ಅಲ್ಲಿ ಯಾವಾಗಲೂ ಗಸ್ತು ಹೊಡೆಯುತ್ತಿರುತ್ತದೆ ... ಉರುಟುಗೂದಲಿನ ಕರಿಬಣ್ಣದ ಗಂಡಸರು ಕೆಂಪುಗಣ್ಣು ಮಾಡಿಕೊಂಡು ಯಾವಾಗನೋಡಿದರೂ ಬಸುರಾದಂತಿರುವ , ಹೊಟ್ಟೆಯುಬ್ಬಿದ ಹೆಂಗಸರೊಂದಿಗೆ ಸ್ಪ್ಯಾನಿಶ್ ಭಾಷೆಯಲ್ಲಿ ಕಚ್ಚಾಡುತ್ತಿರುತ್ತಾರೆ. ಆ ಹೆಣ್ಣುಗಳು ಕೊರಕೊರ

ವೆಂದು ತಿರುಗಿ ಬಯ್ಯುವವು .ನಾಯಿಗಳು ಬಗುಳುವುದು... ಬೆಕ್ಕುಗಳ ಮಿಯಾಂವ್ -ಮಿಯಾಂವ್. ಎಲ್ಲಿಯೋ ಬೆಂಕಿ ಹತ್ತಿಕೊಂಡಿರಬೇಕು... ಅಗ್ನಿಶಾಮಕದಳದ ವಾಹನಗಳು, ಆಂಬುಲೆನ್ಸ್‌ಗಳು ,ಪೋಲೀಸರ ಜೀಪುಗಳು ... ಹಾದುಹೋದವು. ದೊಡ್ಡಹಾದಿಯ ಕಿರಾಣಿಅಂಗಡಿಗಳೆಲ್ಲ ಹೊರಟುಹೋಗಿ ಈಗ ಸೂಪರ್‌ಮಾರುಕಟ್ಟೆ ಬಂದು ಕೂತಿದೆ. ಅಲ್ಲಿ ಈಗ ದಿನಸಿಪದಾರ್ಥಗಳನ್ನು ಆರಿಸಿಕೊಂಡು ಕೈಗಾಡಿಯಲ್ಲಿಟ್ಟುಕೊಂಡು ಒಯ್ದು ಕ್ಯಾಶಿಯರ್‌ನ ಮುಂದೆ ಕ್ಯೂದಲ್ಲಿ ನಿಲ್ಲಬೇಕು. ... ದೇವರೇ! ... ಈ ಸ್ಯಾಮ್ ಸತ್ತಾಗಿನಿಂದ ನ್ಯೂಯಾರ್ಕು... ಅಮೇರಿಕಾ... ಬಹುಶಃ ಇಡೀ ಪ್ರಪಂಚವೇ ಕುಸಿದು ಬೀಳುತ್ತಿದೆ. ಅಕ್ಕಪಕ್ಕದ ಸಂಭಾವಿತರೆಲ್ಲ ಕಳೆದು ಹೋಗಿ ಈಗ ಬರೇ ಕಳ್ಳ ಕದೀಮರು ದುರ್ವ್ಯಸನಿಗಳು ತುಂಬಿಹೋಗಿದ್ದಾರೆ ... ಮೂರುಸಲ ಬೆಸ್ಸಿಯ ಪಾಕೆಟ್‌ಪುಸ್ತಕ ಕಳವಾಗಿದೆ .ಹೋಗಿ ಪೋಲೀಸರಿಗೆ ತಿಳಿಸಿದರೆ ಅವರು ನಕ್ಕು ಬಿಡುತ್ತಾರೆ ! ...ರಸ್ತೆಯನ್ನು ದಾಟುವುದಾದರೆ ಜೀವವನ್ನು ಅಂಗೈಯೊಳಗೆ ಇಟ್ಟುಕೊಂಡಿರಬೇಕು ...ಬೆಸ್ಸಿ ಒಂದು ಹೆಜ್ಜೆ ಹೋಗಿ ನಿಂತುಬಿಟ್ಟಳು ...ಯಾವನೋ ಒಬ್ಬ ಆಕೆಗೆ ಊರುಗೋಲನ್ನು ಇಟ್ಟುಕೊಳ್ಳಲು ಉಪದೇಶಿಸಿದ .ಆದರೆ ಆಕೆ ತಾನು ಮುದುಕಿಯಾಗಲೀ ಕುಂಟಿಯಾಗಲೀ ಅಲ್ಲವೆಂದು ನಂಬಿದಾಕೆ .ವಾರೆರಡು ವಾರಗಳಿಗೊಮ್ಮೆ ಉಗುರಿಗೆ ಬಣ್ಣ ಹಾಕುವಾಕಿ ... ಹಿಂದೆ ಸಂಧಿವಾತದ ನೋವಿಲ್ಲದೇ ಆರಾಮವಾಗಿದ್ದಾಗ ಹಾಕಿಕೊಳ್ಳುತ್ತಿದ್ದ ಡ್ರೆಸ್ಸುಗಳನ್ನು ಕಪಾಟಿನಿಂದ ತೆಗೆದುಕೊಂಡು ಧರಿಸಿ ಕನ್ನಡಿಯ ಮುಂದೆ ನಿಂತು ತನ್ನನ್ನು ತಾನೇ ದಿಟ್ಟಿಸುತ್ತಿದ್ದಳವಳು ...

ಆ ಸೂಪರ್‌ಮಾರುಕಟ್ಟೆಯ ಬಾಗಿಲನ್ನು ತೆಗೆಯುವುದು ಮಾತ್ರ ಅವಳಿಂದ ಸಾಧ್ಯವಾಗುತ್ತಿರಲಿಲ್ಲ. ಯಾರಾದರೂ ಬಂದು ಅದನ್ನು ತೆರೆಯುವವರೆಗೆ ಕಾಯಬೇಕು ... ಈ ಸೂಪರ್‌ಮಾರುಕಟ್ಟೆ ಎಂದರೆ ದೆವ್ವದ ಮನೆಯಿದ್ದಂತೆ ! ಅಲ್ಲಿನ ದೀಪಗಳು ಕಣ್ಣುಕುಕ್ಕುತ್ತವೆ .ಸಾಮಾನು ತುಂಬಿದ ಕೈಗಾಡಿ ತಳ್ಳುತ್ತ ಬರುವ ಮಂದಿ ತಮ್ಮ ದಾರಿಯಲ್ಲಿ ಬಂದ ಯಾರನ್ನೂ ನೂಕಿ ಕೆಡವಿದರೂ ಕೆಡವಿದರೇ. ಅಲ್ಲಿನ ಶೆಲ್ಫುಗಳಾದರೋ ಅತೀ ಎತ್ತರಕ್ಕೆ ಅಥವಾ ಅತೀ ಕೆಳಗೆ ಇದ್ದವು .ಕಿವಿಗಡಚಿಕ್ಕುವ ಸದ್ದು...ಹೊರಗಿನ ಸುಡುವ ಉಷ್ಣತೆಗೆ ಹೋಲಿಸಿದರೆ ಹಿಮುಗಟ್ಟಿಸುವಂತಹ ಒಳಗಿನ ಕೊರೆಯುವ ಚಳಿ . ಇಲ್ಲಿಗೆಬಂದು ಹೋಗುತ್ತಿದ್ದರೂ ಬೆಸ್ಸಿಗೆ ನ್ಯುಮೋನಿಯಾ ಆಗದದ್ದೇ ಆಶ್ಚರ್ಯಕರ .ಇವೆಲ್ಲವುಗಳಿಗಿಂತ ಬೆಸ್ಸಿಗೆ ಅನಿಶ್ಚಯತೆಯ ಚಿತ್ರಹಿಂಸೆ ...ನಡುಗುವ ಕೈಯಿಂದ ಒಂದೊಂದೇ ಸಾಮಾನನ್ನು ಎತ್ತಿಕೊಂಡು ಅದರ ಲೇಬಲ್ಲು ಓದುವಳು .ತಕ್ಕೊಳ್ಳುವುದೋ...ಬಿಡುವುದೋ...ಇದು ಎಳೆತನದ ಆಸೆಯಲ್ಲ ...ಮುದಿತನದ ಅನಿಶ್ಚಯತೆ ...ಬೆಸ್ಸಿ ಅಂದುಕೊಂಡದ್ದು ತನ್ನ ಖರೀದಿಗೆ ಮುಕ್ಕಾಲು ಗಂಟೆಯೂ ಬೇಕಾಗುವುದಿಲ್ಲ ಎಂದು. ಆದರೆ ಅವಳ ಖರೀದಿ ಮುಗಿಯುವ ಮೊದಲೇ ಎರಡು ಗಂಟೆ ಕಳೆದುಹೋಗಿರುತ್ತವೆ...ಎಲ್ಲ ಮುಗಿಸಿ ತನ್ನ ಗಾಡಿಯನ್ನು ತಳ್ಳಿಕೊಂಡು ಕ್ಯಾಶಿಯರನ ಬಳಿಗೆ ಬಂದಾಗ ಓಟ್‌ಮೀಲ್ ಮರೆತದ್ದು ನೆನಪಾಗುತ್ತದೆ. ಆಕೆ ಹಿಂದಕ್ಕೆ ಹೋಗಿ ಬರುವಷ್ಟರಲ್ಲಿ ಇನ್ನೊಬ್ಬ ಹೆಂಗಸು ಅವಳ ಸರತಿಯನ್ನು ಕಸಿದುಕೊಂಡು ಬಿಟ್ಟಿದ್ದಳು ... ಕೊನೆಗೆ ಹಣ ಕೊಡುವಾಗ ಇನ್ನೊಂದು ತೊಂದರೆ. ಇದೀಗ ಕೊಟ್ಟ ಬಿಲ್ಲನ್ನು

ಬಿಲ್ಲನ್ನು ಆಕೆ ತನ್ನ ಚೀಲದ ಬಲಗಡೆಯ ಖಾನೆಯಲ್ಲಿ ಇಟ್ಟಿದ್ದರೆ ಈಗ ಅದು ಅಲ್ಲಿ ಇಲ್ಲವೇ ಇಲ್ಲ! ಎಲ್ಲಾ ಕಿತ್ತಿಹಾಕಿ ಹುಡುಕಿದಾಗ ಅದು ಚೀಲದ ಎಡಭಾಗದ ಚಿಲ್ಲರೆ ಹಾಕುವ ಚಿಕ್ಕ ಖಾನೆಯಲ್ಲಿದೆ. ಹೌದು...ತನಗೆ ಇಂಥ ವಿಚಿತ್ರಗಳೆಲ್ಲ ಘಟಿಸುತ್ತವೆಂದರೆ ಯಾರೂ ನಂಬುವುದೇ ಇಲ್ಲ. ಯಾರಿಗಾದರೂ ಹೇಳಿದರೆ ಅವರು ಈಕೆ ಹುಚ್ಚರಾಸ್ಪತ್ರೆ ಸೇರಲು ಸರಿಯಾಗಿದ್ದಾಳೆ ಎಂದುಕೊಳ್ಳುತ್ತಾರೆ.

ಬೆಸ್ಸಿ ಸೂಪರ್‌ಮಾರ್ಕೆಟ್ಟನ್ನು ಪ್ರವೇಶಿಸಿದಾಗ ಇನ್ನೂ ಬಿಸಿಲಿತ್ತು...ಈಗ ಸಂಜೆ ಕವಿಯುತ್ತಿದೆ. ಪೀತವರ್ಣತಾಳಿದ ಸೂರ್ಯ ಹಡ್ಸನ್ ನದಿಯತ್ತ..ನ್ಯೂಜರ್ಸಿಯ ಬೆಟ್ಟಗಳತ್ತ ಜಾರುತ್ತಿದ್ದಾನೆ. ದೊಡ್ಡಹಾದಿಯ ಪಕ್ಕದ ಕಟ್ಟಡಗಳು ಇದುವರೆಗೆ ಹೀರಿಕೊಂಡ ಶಾಖವನ್ನು ಹೊರಹೊಮ್ಮುತ್ತಿವೆ. ನೆಲದಡಿಯ ರೈಲುಮಾರ್ಗಗಳ ಬೆಳಕಿಂಡಿಗಳ ಮೂಲಕ ಕೆಟ್ಟವಾಸನೆಯ ದಟ್ಟ ಹೊಗೆಯು ಏರಿಬರುತ್ತಿತ್ತು.... ಬೆಸ್ಸಿ ಒಂದು ಕೈಯಲ್ಲಿ ಕಾಳುಕಡಿಗಳ ಭಾರವಾದ ಚೀಲವನ್ನು ಮತ್ತು ಇನ್ನೊಂದು ಕೈಯಲ್ಲಿ ಲೆಕ್ಕದ ಪುಸ್ತಕವನ್ನು ಬಿಗಿಯಾಗಿ ಹಿಡಿದುಕೊಂಡು ಈ ದೊಡ್ಡ ರಸ್ತೆಗೆ ಬಂದಳು. ಇಡೀ ಹಾದಿ ಹಿಂದೆಂದಿಗಿಂತಲೂ ಅತ್ಯಂತ ಕೊಳಕು ಮತ್ತು ಭಯಂಕರವಾದದ್ದು ಅನ್ನಿಸಿತು ...ರಸ್ತೆಯ ತುಂಬ ಕಾದ ಡಾಂಬರಿನ - ಗ್ಯಾಸೋಲಿನ್‌ನ -ಕೊಳೆತ ಹಣ್ಣು ಮತ್ತು ನಾಯಿಯಹೇಲಿನ ದುರ್ವಾಸನೆ ಇಡಗಿತ್ತು. ರಸ್ತೆಯ ಮಗ್ಗಲಿನ ಕಾಲ್ದಾರಿಯಲ್ಲೆಲ್ಲ ಹರಿದ ಕಾಗದದ ತುಣುಕುಗಳು ಮತ್ತು ಸಿಗರೇಟಿನ ತುಂಡುಗಳು. ಇವುಗಳ ನಡುವೆ ಅತ್ತಿಂದಿತ್ತ ಕುಪ್ಪಳಿಸುವ ಪಾರಿವಾಳಗಳು ... ದಾರಿಹೋಕರ ಕಾಲಿಗೆ ಸಿಕ್ಕು ಜಬ್ಬಿಯಾಗುವುದನ್ನು ಆ ಪ್ರಾಣಿಗಳು ಅದು ಹೇಗೆ ತಪ್ಪಿಸಿಕೊಳ್ಳುತ್ತಿದ್ದವೋ ... ದೇವರಿಗೇ ಗೊತ್ತು! ... ಸುಡುತ್ತಿದ್ದ ಆಕಾಶದಿಂದ ಹಳದೀ ಧೂಳು ಇಳಿದುಬರುತ್ತಿತ್ತು. ಅಲ್ಲಿ ಒಂದು ಅಂಗಡಿಯ ಮುಂದೆ ... ಕೃತಕ ಹುಲ್ಲಿನಚಾವಣಿ ಇರುವ ಅಂಗಡಿಯ ಮುಂದೆ ... ಗುಂಪುಗೂಡಿದ ಮಂದಿ ತಮ್ಮೊಳಗೇ ಬೆಂಕಿ ಹತ್ತಿ ಉರಿಯುತ್ತಿದೆ ... ಅದನ್ನು ಬೇಗನೇ ನಂದಿಸಬೇಕು ಎನ್ನುವವರಂತೆ ಪಪಾಯಿಹಣ್ಣಿನ -ಅನಾನಸ ಹಣ್ಣಿನ ರಸಗಳನ್ನು ಅವಸರವಸರವಾಗಿ ಸುರಕೊಳ್ಳುತ್ತಿದ್ದರು. ಅವರ ತಲೆಗಳ ಮೇಲೆ ಇಂಡಿಯನ್ನರಂತೆ ಕಾಣುವ ತೆಂಗಿನಕಾಯಿಗಳನ್ನು ಕೊರೆದು ಮಾಡಿದ ಟೋಪಿಗಳು ...ಪಕ್ಕದ ಓಣಿಯಲ್ಲಿ ಕರೀ ಬಿಳೀ ಮಕ್ಕಳು ನಳದ ಪೈಪಿನ ವಾಲ್ವನ್ನು ತೆರೆದು ಒಬ್ಬರ ಮೇಲೊಬ್ಬರು ಗಟಾರದ ಕೊಚ್ಚೆಯನ್ನು ಎರಚಾಡುತ್ತ ಬೆತ್ತಲೆಯಾಗಿ ಕುಣಿದಾಡುತ್ತಿದ್ದವು . ಬಿಸಿಯಾದ ಗಾಳಿತುಂಬಿರುವ ಆ ರಸ್ತೆಯಲ್ಲಿ ಲಾರಿಯೊಂದು ಲೌಡ್‌ಸ್ಪೀಕರ್ ಜೋಡಿಸಿಕೊಂಡು ಅತ್ತ ಇತ್ತ ಓಡಾಡುತ್ತ ಕಿವಿಗಡಚಿಕ್ಕುವಂತೆ ಹಾಡುಗಳನ್ನು ಹಾಕಿಕೊಂಡು -ನಡುನಡುವೆ ಕಿವಿ ಕಿವುಡಾಗುವಂತೆ ಒಬ್ಬ ಯಾವನೋ ಸ್ಪರ್ಧಿಯಬಗ್ಗೆ ಪ್ರಚಾರ ನಡೆಸುತ್ತಿತ್ತು. ...ಚುನಾವಣಾ ಪ್ರಚಾರ! ತಂತಿಯಂತೆ ನಿಮಿರಿನಿಂತ ಕೂದಲಿನ ಹುಡುಗಿಯೊಬ್ಬಳು ಆ ಟ್ರಕ್ಕಿನ ಹಿಂಭಾಗದಲ್ಲಿ ನಿಂತು ಕರಪತ್ರಗಳನ್ನು ಎಸೆಯುತ್ತಿದ್ದಳು ....

ಬೆಸ್ಸಿ ಇದನ್ನೆಲ್ಲ ಅನುಭವಿಸಿ -ರಸ್ತೆಯನ್ನು ದಾಟಿ, ಲಿಫ್ಟ್‌ಗಾಗಿ ಕಾಯ್ದು ಹತ್ತಿ, ಐದನೆಯ ಮಹಡಿಯೊಳಗೆ ಅದರೊಳಗಿಂದ ಹೊರಬಿದ್ದು.... ಅಂತೂ ತನ್ನ ಮನೆಯ ಮುಚ್ಚಿದ ಬಾಗಿಲಿನ ಮುಂದೆ ಬಂದು ನಿಲ್ಲುವಷ್ಟೊತ್ತಿಗೆ ಬೆಸ್ಸಿಯದೆಲ್ಲ ಮುಗಿದು ಹೋಗಿತ್ತು. ಕಿರಾಣಿ

ಸಾಮಾನುಗಳನ್ನು ಹೊಸ್ತಿಲಿನ ಬಳಿ ಇಟ್ಟು ಬೆಸ್ಸಿ ಬೀಗದ ಕೈಯನ್ನು ಹುಡುಕಿದಳು ... ಆಕೆ ಉಗುರು ಕೆರೆಯುವ ಅರದಂಥದನ್ನು ಉಪಯೋಗಿಸಿ ತಾನು ಬೀಗದ ರಂಧ್ರದಲ್ಲಿ ತುಂಬಿದ್ದ ಮೇಣವನ್ನು ತೆಗೆದಳು ...ಬೀಗದ ರಂಧ್ರದಲ್ಲಿ ಬೀಗದ ಕೈಯನ್ನು ತೂರಿಸಿ ಅದನ್ನು ತಿರುವಿದಳು. ...ತಕೋ! ಬೀಗದ ಕೈ ಮುರಿದು ಅದರ ಹೊರಗಿನ ತುದಿ ಬೆಸ್ಸಿಯ ಕೈಯಲ್ಲಿ ಉಳಿಯಿತು ! ಆಕೆ ಇದೀಗ ದೊಡ್ಡ ಗಂಡಾಂತರದಲ್ಲಿ ಸಿಕ್ಕಿಹಾಕಿಕೊಂಡೆನೆಂದು ಗಾಬರಿಗೊಂಡಳು .ಕಟ್ಟಡದಲ್ಲಿನ ಉಳಿದ ಮನೆಗಳ ಹೆಚ್ಚಿನ ಬೀಗದ ಕೈಗಳು ಕಟ್ಟಡದ ಸುಪರಿಂಟೆಂಡೆಂಟ್‌ನ ಕಚೇರಿಯಲ್ಲಿ ತೂಗುಬಿದ್ದಿದ್ದವು .ಆದರೆ ಈಕೆಗೆ ಯಾರಮೇಲೂ ನಂಬಿಕೆ ಇಲ್ಲ ....ಕೆಲವೇ ದಿನಗಳ ಹಿಂದೆ ಎಂಥಾ ಮಾಸ್ಟರ್ ಬೀಗದಕೈಯಿಂದಲೂ ತೆಗೆಯಲಾಗದಂಥ ಹೊಸಬೀಗವೊಂದನ್ನು ಹಾಕಿಸಿದ್ದಳು .ಅದರ ಇನ್ನೊಂದು ಬೀಗದ ಕೈಯನ್ನೂ ಸೂಪರಿಂಟೆಂಡೆಂಟ್‌ನಿಗೆ ಕೊಡದೆ ತನ್ನ ಬಳಿಯೇ ಇರಿಸಿಕೊಂಡಿದ್ದಳು .ಅದು ಈಗ ಅಲ್ಲಿ ಒಳಗಡೆ ಟೇಬಲ್ಲಿನ ಡ್ರಾವಿನಲ್ಲಿ ಕೂತಿದೆ!...ಇಲ್ಲಿ ಈಕೆಯ ಕೈಯೊಳಗೆ ಮುರಿದ ಇನ್ನೊಂದು ಬೀಗದಕೈನ ತುಣುಕು! 'ಆತು ಮುಗಧಂಗಾತು' ಅಂತ ಬೆಸ್ಸಿ ಜೋರಾಗಿಯೇ ಅಂದುಕೊಂಡಳು .

ಯಾರಿದ್ದಾರೆ ಆಕೆಗೆ ಸಹಾಯ ಮಾಡಲಿಕ್ಕೆ ?ಪಕ್ಕದ ಮನೆಗಳವರು ದಾಯಾದಿಗಳು... ಬದ್ಧ ವೈರಿಗಳು !ಆ ಸುಪರಿಂಟೆಂಡೆಂಟ್‌ನೋ ಈಕಿಗೆ ಇಂಥಾದ್ದು ಏನಾದರೂ ಆಗಲಿ ಎಂದು ಕಾಯ್ದು ಕೂತವನು .ಬೆಸ್ಸಿಯ ಗಂಟಲು ಹಿಚಿಕಿದಂತಾಗಿ ಅವಳಿಗೆ ಅಳುವುದು ಕೂಡ ಕಷ್ಟಸಾಧ್ಯವೆನಿಸಿತು . ಈ ಹೊಸ ತೊಂದರೆಗಳಿಗೆ ತನ್ನನ್ನು ಸಿಕ್ಕಿಸಿ ಹಾಕಿದ ತನ್ನ ವೈರಿಯನ್ನು ಹುಡುಕುವವಳಂತೆ ಬೆಸ್ಸಿ ಸುತ್ತಮುತ್ತ ನೋಡಿದಳು . ಬೆಸ್ಸಿ ಬಹಳದಿನಗಳಿಂದ ಸಾಯಲು ಸಿದ್ಧಳಾದವಳಂತೆಯೇ ಇದ್ದಳು .ಆದರೆ ... ಮೆಟ್ಟಿಲುಗಳ ಮೇಲೆಯೋ ...ರಸ್ತೆಯಮೇಲೋ ಸಾಯುವುದೆಂದರೆ ... ಮಹಾಕಷ್ಟ ! ಎಷ್ಟು ಹೊತ್ತು ಹಿಡಿಯುತ್ತದೋ ಏನೋ ಅದಕ್ಕೆ? ಯಾರಿಗೆ ಗೊತ್ತು! ....ಮನಸಿನೊಳಗೇ ಲೆಕ್ಕ ಹಾಕತೊಡಗಿದಳು ....ಬೀಗ ತಯಾರಿಸುವ ಅಂಗಡಿಗಳು ಇನ್ನೂ ತೆರೆದಿರಬಹುದೇ ? ತೆರೆದಿದ್ದರಾದರೂ ಏನು ಮ್ಹಾಡುವುದು ? ...ಆ ಬೀಗದಕೈ ಮಾಡುವವನು ಏನು ನೋಡಿ ಕೈಯನ್ನು ತಯಾರುಮಾಡಬೇಕು ? ಅವನು ತನ್ನ ಉಳಿ ಚಾಣ ಅರಗಳನ್ನು ತೆಗೆದುಕೊಂಡು ಇಲ್ಲಿಗೇ ಬರಬೇಕು . ಆ ವಿಶೇಷ ಬೀಗಗಳನ್ನು ತಯಾರಿಸುವ ಕಂಪನಿಯ ಮೆಕ್ಯಾನಿಕ್ಕನೇ ಈ ಕೆಲಸಕ್ಕೆ ಬರಬೇಕು .ಇದೆಲ್ಲ ಹೋಗಲಿ...ಇದಕ್ಕೆಲ್ಲ ಖರ್ಚುಮಾಡಲು ಆಕೆಯ ಹತ್ತಿರ ಹಣವಾದರೂ ಇದೆಯೇ ?ಅದೂ ಇಲ್ಲ. ಬೆಸ್ಸಿ ಎಂದೂ ತನ್ನ ಖರೀದಿಗಿಂತ ಹೆಚ್ಚಿಗೆ ಹಣವನ್ನು ಇಟ್ಟುಕೊಂಡವಳೇ ಅಲ್ಲ ... ಸೂಪರ್‌ಮಾರ್ಕೆಟ್ಟಿನ ಕ್ಯಾಶಿಯರ್ ಕೊಟ್ಟ ಚಿಲ್ಲರೆ ಹಣ ಇಪ್ಪತ್ತೂ ಚಿಲ್ಲರೆ ಸೆಂಟುಗಳಷ್ಟು ದುಡ್ಡು ಮಾತ್ರ ಆಕೆಯ ಹತ್ತಿರ ಇದೆ.'ಅವ್ವಯ್ಯಾ...! ...ಈ ಬದುಕು ಸಾಕವಾ ...'.ಬೆಸ್ಸಿ , ತನಗೆ ಈಗಾಗಲೇ ಅರ್ಥಮರ್ಥ ಮರೆತುಹೋಗಿದ್ದ ತನ್ನ ಮಾತೃಭಾಷೆ ಯಿದ್ದಿಶ್‌ನಲ್ಲಿ ಮಾತಾಡಿ ತನಗೆ ತಾನೇ ಆಶ್ಚರ್ಯಪಟ್ಟಳು .

ಅನುಮಾನಿಸಿ ಅನುಮಾನಿಸಿ ಬೆಸ್ಸಿ ಕೊನೆಗೆ ಕೆಳಗೆ ಇಳಿದು ಹಾದಿಗೆ ಬಂದಳು ... ಪ್ರಾಯಶಃ ಯಾವುದಾದರೂ ಕೀಲೀಕೈಮಾಡುವ ಸಣ್ಣ ಕಮ್ಮಾರನ ಅಂಗಡಿ ತೆರೆದಿದ್ದರೂ

ತೆರೆದಿರಬಹುದು .... ಹೌದು ...ಇಲ್ಲಿಯೇ ಸಮೀಪದಲ್ಲಿ ಅಂತಹದೊಂದು ಅಂಗಡಿ ಇದ್ದದ್ದು ಬೆಸ್ಸಿಯ ನೆನಪಿಗೆ ಬಂದಿತು. ಹಾಗೆ ನೋಡಿದರೆ ಬೇರೆಯವರಿಗೂ ಇಂಥ ಸಮಸ್ಯೆ ಒಮ್ಮಿಲ್ಲೊಮ್ಮೆ ಬಂದೇ ಬರುತ್ತಿರುತ್ತದೆ. ಅಂಥವರಿಗಾಗಿ ಇಂಥ ಅಂಗಡಿ ಸಮೀಪದಲ್ಲಿ ಇದ್ದೇ ಇರಬೇಕು ....ಆದರೆ ಈ ಕಿರಾಣಿಯ ಚೀಲಗಳನ್ನು ಏನುಮಾಡುವುದು ? ಚೀಲಗಳು ಹೊತ್ತುಕೊಂಡು ಒಯ್ಯಲಾರದಷ್ಟು ಭಾರವಾಗಿದ್ದವು. ಬೇರೆ ದಾರಿ ಇಲ್ಲದೇ ಚೀಲಗಳನ್ನು ಅಲ್ಲಿಯೇ ಬಾಗಿಲಮುಂದೆ ಇಟ್ಟುಬಿಟ್ಟು ಹೊರಟಳು . .. ಹೇಗಿದ್ದರೂ ಕದಿಯುವವರೇ ...ಎಂದು ಬೆಸ್ಸಿ ತನಗೆ ತಾನೇ ಅಂದುಕೊಂಡಳು. ಯಾರಿಗೆ ಗೊತ್ತು... ಇವರೆಲ್ಲಾ ಸೇರಿಯೇ ಹೀಗೆ ಮಾಡಿದ್ದರೂ ಮಾಡಿರಬಹುದು ... ಈ ಅಕ್ಕಪಕ್ಕದವರು ಬೀಗಕ್ಕೆ ಏನೋ ಮಾಡಿ ತಾನು ಮನೆಯೊಳಗೆ ಹೋಗದಂತೆ ಮಾಡಿರಬೇಕು ... ತಾನು ಮನೆಯೊಳಗೆ ಹೋಗಲು ಸಾಧ್ಯವಾಗದಿದ್ದರೆ ಇವರಿಗೆ ಕದಿಯಲು ಸುಲಭವಾಗುತ್ತದಲ್ಲ!

ಇಳಿದು ಹೋಗುವುದಕ್ಕಿಂತ ಮೊದಲು ಬೆಸ್ಸಿ ಬಾಗಿಲಿಗೆ ಕಿವಿ ಹಚ್ಚಿ ಕೇಳಿದಳು .... ಏನೋ ಗುರ್ ಗುರರ್.. ಅನ್ನುವ ಸದ್ದೊಂದು ಮಾತ್ರ ಕೇಳುತ್ತಿತ್ತು. ನಿರಂತರವಾದ ಸದ್ದು. ಎಲ್ಲಿಂದ ಮತ್ತು ಹೇಗೆ ಈ ಸದ್ದು ಬರುತ್ತಿದೆ ಎನ್ನುವುದು ಮಾತ್ರ ಬೆಸ್ಸಿಗೆ ಬಗೆಹರಿಯಲಿಲ್ಲ. ಒಮ್ಮೊಮ್ಮೆ ಗಡಿಯಾರದ ಟಿಕ್-ಟಿಕ್‌ದಂತೆ ಕೇಳಿದರೆ ಇನ್ನೊಮ್ಮೆ ಗುಂಯ್ ಅಂದಂಗೆ ... ಮತ್ತೆ ಯಾರೋ ನರಳಿದಹಾಗೆ ... ಏನೋ ಗೋಡೆಯೊಳಗೋ ಅಥವಾ ನಳದ ಪೈಪಿನೊಳಗೋ ಅಡಗಿಕೊಂಡಿದೆ. ... ಆಯಿತಿನ್ನು ... ಈ ಸಾಮಾನುಗಳಿಗೆ ಎಳ್ಳುನೀರು ಬಿಟ್ಟಂತೆಯೇ ... ರೆಫ್ರಿಜರೇಟರಿನಲ್ಲಿ ಇರಬೇಕಾದವು ಈ ಝಳದಲ್ಲಿ ಇದ್ದರೆ ಇನ್ನೇನು! ಬೆಣ್ಣೆ ಕರಗಿ ಸೋರಿಹೋಗುತ್ತದೆ... ಹಾಲು ಕೆಟ್ಟು ಹೋಗುತ್ತದೆ... 'ಇದು ನನಗ ಶಿಕ್ಷಾ! ... ನಾನು ಪಾಪಿ ' ಎಂದು ಬೆಸ್ಸಿ ತನಗೆ ತಾನೇ ಗೊಣಗಿಕೊಂಡಳು .ಮಗ್ಗಲಿನ ಮನೆಯವನೊಬ್ಬ ಲಿಫ್ಟಿನಿಂದ ಕೆಳಗೆ ಹೊರಡಲು ತಯಾರಾಗಿದ್ದ. ಬೆಸ್ಸಿ ಅವನಿಗೆ ಒಂದಿಷ್ಟು ನಿಲ್ಲಲಿಕ್ಕೆ ಕೈಮಾಡಿದಳು. ... ಹಾಂ.. ಬಹಳಮಾಡಿ ಅವನೂ ಒಬ್ಬ ಕಳ್ಳನಿರಬಹುದು. ಲಿಫ್ಟು ನಡುವೆಯೇ ನಿಲ್ಲಿಸಿ ಆಕ್ರಮಣ ಮಾಡಬಹುದು ... ಲಿಫ್ಟು ಕೆಳಗೆ ಇಳಿದು ಆ ಮನುಷ್ಯನು ಇವಳಿಗಾಗಿ ಬಾಗಿಲು ತೆರೆದನು . ಬೆಸ್ಸಿ ಧನ್ಯವಾದಗಳನ್ನು ಹೇಳಬೇಕೆಂದಾಕಿ ವೈರಿಗಳಿಗೆಲ್ಲ ಧನ್ಯವಾದಗಳನ್ನು ಹೇಳಲಾಗುತ್ತದೆಯೆ... ಇದೆಲ್ಲಾ ದೊಡ್ಡಮೋಸಕ್ಕಾಗಿ ಮಾಡುವ ಸಣ್ಣ ಟ್ರಿಕ್ಕುಗಳು ಎಂದುಕೊಂಡು ಸುಮ್ಮನೇ ಹೊರಟುಬಿಟ್ಟಳು .

ಬೆಸ್ಸಿ ರಸ್ತೆಗೆ ಇಳಿಯುವಷ್ಟೊತ್ತಿಗೆ ರಾತ್ರಿಯ ಕತ್ತಲು ಹರಡಿತ್ತು .ಗಟಾರಗಳಲ್ಲಿ ಕೊಳಚೆ ತುಂಬಿ ಹರಿಯುತ್ತಿತ್ತು . ಆ ಕಪ್ಪು ಕೆರೆಯಂತಹ ನೀರಿನಲ್ಲಿ ಪ್ರತಿಫಲನಗೊಂಡ ಬೀದಿಯ ದೀಪಗಳ ಮಿಣುಕು ಕಾಣುತ್ತಿತ್ತು .ಮತ್ತೆ ಸಮೀಪದಲ್ಲೆಲ್ಲೋ ಬೆಂಕಿ ಹತ್ತಿಕೊಂಡಂತಿತ್ತು .... ಅಳುತ್ತಿರುವಂತಿರುವ ಸೈರನ್ನಿನ ಕೂಗು ಮತ್ತು ಅಗ್ನಿಶಾಮಕ ಇಂಜನ್ನಿನ ಗಂಟೆಯ ಸದ್ದು ಕೇಳಿಸಿದವು .ಬೆಸ್ಸಿಯ ಬೂಟುಗಳು ಒದ್ದೆಯಾಗಿದ್ದವು .ಆಕೆ ದೊಡ್ಡರಸ್ತೆಗೆ ಬಂದಳು .... ಅಲ್ಲಿನ ಶಾಖ ಒಮ್ಮೆಲೆ ಕಾದ ಹಂಚಿನಹಾಗೆ ಬೆಸ್ಸಿಯ ಚರ್ಮವನ್ನು ತಟ್ಟಿತು . ಬೆಸ್ಸಿಗೆ ಹಗಲಿನಲ್ಲೇ ದೃಷ್ಟಿಯ ತೊಂದರೆ ...ರಾತ್ರಿಯಲ್ಲಿ ಆಕೆ ಸಂಪೂರ್ಣ ಕುರುಡಳೇ! ಅಂಗಡಿಗಳಲ್ಲಿ ಸಾಕಷ್ಟು ಬೆಳಕೇನೋ ಇದ್ದಿತು .ಆದರೆ ಅಲ್ಲಿ

ಮಾರಾಟಕ್ಕೆ ಏನನ್ನು ಇಟ್ಟಿದ್ದಾರೆ ಅನ್ನುವುದು ಆಕೆಗೆ ಏನೂ ಕಾಣುತ್ತಿದ್ದಿಲ್ಲ ....ಅಲ್ಲಿ ಅಡ್ಡಾಡುವವರು ಬೆಸ್ಸಿಗೆ ಢಿಕ್ಕಿ ಹೊಡೆದರು ....ಆಕೆ ತನ್ನ ಕೈಯಲ್ಲಿ ಒಂದು ಬೆತ್ತವಿಲ್ಲ ವಲ್ಲಾ...ಬೆತ್ತವಿದ್ದಿದ್ದರೆ ಸರಿಯಾಗುತ್ತಿತ್ತು ...ಎಂದು ಪರಿತಪಿಸಿದಳು . ಅಂತೂ ಹಾಗೆಯೇ ಅಂಗಡಿಗಳ ಕಿಡಕಿಗಳ ಸಮೀಪದೊಳಗೇ ನಡೆದಳು ... ಒಂದು ಔಷಧದ ಅಂಗಡಿ..ಆಮೇಲೆ ಒಂದು ಬೇಕರೀ ... ಇದು ರಗ್ಗುಗಳ ಅಂಗಡಿ...ಇದೀಗ ಅಂತ್ಯ ಸಂಸ್ಕಾರದ ಸಾಮಾನುಗಳ ಅಂಗಡಿ ದಾಟಿತು ....ಆದರೆ ಕಬ್ಬಿಣ -ಮೊಳೆ -ಸುತ್ತಿಗೆ ಇತ್ಯಾದಿಗಳ ಹಾರ್ಡವೇರ್ ಅಂಗಡಿ ಒಂದೂ ಕಾಣಿಸಲಿಲ್ಲ . ಬೆಸ್ಸಿ ಹಾಗೆಯೇ ನಡೆಯುತ್ತ ಹೋದಳು ...ಆಕೆಯ ಶಕ್ತಿಯೆಲ್ಲವೂ ಮುಗಿದು ಹೋಗಿತ್ತು . ಆದರೂ ಬಿಡುವಂತಿಲ್ಲ . ಆಕೆ ನಿಶ್ಚಯಿಸಿಬಿಟ್ಟಿದ್ದಳು -ಪ್ರಯತ್ನವನ್ನು ಬಿಡುವಂತಿಲ್ಲ ...ಹೌದು ಮತ್ತೆ ...ಬೀಗದ ಕೈಯನ್ನು ಕಳೆದುಕೊಂಡವರು ಏನು ಮಾಡಬೇಕು? ...ಅವರು ಬದುಕುವ ಆಸೆಯನ್ನು ಬಿಟ್ಟು ಸಾಯಬೇಕೆ ? ... ಪ್ರಾಯಶಃ ಅವರು ಪೋಲೀಸರಿಗೆ ತಿಳಿಸುವರೋ ಏನೋ...ಇಂಥ ತೊಂದರೆಗಳು ಬಂದವರಿಗೆ ಸಹಾಯಮಾಡಲು ಸಂಸ್ಥೆಗಳು ಇದ್ದಿರಬಹುದು . ಆದರೆ ಅವು ಎಲ್ಲಿದ್ದಾವು...?

ಇಲ್ಲೆಲ್ಲೊ ಏನೋ ಅಪಘಾತವಾಗಿರಬೇಕು .ಕಾಲುದಾರಿಯ ಮೇಲೆಲ್ಲ ಗುಂಪುಗೂಡಿದ ಜನ ಏನನ್ನೋ ದಿಟ್ಟಿಸುತ್ತಿದ್ದಂತಿತ್ತು .ಪೋಲೀಸರ ಕಾರುಗಳು ಆಂಬುಲನ್ಸ್‌ಗಳು ದಾರಿಯನ್ನು ಬಂದು ಮಾಡಿದ್ದವು. ಯಾವನೋ ಒಬ್ಬ ಝಾಲರಿಯಿಂದ ಡಾಂಬರನ್ನು ಸುರಿಯುತ್ತಿದ್ದ... ಬಹುಶಃ ಅವನು ಅಪಘಾತದ ರಕ್ತದ ಕಲೆಗಳನ್ನು ಅಳಿಸುತ್ತಿರಬಹುದು .ಯಾಕೋ ಏನೋ ಬೆಸ್ಸಿಗೆ ಆ ಎಲ್ಲ ನೋಟಕರ ಕಣ್ಣುಗಳು ಎಂಥದೋ ತೃಪ್ತಿಯನ್ನು ತೋರುತ್ತಿರುವಂತೆ ಹೊಳೆಯುತ್ತಿವೆ ಅನ್ನಿಸಿತು ....ಇವರೆಲ್ಲ ಬೇರೆಯವರ ಕಷ್ಟದಲ್ಲಿ ಸುಖಕಾಣುವ ಮಂದಿ ಅಂದುಕೊಂಡಳು . ಯಾರು ಬಲ್ಲರು ...ಈ ನರಕ ಸದೃಶವಾದ ಪಟ್ಟಣದಲ್ಲಿ ಜನರಿಗೆ ಒದಗುವ ಸಂತಸದ ಕ್ಷಣಗಳು ಇಂಥದೇ ಆಗಿರಬಹುದು ... ಇನ್ನು ಇಂಥ ಪಟ್ಟಣದಲ್ಲಿ ನನಗೆ ಸಹಾಯಮಾಡಲು ಯಾರು ತಾನೇ ದೊರೆತಾರು !?

ಚರ್ಚೊಂದರ ಮುಂದೆ ಬಂದಳು .ಮೆಟ್ಟಿಲುಗಳು ...ಅವುಗಳ ಕೊನೆಗೆ ಮುಚ್ಚಿಕೊಂಡಿರುವ ಬಾಗಿಲು...ಆ ಬಾಗಿಲನ್ನು ರಕ್ಷಿಸುವ ಕಟಾಂಜನ! ನೆರಳು ಬಿದ್ದು ಅಲ್ಲೆಲ್ಲ ಕತ್ತಲಾಗಿತ್ತು .ಈಗ ಬೆಸ್ಸಿಗೆ ಕುಳಿತುಕೊಳ್ಳುವುದನ್ನು ಬಿಟ್ಟು ಬೇರೆ ಏನೂ ಮಾಡಲು ಸಾಧ್ಯವಿರಲಿಲ್ಲ. ಆಕೆಯ ಮೊಳಕಾಲುಗಳು ಥರಗುಟ್ಟುತ್ತಿದ್ದವು .ಆಕೆಯ ಬೂಟುಗಳು ಬೆರಳುಗಳ ಭಾಗದಲ್ಲಿ ಮತ್ತು ಹಿಮ್ಮಡಿಯ ಮೇಲ್ಭಾಗದಲ್ಲಿ ಒತ್ತುತ್ತಿದ್ದವು .ಅವಳ ಒಳ ಉಡುಪು ಮಾಂಸದೊಳಗೆ ಒತ್ತಿ ನೋಯುತ್ತಿತ್ತು ....ಹೂಂ...ಇಂದಿನ ರಾತ್ರಿ ದುಷ್ಟಶಕ್ತಿಗಳೆಲ್ಲ ನನ್ನ ಮೇಲೆ ಮುಗಿಬಿದ್ದಿವೆ.... ಎಂದುಕೊಂಡಳು. ಹಸಿವು ಮತ್ತು ತಲೆಸುತ್ತು ಗಳೆರಡೂ ಆಕೆಯನ್ನು ಮುತ್ತುತ್ತಿದ್ದವು .ಹುಳಿ ಹುಳಿ ದ್ರವವೊಂದು ಆಕೆಯ ಬಾಯಿಗೆ ಏರಿಬಂತು. 'ಅಯ್ಯಪ್ಪ ಸತ್ತೆ...'.... ಅವಳಿಗೆ ಒಮ್ಮೆಲೇ ಯಿದ್ದಿಶ್ ಗಾದೆಯಮಾತೊಂದು ನೆನಪಿಗೆ ಬಂತು. 'ಯಾವುದರಲ್ಲಿಯೂ ಭರವಸೆ ಇಲ್ಲದವನು ಕನ್ಫೆಶನ್ ಮಾಡಿಕೊಳ್ಳದೇ ಸಾಯುತ್ತಾನೆ' ...ಬೆಸ್ಸಿ ತನ್ನ ಮೃತ್ಯು ಪತ್ರದ ಬಗೆಗೆ ಯೋಚಿಸುವುದನ್ನು ಕೂಡ ನಿರ್ಲಕ್ಷಿಸಿದ್ದಳು .

ಬೆಸ್ಸಿ ತೂಕಡಿಸುತ್ತಿದ್ದಿರಬೇಕು. ಯಾಕೆಂದರೆ ಆಕೆ ಕಣ್ಣು ತೆರೆದಾಗ ಮಧ್ಯರಾತ್ರಿಯ ಸ್ತಬ್ಧತೆ ಮತ್ತು ನಿರ್ಜನವಾದ ದಾರಿಗಳು ಮತ್ತು ಕತ್ತಲೆಗಳು ಒಮ್ಮೆಲೆ ಆಕೆಯ ಗಮನಕ್ಕೆ ಬಂದವು. ಅಂಗಡಿಗಳ ಕಿಡಕಿಗಳಿಂದ ಯಾವ ಬೆಳಕೂ ಹೊರಹೊಮ್ಮುತ್ತಿರಲಿಲ್ಲ. ಹಗಲಿನ ಶಾಖವೆಲ್ಲ ಹಾರಿಹೋಗಿ ಈಗ ಆಕೆಯ ಬಟ್ಟೆಗಳ ಒಳಗಡೆಯೆಲ್ಲ ಚಳಿ ತುಂಬಿಕೊಂಡಂತೆ ಆಗಿತ್ತು. ಒಮ್ಮೆಲೇ ಆಕೆಗೆ ತನ್ನ ಲೆಕ್ಕದ ಪುಸ್ತಕವನ್ನು ಯಾರೋ ಕದ್ದಿದ್ದಾರೆ ಅನ್ನಿಸಿತು. ಆದರೆ ಅದು ಕೆಳಗಿನ ಮೆಟ್ಟಲಿನ ಮೇಲೆ ಬಿದ್ದಿತ್ತು. ಬಹುಶಃ ಜಾರಿ ಬಿದ್ದಿರಬೇಕು. ಅದನ್ನು ತೆಗೆದುಕೊಳ್ಳಬೇಕೆಂದು ಕೈಚಾಚ ಹೋದರೆ ಅದು ಮರಗಟ್ಟಿ ಹೋಗಿದೆ! ಗೋಡೆಗಾನಿಸಿದ ತಲೆ ಕಲ್ಲಿನಹಾಗೆ ಭಾರವಾಗಿದೆ. ಕಾಲುಗಳೋ ಕಟ್ಟಿಗೆಯಂತಾಗಿವೆ. ಬೆಸ್ಸಿಗೆ ತನ್ನ ಕಿವಿಯೊಳಗೆಲ್ಲ ನೀರು ತುಂಬಿಕೊಂಡಿರುವಂತೆನಿಸಿತು ... ರೆಪ್ಪೆ ಅಗಲಿಸಿ ಚಂದ್ರನನ್ನು ನೋಡಿದಳು ... ಅದು ಚಪ್ಪಟೆಯಾದ ಆಕಾಶದ ಮಾಳಿಗೆಯ ಕೆಳಗಡೆಗೆ, ಒಂದು ಹಚ್ಚಗಿನ ನಕ್ಷತ್ರದ ಸಮೀಪ ಹಾರಾಡುತ್ತಿದ್ದಂತಿತ್ತು. ಬೆಸ್ಸಿ ಬಾಯಿತೆರೆದು ದಿಟ್ಟಿಸಿದಳು. ಆಕಾಶವೆನ್ನುವದೊಂದು... ಮತ್ತು ಅದರಡಿಗೆ ಈ ಚಂದ್ರ ನಕ್ಷತ್ರಗಳೆಲ್ಲ ಇವೆ ಅನ್ನುವುದು ಅವಳಿಗೆ ಮರೆತೇ ಹೋಗಿತ್ತು. ಅನೇಕ ವರ್ಷಗಳಿಂದ ಬೆಸ್ಸಿ ಮೇಲಕ್ಕೆ ನೋಡಿಯೇ ಇರಲಿಲ್ಲ. ಅವಳ ನೋಟ ಬರೀ ಕೆಳಗಡೆಗೆ ! ... ಸಂಚುಕೋರರು ಒಳಗಡೆಗೆ ಇಣುಕಿ ನೋಡಬಾರದೆಂದು ಅವಳು ಮನೆಯ ಕಿಡಕಿಗಳಿಗೆಲ್ಲ ಬಟ್ಟೆಯಪರದೆ ಇಳಿಬಿಟ್ಟು ಮುಚ್ಚಿಬಿಟ್ಟಿದ್ದಳು. ಈಗ... ಹಾಂ... ಹೌದು... ಆಕಾಶವಿದೆಯೆಂದ ಮೇಲೆ ಪ್ರಾಯಶಃ ಸ್ವರ್ಗ... ದೇವರು ಮತ್ತು ದೇವದೂತರು ಎಲ್ಲ ಇರಬಹುದಲ್ಲವೆ ! ... ಹಾಂ ... ಇರಲೇಬೇಕಲ್ಲ. ಇಲ್ಲವಾದರೆ ಅವಳ ಗತಿಸಿದ ತಂದೆ ತಾಯಿಗಳ ಆತ್ಮಗಳೆಲ್ಲ ಎಲ್ಲಿ ಇರಬೇಕು ... ಹಾಂ... ಮತ್ತೆ... ಈಗ... ಸ್ಯಾಮ್ ಎಲ್ಲಿದ್ದಾನೆ ?

ಬೆಸ್ಸಿ ಎಲ್ಲ ಆಚರಣೆಗಳನ್ನು ನಿರ್ಲಕ್ಷಿಸಿ ಬಿಟ್ಟಿದ್ದಳು. ಆಕೆ ಸ್ಯಾಮ್‌ನ ಸಮಾಧಿಗೆ ಹೋಗುತ್ತಿರಲೇ ಇಲ್ಲ. ಅವನ ತಿಥಿಯ ದಿವಸ ಕೂಡ ಒಂದು ಮೇಣದಬತ್ತಿಯನ್ನು ಹಚ್ಚುತ್ತಿರಲಿಲ್ಲ. ಅವಳು ಕ್ಷುಲ್ಲಕಗಳ ರಂಪದ ಆಳಕ್ಕೆ ಇಳಿದು ಮೇಲಿನ ಶಕ್ತಿಗಳನ್ನು ಮರೆತೇ ಬಿಟ್ಟಿದ್ದಳು. ... ಇಷ್ಟೆಲ್ಲ ವರ್ಷಗಳ ನಂತರ ಇಂದು ಬೆಸ್ಸಿಯ ಮನಸ್ಸಿಗೆ ಮೊಟ್ಟಮೊದಲ ಬಾರಿಗೆ ಪ್ರಾರ್ಥನೆ ಹೇಳಬೇಕೆಂದು ಅನ್ನಿಸಿತು. ಕರುಣೆಗೆ ಅರ್ಹಳಲ್ಲದಿದ್ದರೂ ತನ್ನ ಬಗ್ಗೆ ಭಗವಂತನಲ್ಲಿ ಕರುಣೆ ಇದ್ದರೂ ಇದ್ದೀತು ಅಂದುಕೊಂಡಳು ... ಅಲ್ಲಿ ಮೇಲ್ಗಡೆಗೆ ತನ್ನ ಅಪ್ಪ ಅಮ್ಮಂದಿರು ತನ್ನ ಪರವಾಗಿ ಮಧ್ಯಸ್ತಿಕೆ ವಹಿಸಬಹುದು ಅಂದುಕೊಂಡಳು. ... ಇದೀಗ ಯಾವ ಯಾವವೋ ಹಿಬ್ರೂಶಬ್ದಗಳು ಅವಳ ನಾಲಗೆಯ ತುದಿಗೆ ಜೋತುಬಿದ್ದವು... ಆದರೆ ಅವಳಿಗೆ ಅವೊಂದೂ ನೆನಪಿನಲ್ಲಿ ಇದ್ದಂತೆ ತೋರಲಿಲ್ಲ... ಅವಳಿಗೆ ಕೊನೆಗೆ ನೆನಪಾದದ್ದು ಕೇಳು ... ಓ ಇಸ್ರೇಲ್ !... ಆದರೆ ಮುಂದಿನ ಶಬ್ದಗಳೇನು...? ...'ದೇವರೇ ನನ್ನನ್ನು ಕ್ಷಮಿಸು... ನಾನು ಪಾಪಿಷ್ಠೆ. ನಾನು ಶಿಕ್ಷಾರ್ಹಳು ...' ಎಂದು ಬೆಸ್ಸಿ ನುಡಿದಳು.

ಇನ್ನಷ್ಟು ಸ್ತಬ್ಧತೆ ಮತ್ತು ಇನ್ನಷ್ಟು ಥಂಡಿ ತುಂಬಿಕೊಂಡವು. ಟ್ರಾಫಿಕ್ ಲೈಟುಗಳು

ಕೆಂಪು ಇದ್ದವು ಹಸಿರು ಆದವು . ಆದರೆ ಯಾವ ವಾಹನವೂ ದಾಟಿಹೋಗಲಿಲ್ಲ. ಅದೆಲ್ಲಿಂದಲೋ ಒಬ್ಬ ನಿಗ್ರೋ ಬಂದು ಕಾಣಿಸಿಕೊಂಡ. ಬೆಸ್ಸಿಯ ಸಮೀಪದಲ್ಲಿಯೇ ನಿಂತು ಆಕೆಯತ್ತ ನೋಡತೊಡಗಿದ . ಆಮೇಲೆ ಆತ ಹೊರಟುಹೋದ . ಬೆಸ್ಸಿಗೆ ತನ್ನ ಪರ್ಸಿನಲ್ಲಿ ಬಹುಮುಖ್ಯವಾದ ಕಾಗದ ಪತ್ರಗಳಿರುವುದು ಗೊತ್ತಿದ್ದರೂ ಆಕೆಗೆ ಮೊಟ್ಟಮೊದಲಬಾರಿಗೆ - ಈ ಸಲ - ಅವು ಮುಖ್ಯವಾದವುಗಳೆನ್ನಿಸಲಿಲ್ಲ . ಸ್ಯಾಮ್ ಸಾಕಷ್ಟು ಬಿಟ್ಟುಹೋಗಿದ್ದ. ಆದರೆ ಈಕೆಗೆ ಅದು ತನಗೆ ಸಾಲದು ಅಂದುಕೊಂಡಳು. ತಾನು ಇನ್ನೂ ಪ್ರಾಯವಿದ್ದವಳು ಎನ್ನುವಂತೆ ತನ್ನ ಮುಪ್ಪಿನ ಕಾಲಕ್ಕೆ ಬೇಕಾಗುತ್ತದೆಂದು ಉಳಿತಾಯ ಮಾಡತೊಡಗಿದಳು .... 'ನನಗೆ ಎಷ್ಟು ವಯಸ್ಸು ಆಗಿರಬಹುದು ...? ನಾನು ಈ ವರ್ಷಗಳಲ್ಲೆಲ್ಲ ಏನು ಕಡಿದುಕಟ್ಟೆ ಹಾಕಿದ್ದೇನೆ ...? ನಾನು ಅಲ್ಲಿ ಇಲ್ಲಿ ಅಡ್ಡಾಡಿ ಖುಶಿಯಾಗಿದ್ದುಕೊಂಡು ಅವರಿವರಿಗೆ ನನ್ನ ಕೈಲಾದಮಟ್ಟಿಗೆ ಸಹಾಯಮಾಡುತ್ತ ಯಾಕೆ ಬದುಕಲಿಲ್ಲ ?' ಆಕೆಯಲ್ಲಿದ್ದ ಏನೋ ಒಂದು ಅವಳನ್ನು ನೋಡಿ ನಕ್ಕಿತು . 'ನನ್ನೊಳಗೆ ದೆವ್ವ ಹೊಕ್ಕಿತ್ತು ... ನಾನು ನಾನಾಗಿರಲಿಲ್ಲ. ಇಲ್ಲವಾದರೆ ನಾನು ಹೀಗೇಕೆ ಬದುಕಿದೆ ಎನ್ನುವುದಕ್ಕೆ ಏನು ಹೇಳಲಾದೀತು...?' ಬೆಸ್ಸಿ ಬೆರಗಿಗೆ ಒಳಗಾಗಿದ್ದಳು .... ಬಹುಕಾಲದ ನಿದ್ದೆಯಿಂದ ಎಚ್ಚರಾದಂತಾಗಿತ್ತು . ಮುರಿದ ಬೀಗದ ಕೈಯು ಸ್ಯಾಮ್ ಸತ್ತಾಗಿನಿಂದ ಮುಚ್ಚಿಹೋಗಿದ್ದ ಅವಳ ಮೆದುಳಿನ ಕೋಣೆಯೊಂದನ್ನು ತೆರೆದು ಬಿಟ್ಟಿತು !

ಚಂದ್ರ ಇನ್ನೊಂದು ತುದಿಗೆ ಹೋದ . ಆ ತುದಿ ವಿಚಿತ್ರವಾಗಿ ಕೆಂಪಗಿತ್ತು ... ಅಲ್ಲಿ ಚಂದ್ರನ ಆಕಾರ ಕರಗುತ್ತಿತ್ತು ... ಚಳಿಯೆಂದರೆ ಚಳಿ ! ಬೆಸ್ಸಿ ಗದಗದ ಎಂದು ನಡುಗಿದಳು .... ಇನ್ನೇನು ನ್ಯೂಮೋನಿಯಾ ಬಂದೇ ಬರುತ್ತದೆ ಅನ್ನಿಸಿತು . ಆದರೆ ಈಗ ಅವಳಿಗೆ ರಸ್ತೆಯಲ್ಲಿದ್ದದ್ದರ ಹೆದರಿಕೆಯೊಂದಿಗೆ ಸಾವಿನ ಹೆದರಿಕೆಯೂ ಹಾರಿಹೋಗಿತ್ತು . ಹಡ್ಸನ್ ನದಿಯತ್ತಲಿಂದ ಹೊಸ ಗಾಳಿ ಬೀಸಿ ಬರುತ್ತಿತ್ತು . ಯಾವ ಯಾವವೋ ಹೊಸನಕ್ಷತ್ರಗಳು ಆಕಾಶದಲ್ಲಿ ಉದಯಿಸಿದವು ... ರಸ್ತೆಯ ಆಚೆಯ ಬದಿಯಿಂದ ಕರಿಯ ಬೆಕ್ಕೊಂದು ಸಾಗಿ ಬಂತು . ಕ್ಷಣಕಾಲ ಕಾಲುದಾರಿಯ ಅಂಚಿನಲ್ಲಿ ನಿಂತು ತನ್ನ ಹಸಿರು ಕಣ್ಣುಗಳಿಂದ ಬೆಸ್ಸಿಯನ್ನು ದಿಟ್ಟಿಸಿತು . ನಂತರ ಹೆದರುತ್ತ ಹೆದರುತ್ತ ... ಬೆಸ್ಸಿಯತ್ತಲೇ ಸರಿಯತೊಡಗಿತು ... ಬೆಸ್ಸಿಗೆ ಯಾವ ಪ್ರಾಣಿಯನ್ನೂ ಕಂಡರಾಗದು . ನಾಯಿ ಬೆಕ್ಕು ಪಾರಿವಾಳಗಳು ಹೋಗಲಿ ಅವಳಿಗೆ ಗುಬ್ಬಚ್ಚಿಗಳನ್ನು ಕಂಡರೂ ಆಗದು . ಅವು ರೋಗ ತರುತ್ತವೆಂದು ಹೆದರಿಕೆ ... ಕೊಳಕುಗಳು! ಪ್ರತಿಯೊಂದು ಬೆಕ್ಕಿನಲ್ಲಿ ಒಂದು ಪಿಶಾಚಿ ಮನೆಮಾಡಿರುತ್ತದೆನ್ನುವುದು ಆಕೆಯ ನಂಬಿಕೆ. ಅದರಲ್ಲೂ ಕರಿಯ ಬೆಕ್ಕೆಂದರೆ ಕೆಡುಕಿನ ಸಂಕೇತವೆಂದು ಆಕೆ ಅದನ್ನು ನೋಡುವುದಕ್ಕೇ ಭಯಪಡುತ್ತಿದ್ದಳು . ಆದರೆ ಈಗ ... ಮನೆ - ಆಸ್ತಿ ... ಬಾಗಿಲುಗಳು ಮತ್ತು ಬೀಗ ಗಳನ್ನಿಟ್ಟುಕೊಳ್ಳದೇ ಭಗವಂತನ ವಿಶಾಲ ಕರುಣೆಯ ಅಡಿಗೆ ಬದುಕುವ ಪ್ರಾಣಿಗಳ ಬಗ್ಗೆ ಬೆಸ್ಸಿಯಲ್ಲಿ ಪ್ರೀತಿ ಹುಟ್ಟಿತು .... ಬೆಕ್ಕು ಮೊದಲು ಬೆಸ್ಸಿಯ ಪರ್ಸನ್ನು ಮೂಸಿನೋಡಿತು. ಆಮೇಲೆ ಅವಳ ಹತ್ತಿರ ಬಂದು ... ಬಾಲವನ್ನೆತ್ತಿ ಮ್ಯಾಂವ್.. ಮ್ಯಾಂವ್ ಎನ್ನುತ್ತ ಅವಳ ಕಾಲುಗಳಿಗೆ ತನ್ನ ಮೈಯನ್ನು ಉಜ್ಜತೊಡಗಿತು .... 'ಪಾಪ ! ಹಸಿದಿದೆ. ಏನಾದರೂ ಕೊಡಬೇಕಾಗಿತ್ತು ...'. ಬೆಸ್ಸಿಗೆ ಒಮ್ಮೆಲೇ ತಾನು ಇಂಥ ನಿಷ್ಪಾಪದ ಪ್ರಾಣಿಯನ್ನು

ಪ್ರಾಣಿಯನ್ನು ಹೇಗೆತಾನೇ ದ್ವೇಷಿಸಲು ಸಾಧ್ಯವಾಗಿತ್ತು ಎಂದು ಆಶ್ಚರ್ಯವೆನಿಸಿತು .'ಅವ್ವಾ ನನಗ ದೆವ್ವಬಡದಿರಬೇಕು .... ಇನ್ನ ಮುಂದ ಹೊಸಾಮನಶಾಳು ಆಗಬೇಕು ...'. ಬೆಸ್ಸಿಯ ಮನಸಿನೊಳಗೆ , ಒಂದು ಕ್ಷಣ , ತಾನು ಇನ್ನೊಮ್ಮೆ ಮದುವೆಯಾದರೇ... ಎಂತೆನ್ನುವ ವಿಲಕ್ಷಣ ಭಾವನೆಯೊಂದು ಬಂದು ಹೋಯಿತು .

ಆ ರಾತ್ರಿ ಸಾಹಸಮಯವಾದುದಾಗಿತ್ತು . ಒಮ್ಮೆ ಬೆಸ್ಸಿಗೆ ಗಾಳಿಯಲ್ಲಿ ಹಾರುತ್ತಿರುವ ಬಿಳಿಯ ಪಾತರಗಿತ್ತಿಯೊಂದು ಕಾಣಿಸಿತು . ಅಲ್ಲೇ ಸಮೀಪದಲ್ಲಿ ನಿಲ್ಲಿಸಿದ ಕಾರಿನ ಮೇಲೆಲ್ಲ ಹಾರಾಡಿ ಅದು ಮಾಯವಾಯಿತು ... ಬೆಸ್ಸಿಗೆ ಗೊತ್ತು ಅದು ಪಾತರಗಿತ್ತಿ ಅಲ್ಲ ಎನ್ನುವುದು. ಯಾಕೆಂದರೆ ನಿಜವಾದ ಪಾತರಗಿತ್ತಿ ಕತ್ತಲಾದ ಮೇಲೆ ಹಾರಾಡುವದಿಲ್ಲ . ಅದು ಅದಾಗ ಹುಟ್ಟಿದ ಹಸುಗೂಸಿನ ಆತ್ಮ ! ಇನ್ನೊಮ್ಮೆ ಎಚ್ಚರಾದಾಗ ಒಂದು ಬೆಂಕಿಯ ಚಂಡು ... ಉರಿಯುತ್ತಿರುವ ಸಾಬಾಣಿನ ಗುಳ್ಳೆಯಂಥದು ... ಅದು ಒಂದು ಮನೆಯ ಛತ್ತಿನಿಂದ ಮತ್ತೊಂದು ಮನೆಯ ಛತ್ತಿಗೆ ಹಾರುತ್ತ ಹಾರುತ್ತ.... ಒಂದು ಛತ್ತಿನ ಹಿಂದೆ ಮಾಯವಾಗಿಹೋಯಿತು. ಬೆಸ್ಸಿಗೆ ಗೊತ್ತಿತ್ತು... ಹೀಗೆ ಹಾರುತ್ತಿರುವುದು ಇದೀಗ ಸತ್ತ ಮನುಷ್ಯನೊಬ್ಬನ ಆತ್ಮ !...

ಆಮೇಲೆ ಬೆಸ್ಸಿಗೆ ನಿದ್ದೆ ಹತ್ತಿತು . ಆಕೆ ಗಾಬರಿಗೊಂಡು ಎಚ್ಚತ್ತಳು . ಆಗಲೇ ಹಗಲು ಹರಿದಿತ್ತು . ಸೆಂಟ್ರಲ್ ಪಾರ್ಕಿನ ದಿಕ್ಕಿನಲ್ಲಿ ಸೂರ್ಯ ಏರಿಬಂದಿದ್ದ . ಬೆಸ್ಸಿ ಕೂತಲ್ಲಿಂದ ಆಕೆಗೆ ಸೂರ್ಯ ಕಾಣುತ್ತಿದ್ದಿಲ್ಲ. ಆದರೆ ಎದುರಿನ ದೊಡ್ಡರಸ್ತೆಯ ಮೇಲ್ಗಡೆಗೆ ಆಕಾಶ ಕೆಂಪಗಾಗಿತ್ತು. ಆಕೆಯ ಎಡಗಡೆಯ ಕಟ್ಟಡಗಳ ಕಿಡಕಿಗಳ ಗಾಜುಗಳಲ್ಲಿ ಜ್ಯೋತಿಗಳು ಬೆಳಗುತ್ತದ್ದಂತಿತ್ತು; ಹೊಯ್ದಾಡುತ್ತಿದ್ದ ಆ ಕಿಡಕಿಗಳ ಗಾಜುಗಳು ಹಡಗಿನ ಬೆಳಕಿಂಡಿಗಳಂತೆ ಕಣ್ಣು ಮಿಟಕಿಸುವಂತಿದ್ದವು . ಪಾರಿವಾಳವೊಂದು ಆಕೆಯ ಸಮೀಪದಲ್ಲಿಯೇ ಕೆಳಗಿಳಿದು ತನ್ನ ಕೆಂಪಾದ ಪುಟ್ಟ ಪಾದಗಳ ಮೇಲೆ ಕುಪ್ಪಳಿಸುತ್ತ ಅಲ್ಲಿ ಬಿದ್ದಿದ್ದ ಒಣಗಿದ ಬ್ರೆಡ್ಡಿನ ತುಣುಕನ್ನೋ ಅಥವಾ ಬರೀ ಒಂದು ಒಣಗಿದ ಕೆಸರಿನ ತುಣುಕನ್ನೋ ಕುಕ್ಕಿ ಹೆಕ್ಕಿತು . ಬೆಸ್ಸಿಗೆ ಗೊಂದಲವಾಯಿತು ... ಹೌದು ... ಈ ಹಕ್ಕಿಗಳು ಹೇಗೆ ಬದುಕುತ್ತವೆ ? ರಾತ್ರಿಯ ಹೊತ್ತು ಎಲ್ಲಿ ಮಲಗುತ್ತವೆ ? ಮಳೆ ಚಳಿ ಹಿಮದಿಂದ ಇವು ಅದು ಹೇಗೆ ತಪ್ಪಿಸಿಕೊಂಡು ಬದುಕಿ ಉಳಿಯುತ್ತವೆ ?... ಇನ್ನು ಮನೆಯ ಕಡೆಗೆ ಹೋಗಬೇಕೆಂದುಂದು ಬೆಸ್ಸಿ ನಿರ್ಧರಿಸಿದಳು. ... ಜನ ತನ್ನನ್ನು ಹೀಗೆ ರಸ್ತೆಯಲ್ಲಿ ಬಿಡಲಾರರು ಎಂದುಕೊಂಡಳು...

ಎದ್ದು ನಿಲ್ಲುವುದೆಂದರೇ ದೊಡ್ಡಹಿಂಸೆಯಾದಂತಾಯಿತು . ಆಕೆ ಕೂತ ಮೆಟ್ಟಲಿಗೆ ಅವಳ ದೇಹ ಅಂಟಿಕೊಂಡಂತಾಗಿತ್ತು . ಬೆನ್ನು ನೋಯುತ್ತಿತ್ತು ಮತ್ತು ಕಾಲುಗಳಲ್ಲಿ ಮುಳ್ಳು ಚುಚ್ಚುತ್ತಿರುವಂತಹ ನೋವು ... ಇಂಥದ್ದರಲ್ಲಿಯೇ ಎದ್ದು ನಿಧಾನವಾಗಿ ಮನೆಯತ್ತ ನಡೆದಳು. ಬೆಳಗಿನ ಆರ್ದ್ರವಾದ ಹವೆಯನ್ನು ಒಳಕ್ಕೆಳೆದುಕೊಂಡಳು .... ಅದು ಕಾಫೀ ಮತ್ತು ಹುಲ್ಲಿನ ವಾಸನೆಯನ್ನು ಹೊಂದಿದ್ದಿತು . ರಸ್ತೆಯ ಮೇಲೆ ಅವಳೊಬ್ಬಳೇ ಅಲ್ಲ... ಪಕ್ಕದ ಓಣಿಗಳಿಂದ ಗಂಡಸರು ಹೆಂಗಸರು ಸಾಗಿ ಬರುತ್ತಿದ್ದರು ... ತಮ್ಮ ಕೆಲಸಗಳಿಗೆ ಹೊರಟಿದ್ದರು... ಅವರು ಅಂಗಡಿಗಳಲ್ಲಿ ಪತ್ರಿಕೆಗಳನ್ನು ಕೊಂಡು ನೆಲದಡಿಯ ರೈಲುಮಾರ್ಗದ ಸ್ಟೇಶನ್ನುಗಳಿಗೆ ಇಳಿಯುತ್ತಿದ್ದರು ... ಕಳೆದ ರಾತ್ರಿ ಆತ್ಮಶೋಧನೆಗೊಳಪಟ್ಟು

ಎಂಥದ್ದೋ ಶುದ್ಧೀಕರಣಕ್ಕೆ ಒಳಗಾದವರಂತೆ ವಿಚಿತ್ರವಾಗ ಶಾಂತಿಯನ್ನು ಹೊಮ್ಮುತ್ತಿದ್ದರು. ....ಇಷ್ಟು ಬೇಗ ಮನೆಯಿಂದ ಹೊರಟಿರುವ ಇವರು ಬೆಳಿಗ್ಗೆ ಎಷ್ಟಕ್ಕೆ ಏಳುತ್ತಿರಬಹುದು... ಎಂದು ಬೆಸ್ಸಿ ಬೆರಗುಬಟ್ಟಳು .ಇಲ್ಲ...ಅಕ್ಕಪಕ್ಕದವರೆಲ್ಲಾ ಕದೀಮರು ಪಾತಕರು ಆಗಿರಲಿಕ್ಕಿಲ್ಲ...ದಾರಿಯಲ್ಲಿ ಒಬ್ಬ ಯುವಕ ಬೆಸ್ಸಿಗೆ ನಮಸ್ಕಾರ ಹೇಳುವವನಂತೆ ತಲೆಬಾಗಿಸಿದ. ಈಕೆ ಅವನೆಡೆಗೆ ಮುಗುಳುನಗೆ ಬೀರಲು ನೋಡಿದಳು ...ಅರೇ ...ಮುಗುಳುನಗೆಯ ಪ್ರತಿಕ್ರಿಯೆ ಕೂಡ ನನಗೆ ಸಾಧ್ಯವಾಗುತ್ತಿಲ್ಲವಲ್ಲ ! ಮರೆತು ಹೋದಂತಾಗಿದೆ ...ಇದೆಂಥದಿದು...ಹೆಣ್ಣಿನ ಅತ್ಯಂತ ಸೂಕ್ಷ್ಮವಾದ ಗುಣವದು!...ಬೆಸ್ಸಿ ತನ್ನ ತಾರುಣ್ಯದಲ್ಲಿ ಇದನ್ನು ಅದ್ಭುತವಾಗಿ ಸಾಧಿಸಿದ್ದಳು . ಬಹುಶಃ ಅವಳ ತಾಯಿ ಹೇಳಿಕೊಟ್ಟ ಮೊಟ್ಟಮೊದಲಿನ ಪಾಠವಿದ್ದಿರಬೇಕದು ....

ಆಕೆ ಮನೆಯನ್ನು ತಲುಪಿದರೆ ಅಲ್ಲಿ ಹೊರಗಡೆಯೇ, ಅವಳ ಬದ್ಧವೈರಿ ಐರಿಶ್ ಮನಶಾ, ಕಟ್ಟಡದ ಸುಪರಿಂಟೆಂಡೆಂಟ್ ನಿಂತಿದ್ದ .ಅವನು ಕಸಗುಡಿಸುವವರನ್ನು ದಬಾಯಿಸುತ್ತಿದ್ದನು ....ದಾಂಡಿಗವ್ಯಕ್ತಿತ್ವ ...ಗಿಡ್ಡಮೂಗು ಉದ್ದವಾದ ಮೇಲ್ದುಟಿ ಪಚ್ಚಬಡಿದಗಲ್ಲ ಮತ್ತು ಚೂಪಾದ ಗದ್ದ. ಇದ್ದಷ್ಟು ಹಳದಿಯಾದ ಕೂದಲುಗಳು ಬಕ್ಕತಲೆಯ ಭಾಗವನ್ನು ಮುಚ್ಚುವಂತಿದ್ದವು. ಅವನು ಬೆಳಗಿನ ಇಷ್ಟುಹೊತ್ತಿನಲ್ಲಿ ಅಲ್ಲಿ ಬೆಸ್ಸಿ ಯನ್ನು ನೋಡಿ ಗೊಂದಲಗೊಂಡು...'ಏನಜ್ಜೀ...ಏನು ಸಮಾಚಾರ ?' ಎಂದು ಕೇಳಿದ. ಮಾತಾಡಲು ಕಷ್ಟಪಡುತ್ತಲೇ ಬೆಸ್ಸಿ ಕಳೆದ ರಾತ್ರಿ ತಾನು ಅನುಭವಿಸಿದ್ದನ್ನೆಲ್ಲ ಹೇಳಿ, ರಾತ್ರಿ ಇಡೀ ಮುಷ್ಟಿಯಲ್ಲಿ ಬಿಗಿಯಾಗಿ ಹಿಡಿದುಕೊಂಡಿದ್ದ ಬೀಗದಕೈಯ ಹಿಡಿಕೆಯ ತುಂಡನ್ನು ತೋರಿಸಿದಳು .

'ಅಯ್ಯೋ ದೇವರೇ...!' ಎಂದು ಅವನು ಉದ್ಗಾರ ತೆಗೆದ .

'ಈಗ ನಾನು ಏನುಮಾಡಬೇಕು ?'

'ಇರು...ನಾನು ಬಾಗಿಲು ತೆಗೆದುಕೊಡುತ್ತೇನೆ .'

'ಆದರೆ ನಿಮ್ಮಹತ್ತಿರ ಬೀಗದ ಕೈ ಇಲ್ಲವಲ್ಲ ...'

'ಮನೆಗೆ ಬೆಂಕಿಗಿಂಕಿ ಬಿದ್ದರೆ ನಾವು ಎಲ್ಲ ಮನೆಗಳ ಬಾಗಿಲುಗಳನ್ನೂ ತೆರೆಯಲು ಸನ್ನದ್ಧರಾಗಿರ ಬೇಕಾಗುತ್ತದೆ ಅಜ್ಜೀ... '

ಸುಪರ್‌ನು ತನ್ನ ಕೋಣೆಯೊಳಕ್ಕೆ ಹೊಕ್ಕು ಕೆಲವು ನಿಮಿಷಗಳ ನಂತರ ಬಾಗಿಲು ತೆರೆಯುವ ಒಂದಿಷ್ಟು ಉಪಕರಣಗಳನ್ನು ಮತ್ತು ಕೀಲಿಕೈಗಳನ್ನು ಹಾಕಿದ್ದ ಒಂದು ದೊಡ್ಡ ಬಳೆಯನ್ನು ತೆಗೆದುಕೊಂಡು ಮರಳಿದನು . ಬೆಸ್ಸಿಯೊಂದಿಗೆ ಲಿಫ್ಟಿನಲ್ಲಿ ಮೇಲಕ್ಕೆ ಹೋದನು. ಅಲ್ಲಿ ಹೊಸ್ತಿಲಿಗೆ ಆನಿಕೊಂಡು ಚೀಲ ಕೂತಿತ್ತು....ಆದರೆ ಅದು ಖಾಲಿಯಾದಂತಿತ್ತು. ಸುಪರ್‌ನು ಬಾಗಿಲು ತೆರೆಯುವ ತನ್ನ ಕೆಲಸದಲ್ಲಿ ನಿರತನಾದನು .ಅವನು ಬಾಗಿಲಿನ ಸಂದಿಗಳಲ್ಲೆಲ್ಲ ಬೆಸ್ಸಿ ಸಿಕ್ಕಿಸಿದ ಕಾಗದಗಳ ಬಗ್ಗೆ 'ಇವೆಲ್ಲ ಕಾಗದಗಳು ಏನು...?' ಎಂದು ಕೇಳಿದನು . ಬೆಸ್ಸಿ ಉತ್ತರಿಸಲಿಲ್ಲ.

'ಹೀಗೆ ಆಗಿದೆ ಎಂದು ಆಗಲೇ ಬಂದು ಯಾಕೆ ಹೇಳಲಿಲ್ಲ ? ನಿನ್ನ ಈ ವಯಸ್ಸಿನಲ್ಲಿ ಹೀಗೆ ರಾತ್ರಿಯಿಡೀ ಅಡ್ಡಾಡುತ್ತ ರಸ್ತೆಯಲ್ಲಿ ಉಳಿಯುವುದೇ...! ಛೇ.. ಛೇ.. ದೇವರೇ...'

ಎಂದೆನ್ನುತ್ತ ಅವನು ಯಾವದೋ ಉಪಕರಣವನ್ನು ಬೀಗದ ರಂಧ್ರದಲ್ಲಿ ಹಾಕಿ ಬೀಗತೆಗೆಯಲು ಪ್ರಯತ್ನಿಸುತ್ತಿದ್ದಂತೆಯೇ ಪಕ್ಕದ ಮನೆಯ ಬಾಗಿಲು ತೆರೆದುಕೊಂಡು ಅದರೊಳಗಿಂದ ಗೌನು ಹಾಕಿಕೊಂಡ ಸ್ಲಿಪ್ಪರ ಹಾಕಿಕೊಂಡ ಚಿಕ್ಕಗೃಹಿಣಿಯೊಬ್ಬಳು ಹೊರಗೆ ಬಂದಳು. ಆಕೆ ಕೂದಲನ್ನು ಬ್ಲೀಚ್ ಮಾಡಿಸಿಕೊಂಡು ಗುಂಗುರುಗೊಳಿಸಿಕೊಂಡಂತಿತ್ತು... ಆಕೆ ಬಂದು 'ನಿನ್ನೆ ರಾತ್ರಿ ಏನಾಯಿತು ..? ನಾನು ಪ್ರತಿಸಲ ಬಾಗಿಲು ತೆಗೆದು ನೋಡಿದಾಗಲೆಲ್ಲ ನಿಮ್ಮ ಮನೆಯ ಬಾಗಿಲಿಗೆ ಹೊಂದಿ ಈ ಚೀಲ ಕಾಣಿಸುತ್ತಿತ್ತು. ಕೊನೆಗೆ ನಾನು ಚೀಲದಿಂದ ಹಾಲು ಮತ್ತು ಬೆಣ್ಣೆಯನ್ನು ಒಯ್ದು ನಮ್ಮ ಮನೆಯ ರೆಫ್ರಿಜರೇಟರಿನಲ್ಲಿ ಇಟ್ಟಿದ್ದೇನೆ.' ಎಂದು ಹೇಳಿದಳು.

ಬೆಸ್ಸಿಗೆ ಕಣ್ಣೀರನ್ನು ತಡೆದುಕೊಳ್ಳಲು ಸಾಧ್ಯವಾಗಲಿಲ್ಲ ... ಆಕೆ ' ಅಯ್ಯೋ ನನ್ನವ್ವಗಳಿರಾ...ನನಗೆ ನಿಮ್ಮ ಗುರುತೇ ಹತ್ತಲಿಲ್ಲ...' ಎಂದು ಕನವರಿಸಿದಳು.

ಸುಪರ್ ಬೀಗದ ರಂಧ್ರದಲ್ಲಿ ಸಿಕ್ಕಿಹಾಕಿಕೊಂಡಿದ್ದ ಕೈಯ ತುಂಡನ್ನು ತೆಗೆದನು. ಅವನು ಇನ್ನಷ್ಟು ಹೊತ್ತು ಕಷ್ಟಪಡಬೇಕಾಯಿತು... ಕೊನೆಗೆ ಒಂದು ಬೀಗದ ಕೈಯನ್ನು ಹಾಕಿ ತಿರುಗಿಸಿದಾಗ ಬಾಗಿಲು ಬಿಚ್ಚಿಕೊಂಡಿತು. ಬಾಗಿಲಿನ ಸಂದಿಗೆ ಸಿಕ್ಕಿಸಿದ ಕಾರ್ಡುಗಳೆಲ್ಲ ಉದುರಿ ಬಿದ್ದವು. ಅವನು ಬೆಸ್ಸಿಯೊಂದಿಗೆ ದಿವಾನಖಾನೆ ಪ್ರವೇಶಿಸಿದನು... ಅನೇಕದಿನಗಳ ಕಾಲ ವಾಸವಾಗದೇ ಇರುವ ಮನೆಯಂತೆ ಅಲ್ಲಿ ಹಸಿದ್ರಾಕ್ಷೆಯರಸದ ವಾಸನೆ ಬೆಸ್ಸಿಯ ಮೂಗಿಗೆ ಹೊಡೆಯಿತು ....'ಇನ್ನೊಮ್ಮೆ ಇಂಥ ತೊಂದರೆ ಏನಾದರೂ ಸಂಭವಿಸಿದರೆ ಖಂಡಿತವಾಗಿ ನನ್ನ ಹತ್ತಿರ ಬರಬೇಕು. ನಾನಿರುವುದೇ ನಿಮಗೆ ಇಂಥ ತೊದರೆಯಲ್ಲಿ ಸಹಾಯ ಮಾಡುವುದಕ್ಕೆ' ಎಂದು ಹೇಳಿದ.

ಅವನಿಗೆ ಏನಾದರೂ ಖುಶಿ ಕೊಡಬೇಕೆಂದೆನಿಸಿತಾದರೂ ಅವಳ ಕೈಗಳು ಪರ್ಸ್ ತೆರೆಯಲಾರದಷ್ಟು ದುರ್ಬಲಗೊಂಡಿದ್ದವು... ಪಕ್ಕದಮನೆಯ ಹೆಣ್ಣುಮಗಳು ಹಾಲು ಮತ್ತು ಬೆಣ್ಣೆಯ ಪಾಕೀಟುಗಳನ್ನು ತಂದಳು ... ಬೆಸ್ಸಿ ಅವರನ್ನು ಅಲ್ಲಿಯೇ ಬಿಟ್ಟು ಮಲಗುವ ಕೋಣೆಗೆ ಹೋಗಿ ಹಾಸಿಗೆಯ ಮೇಲೆ ಬಿದ್ದುಕೊಂಡಳು. ಎದೆಯೆಲ್ಲ ಬಿಗಿದಂತಾಗಿ ವಾಂತಿಬಂದಂತಾಗುತ್ತಿತ್ತು... ಏನೋ ಭಾರವಾದದ್ದು ಅವಳ ಪಾದಗಳಿಂದ ಎದೆಯ ವರೆಗೆ ಹೊಯ್ದಾಡುತ್ತಿದ್ದಂತಿತ್ತು ... ಬೆಸ್ಸಿ ಗಾಬರಿಗೊಳ್ಳದೇ ... ಕೇವಲ ಕಳೆದುಹೋಗುತ್ತಿರುವ ದೇಹದ ಬಗೆಗಿನ ಕುತೂಹಲದಿಂದೆಂಬಂತೆ ಅದನ್ನ ಕೇಳಿಸಿಕೊಳ್ಳತೊಡಗಿದಳು ... ಸುಪರ್ ಮತ್ತು ಪಕ್ಕದ ಮನೆಯಾಕೆ ಮಾತಾಡುತ್ತಿದ್ದರು. ಬೆಸ್ಸಿಗೆ ಅವರ ಮಾತುಗಳು ಏನೊಂದೂ ಅರ್ಥವಾಗಲಿಲ್ಲ ....ಈಗಲೂ ಹಾಗೆಯೇ ಆಗುತ್ತಿದೆ ... ಮೂವತ್ತು ವರ್ಷಗಳ ಹಿಂದೆ ಆಸ್ಪತ್ರೆಯಲ್ಲಿ ಡಾಕ್ಟರರು ಆಪರೇಶನ್ ಮಾಡಲು ಅನೇಸ್ಥೇಶಿಯಾ ಕೊಟ್ಟಾಗ ... ಅಲ್ಲಿ ಡಾಕ್ಟರರು ಮತ್ತು ನರ್ಸು ಮಾತಾಡುತ್ತಿದ್ದರು ... ಅವರ ಧ್ವನಿ ಎಲ್ಲೋ ದೂರದಿಂದ ಬಂದಂತೆ ಕೇಳುತ್ತಿತ್ತು. ಮತ್ತು ಅವರ ಮಾತುಗಳು ತಾನರಿಯದ ಯಾವದೋ ವಿಚಿತ್ರ ಭಾಷೆಯದರಂತೆ ಕೇಳುತ್ತಿದ್ದವು.

ಬಲುಬೇಗನೇ ಅಲ್ಲಿ ಶಾಂತಿ ನೆಲೆಸಿತು... ಮತ್ತು ಸ್ಯಾಮ್ ಕಾಣಿಸಿಕೊಂಡನು. ಅದು ಹಗಲೂ ಅಲ್ಲ ರಾತ್ರಿಯೂ ಅಲ್ಲ... ಬೆರಗು ತುಂಬಿದ ನಸುಗತ್ತಲು. ಬೆಸ್ಸಿ ತನ್ನ ಈ ಅರಳು

ಮರಳಿನಲ್ಲಿಯೂ ಸ್ಯಾಮ್ ತೀರಿಕೊಂಡಿದ್ದಾನೆನ್ನುವುದು ತಿಳಿದಿತ್ತು... ಆದರೆ ಅದು ಹೇಗೋ ವಿಚಿತ್ರವಾದರೀತಿಯಲ್ಲಿ ಅವನು ತನ್ನ ಗೋರಿಯಿಂದ ತಪ್ಪಿಸಿಕೊಂಡು ಬೆಸ್ಸಿಯ ಭೆಟ್ಟಿಗೆ ಬರಲು ಸಫಲನಾಗಿದ್ದನು ...ಅವನು ತೀರ ದುರ್ಬಲನಾಗಿದ್ದ -ಗೊಂದಲಗೊಂಡವ ನಂತಿದ್ದ. ಮಾತಾಡಲಾರದವನಾಗಿದ್ದ ....ಮೇಲೆ ಆಕಾಶವಿಲ್ಲದ ಕೆಳಗೆ ಭೂಮಿಯಿಲ್ಲದ ಸುರಂಗದಂತಹ ಅವಕಾಶವೊಂದರಲ್ಲಿ ಅವರು ನಡೆದರು ...ಅಲ್ಲಿ ಹೆಸರರಿಯದ ರಚನೆಯೊಂದು ವಿಧ್ವಂಸಗೊಂಡ ಚೂರುಪಾರುಗಳು...ಮತ್ತು ಇನ್ನೂ ಏನೋ ಕುಸಿತಕ್ಕೊಳಗಾದಂತಹದು ತುಂಬಿಕೊಂಡಿತ್ತು... ಅದು ತನ್ನೊಳಗೇ ಸುತ್ತುತ್ತಿರುವ ಕತ್ತಲು ತುಂಬಿದ ಕಾರಿಡಾರ್‌ನಂತಿತ್ತು...ಆದರೂ ಅದು ಪರಿಚಿತವಾದಂತಹದು !...ಅವರೀಗ ಎರಡು ಪರ್ವತ ಶೃಂಗಗಳು ಒಂದನ್ನೊಂದು ಕೂಡುವಲ್ಲಿಗೆ ಬಂದರು ...ಅವುಗಳ ನಡುವಿನ ಹಾದಿ,ಸೂರ್ಯೋದಯದ್ದೋ ಅಥವಾ ಸೂರ್ಯಾಸ್ತದ್ದರ ಹಾಗೆಯೋ ಹೊಳೆಯುತ್ತಿತ್ತು. ...ಅವರು ಅನುಮಾನಿಸುತ್ತ ಅನುಮಾನಿಸುತ್ತ... ಯಾವುದಕ್ಕೋ ನಾಚಿಕೆಪಡುತ್ತಿರು ವವರಂತೆ ...ಅಲ್ಲಿ ನಿಂತುಕೊಂಡರು .ಅದು ಅವರು ತಮ್ಮ ಮಧುಚಂದ್ರಕ್ಕಾಗಿ ಹೋಗಿದ್ದ ಎಲ್ಲೆನ್‌ವಿಲ್ಲೆಯ ,ಕ್ಯಾಟ್‌ಸ್ಕಿಲ್‌ನಲ್ಲಿಯ ಮೊದಲ ರಾತ್ರಿಯಂತಿತ್ತು ...ಅಲ್ಲಿ ಆ ಹೊಟೆಲ್ಲಿನ ಮಾಲಕನು ಅವರನ್ನು ಅವರ ಮೊದಲ ರಾತ್ರಿಯ ಕೋಣೆಗೆ ಕಳಿಸುತ್ತ ಆಡಿದ್ದ ಅವೇ ಆ ಮಾತುಗಳು ಈಗ ಬೆಸ್ಸಿಯ ಕಿವಿಗೆ ಬೀಳುತ್ತಿವೆ... ಹಾಂ... ಅದೇ ಧ್ವನಿ...ಅದೇ ಉಚ್ಚಾರ ...'ನಿಮಗಾವುದೂ ಬೇಕಾಗಿಲ್ಲ... ಯಾವ ಬೀಗದಕೈಯೂ ಬೇಕಿಲ್ಲ... ಒಳಗೆ ಪ್ರವೇಶಿಸಿರಿ ಮತ್ತು ಕರಗಿ ಹೋಗಿರಿ ...' □

(ಸಿಂಗರ್‌ನ 'ದ ಕೀ' ಎನ್ನುವ ಕಥೆಯ ಅನುವಾದ. ಅನುವಾದಕ ರಾಘವೇಂದ್ರ ಪಾಟೀಲ)

ಜಿ .ಎಸ್ .ಶಿವರುದ್ರಪ್ಪ ಅವರ ಕಾವ್ಯದಲ್ಲಿ ಸಾಮಾಜಿಕ ಆಯಾಮಗಳು

- ಡಿ .ಎಸ್ .ನಾಗಭೂಷಣ

ಒಬ್ಬ ಕವಿ ತನ್ನ ಇಡೀ ಜೀವಮಾನದಲ್ಲಿ ಬರೆಯುವ ಕವಿತೆ ಒಂದೇ ಎಂಬ ಮಾತಿದೆ. ಅಂದರೆ ಆತ ಎಷ್ಟೆಲ್ಲ ಕವಿತೆಗಳನ್ನು ಬರೆದರೂ ಅವೆಲ್ಲವೂ ಸೇರಿ **ಒಂದು** ಕವಿತೆಯಾಗಲು ಹವಣಿಸುತ್ತಿರುತ್ತವೆ .ಅಥವಾ ಆತನ ಪ್ರತಿಯೊಂದು ಕವಿತೆಯೂ ಆತ ಬರೆಯಬೇಕೆಂದು ಬಯಸಿಯೂ ಬರೆಯಲಾಗದಿರುವ ಒಂದು ಮಹಾ ಕವಿತೆಯ ಅಭ್ಯಾಸ ಅಥವಾ ತಿದ್ದತಿಗಳಂತಿರುತ್ತವೆ .ಈ ಮಾತನ್ನು ಇಂದು ಚರ್ಚಿಸುತ್ತಿರುವ ,ಸನ್ಮಾನಿಸುತ್ತಿರುವ ಕವಿ ಜಿ.ಎಸ್. ಶಿವರುದ್ರಪ್ಪನವರಿಗೆ ಅನ್ವಯಿಸಿ ನೋಡಿದಾಗ ನಾವು ಕಾಣುವುದು ಅವರ ಮೊದಲ ಕವನ ಸಂಕಲನ 'ಸಾಮಗಾನ 'ದ ಕವಿತೆಗಳೇ, ಈಗ ,ಇನ್ನೂ ಪ್ರಕಟವಾಗಬೇಕಾದ ಅವರ ಹದಿಮೂರನೇ ಸಂಕಲನದ ಕವನಗಳಲ್ಲಿ ಜನ್ಮಾಂತರ ಪಡೆಯುತ್ತಿರುವ ವಿಸ್ಮಯವನ್ನು .

೧೯೯೭, ಜಿ.ಎಸ್.ಎಸ್. ಅವರ ಕಾವ್ಯಕರ್ಮದ ೫೦ನೇ ವರ್ಷ .ನಾನು ಕಾವ್ಯ ಕರ್ಮ ಎಂದೆ; ಕಾವ್ಯ ತಪಸ್ಸು ಎನ್ನಲಿಲ್ಲ .ಕಾವ್ಯವನ್ನು ತಪಸ್ಸು ಎಂದೇ ಬಗೆದಂತೆ ಪದ್ಯ ಬರೆಯುತ್ತಿದ್ದ ಕುವೆಂಪು ಅವರ ಪ್ರಿಯ ಶಿಷ್ಯರಾಗಿಯೂ ,ಅವರಂತೆಯೇ ಅದ್ವೈತ ತತ್ವ ದೃಷ್ಟಿಕೋನದ ಪದ್ಯಗಳೊಡನೆಯೇ ಕಾವ್ಯ ರಚನೆ ಆರಂಭಿಸಿದರೂ ಜಿ.ಎಸ್.ಎಸ್. ಅವರು ಕುವೆಂಪು ಅವರಂತೆ ಕಾವ್ಯದ ಎಲ್ಲ ರಸಗಳನ್ನು ಆತ್ಯಂತಿಕವಾಗಿ ಅಧ್ಯಾತ್ಮದ ಮೂಸೆಯಲ್ಲಿ ಕರಗಿಸಿ ಅರ್ಥ ಹೊಳೆಸುವ ರಸಋಷಿಯಾಗಲು ನಿರಾಕರಿಸಿದವರು .ನಿರಾಕರಿಸಿದವರು ಎನ್ನುವುದಕ್ಕಿಂತ ಕಾವ್ಯಲೋಕದ ಹೊಸ ರೀತಿಯ ಒತ್ತಡಗಳಿಗೆ ಒಡ್ಡಿಕೊಂಡವರು ಎನ್ನಬಹುದೇನೋ ... ಏಕೆಂದರೆ ಕುವೆಂಪು ಪ್ರಧಾನವಾಗಿ ಸ್ವಾತಂತ್ರ್ಯಪೂರ್ವದ ಕವಿಯಾದರೆ ಜಿ.ಎಸ್.ಎಸ್. ಸ್ವತಂತ್ರ ಭಾರತದ ಕವಿ .ಅವರು ಎದುರಿಸಬೇಕಾಗಿ ಬಂದ ಹೊಸ ರೀತಿಯ ಒತ್ತಡಗಳು ಸ್ವಾತಂತ್ರ್ಯೋತ್ತರ ಭಾರತದ ಸಾಮಾಜಿಕ ಜೀವನದಲ್ಲಿ ಉಂಟಾದ ಹೊಸ ನಿರೀಕ್ಷೆ, ಆಶಯ, ಆತ್ಮವಿಮರ್ಶೆ, ಸಿನಿಕತೆ, ವಿಷಾದ - ಹತಾಶೆಗಳ ಕಂಪನಗಳಿಂದುಂಟಾದ ಒತ್ತಡಗಳು .ಅದಕ್ಕೇ ಇವರದ್ದು **ಕಾವ್ಯಕರ್ಮ**.ಇವರ ಮೊದಲ ಸಂಕಲನ 'ಸಾಮಗಾನ 'ದ (೧೯೫೧) ಕೊನೆಯ ಪದ್ಯಗಳನ್ನು ಬರೆಯುವ ಹೊತ್ತಿಗೇ 'ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ; ಹಾಡುವುದು ಅನಿವಾರ್ಯ ಕರ್ಮ ನನಗೆ' ಎಂಬ ಅರಿವೂ ಇವರಿಗೆ ಉಂಟಾಗಿರುವುದನ್ನು ನಾವು ಗಮನಿಸಬೇಕು .ಅಂದರೆ ಕವಿಗೆ ಕಾವ್ಯ ತನ್ನ ವ್ಯಕ್ತಿತ್ವದ ಅವಿಭಾಜ್ಯ ಅಂಗ ; ತಾನು

ಡಿ .ಎಸ್. ನಾಗಭೂಷಣ ಕಾರ್ಯಕ್ರಮ ನಿರ್ವಾಹಕರು ಆಕಾಶವಾಣಿ ಮಡಿಕೇರಿ

ಹಾಡದೆ ತನ್ನ ವ್ಯಕ್ತಿತ್ವವನ್ನು ಬೆಳಗಿಸಲಾಗದು ಎಂಬ ಮನವರಿಕೆ ಉಂಟಾಗಿದೆ. ಆದರೆ ಇದೇ ಕವಿ ,ಇವರ ಕಾವ್ಯಜೀವನದ ನಿರ್ಣಾಯಕ ಘಟ್ಟವನ್ನು ಪ್ರತಿನಿಧಿಸುವರೆಂದು ಭಾವಿಸಬಹುದಾದ 'ಪ್ರೀತಿ ಇಲ್ಲದ ಮೇಲೆ ' (೧೯೮೭) ಎಂಬ ತಮ್ಮ ಹತ್ತನೇ ಕವನಸಂಕಲನದ ಹೊತ್ತಿಗೆ 'ಯಾವ ಹಾಡ ಹಾಡಲಿ ? ಯಾವ ಹಾಡಿನಿಂದ ನಿಮಗೆ ನೆಮ್ಮದಿಯನು ನೀಡಲಿ ?' ಎಂಬ ಪ್ರಶ್ನೆ ಕೇಳುವಂತಹ ದಟ್ಟ ವಿಷಾದಕ್ಕೆ ಒಳಗಾಗಿದ್ದಾರೆ:

ಸುತ್ತಮುತ್ತ ಮನೆಮಠಗಳು
ಹೊತ್ತಿಕೊಂಡು ಉರಿಯುವಲ್ಲಿ
ಸೋತು ಮೂಕವಾದ ಬದುಕು
ನಿಟ್ಟುಸಿರೊಳು ತೇಲುವಲ್ಲಿ
ಯಾವ ಹಾಡ ಹಾಡಲಿ ?
ಉರಿವ ಕಣ್ಣ ಚಿತೆಗಳಲ್ಲಿ
ಇರುವ ಕನಸು ಸೀಯುವಲ್ಲಿ
ಎದೆ ಎದೆಗಳ ಜ್ವಾಲಾಮುಖಿ
ಹೊಗೆ ಬೆಂಕಿ ಕಾರುವಲ್ಲಿ
ಯಾವ ಹಾಡ ಹಾಡಲಿ ?
ಬೆಳಕಿಲ್ಲದ ದಾರಿಯಲ್ಲಿ
ಪಾಳುಗುಡಿಯ ಸಾಲಿನಲ್ಲಿ
ಬಿರುಗಾಳಿಯ ಬೀಡಿನಲ್ಲಿ
ಕುರುಡು ಪಯಣ ಸಾಗುವಲ್ಲಿ
ಯಾವ ಹಾಡ ಹಾಡಲಿ ?

-ಎಂಬ ಎಡೆಬಿಡದೆ ಕಾಡುವ ಪ್ರಶ್ನೆಯ ಬೇಗೆಯಲ್ಲಿ ಕವಿ ತಮ್ಮ ಕಾವ್ಯ ಕರ್ಮದ ಅಂತಿಮ ಬಿಕ್ಕಟ್ಟಿನ ಸೂಚನೆ ನೀಡುತ್ತಾರೆ. 'ಕೇಳುವವರಿಹರೆಂದು ನಾ ಬಲ್ಲೆನದರಿಂದ ಹಾಡುವೆನು ಮೈದುಂಬಿ ಎಂದಿನಂತೆ / ಯಾರು ಕಿವಿ ಮುಚ್ಚಿದರು ನನಗಿಲ್ಲ ಚಿಂತೆ ' ಎಂಬ ಆತ್ಮವಿಶ್ವಾಸದೊಡನೆ ಹಾಡತೊಡಗಿದ್ದ ಕವಿ ಇಂತಹ ಬಿಕ್ಕಟ್ಟಿಗೆ ಎದುರಾದುದಾದರೂ ಹೇಗೆ? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದರಲ್ಲೇ ಜಿ.ಎಸ್.ಎಸ್. ಅವರ ಕಾವ್ಯದಲ್ಲಿನ ಸಾಮಾಜಿಕ ದರ್ಶನ ಅಥವಾ ಸಾಮಾಜಿಕ ಆಯಾಮಗಳ ಅನಾವರಣವಾಗುತ್ತದೆ. ಈ ಅನಾವರಣದಲ್ಲಿ ಗೋಚರವಾಗುವ ಒಂದು ಕುತೂಹಲದ ಸಂಗತಿ ಎಂದರೆ 'ನಂಬಿಕೆ' ಯ ಕವಿಯಾಗಿ ಕವನ ರಚನೆಗೆ ತೊಡಗಿದ ಜಿ.ಎಸ್.ಎಸ್., ಕ್ರಮೇಣ ಈ ನಂಬಿಕೆಯನ್ನು ಪ್ರಶ್ನಿಸುವ, ಪರೀಕ್ಷಿಸುವ ಸಾಮಾಜಿಕ ಕವಿಯಾಗಿ ಮಾರ್ಪಟ್ಟು ನಂತರದಲ್ಲಿ , ಅಂದರೆ ಇತ್ತೀಚಿನ ಕವನಗಳಲ್ಲಿ ಈ ನಂಬಿಕೆ, ಪರೀಕ್ಷೆಗಳನ್ನು ದಾಟಿ ನಿಂತ ಸತ್ವವೊಂದರ ಸ್ಪರ್ಶ ಮಾಡಿದವರಂತೆ ಹೊಸತೊಂದು ಸಮತೋಲನದಲ್ಲಿ ಬರೆಯತೊಡಗಿರುವುದು .

- ೨ -

ಶಿವರುದ್ರಪ್ಪನವರು ಕುವೆಂಪು ಅಥವಾ ಮಾಸ್ತಿಯವರಂತೆ ಸಾಧಕರಾದ ಲೇಖಕರು

ಅಲ್ಲ. ಅತೀತತೆಯನ್ನು ಸಾಧಿಸಿಕೊಂಡು ಅದರ ಬೆಳಕಿನಲ್ಲಿ ಬರೆದವರು ಅವರಿಬ್ಬರು. ಆದರೆ ಜಿ.ಎಸ್.ಎಸ್. ಹಾಗಲ್ಲ. ಬರವಣಿಗೆಯನ್ನೇ ಅತೀತತೆಯ ಸಾಧನೆಗಾಗಿ ಮಾಧ್ಯಮ ಮಾಡಿಕೊಂಡವರು. ಅತೀತತೆ, ಅಂದರೆ ಇಂದ್ರಿಯಗಮ್ಯ ಲೋಕದಾಚೆಗಿನ ತತ್ವದೆಡೆಗಿನ ಇವರ ಒಲವು, ಇವರ ಆರಂಭಿಕ ಕವನಗಳಲ್ಲೇ ವ್ಯಕ್ತವಾಗಿದೆ. ಇವರ ಮೊದಲ ಕವನ 'ವೀಣಾಧ್ವನಿ'ಯೇ ಒಂದು ಅದ್ವೈತ ತತ್ವ ಸಾರುವ ಕವನ. ವೀಣಾ ಮಧುರನಾದ ಇಲ್ಲಿ 'ಕಾಲದೇಶಾತೀತ'ವಾಗಿ, 'ಭಾವ ಭಾಷಾತೀತ'ವಾಗಿ 'ಸಚ್ಚಿದಾನಂದನ ಅನಂತರೂಪವನು ನನ್ನ ಸಾಂತತೆಯಲ್ಲಿ ಸೆರೆಗೈದು ತೋರುತಿದೆ' ಎಂದು **ಭಾಸ**ವಾಗಿದೆ ಕವಿಗೆ. ಈ ಸಾಂತ- ಅನಂತಗಳ ದ್ವಂದ್ವ ಉಂಟುಮಾಡುವ ವಿಸ್ಮಯ ಇವರ ಇಡೀ ಕಾವ್ಯಜೀವನದುದ್ದಕ್ಕೂ ಒಂದು ಹಿನ್ನೆಲೆಯಾಗಿ ಕೆಲಸ ಮಾಡುತ್ತಾ ಬಂದಿರುವುದನ್ನು ನಾವು ಇವರ ಎಲ್ಲ ಹನ್ನೊಂದು ಕವನ ಸಂಕಲನಗಳಲ್ಲೂ ಕಾಣಬಹುದಾಗಿದೆ. ಇವರ ಇನ್ನೊಂದು ಸಂಕಲನ 'ತೀರ್ಥವಾಣಿ' (೧೯೫೩) ಪೂರ್ಣವಾಗಿ, ಶ್ರೀರಾಮಕೃಷ್ಣ ವಚನವೇದಕ್ಕಾಗಿ ಅನುವಾದ ಮಾಡಿದ ಭಕ್ತಿಗೀತೆಗಳ ಸಂಕಲನವೇ ಆಗಿದೆ. ಮೊದಲ ಸಂಕಲನ 'ಸಾಮಗಾನ' ಈ 'ತೀರ್ಥವಾಣಿ'ಗೆ ಒಂದು ಹಿನ್ನೆಲೆಯಾಗಿ ನಿಂತಂತೆ, ಮುಗ್ಧ ನಂಬಿಕೆ ಹಾಗೂ ಅದರಿಂದ ಹುಟ್ಟುವ ಸರಳ ಆದರೆ ಸುಂದರವಾದ ಕಲ್ಪನಾಚಿತ್ರಗಳನ್ನು ಬಿಡಿಸುವ ಲಯಬದ್ಧ ಸಾಲುಗಳಿಂದ ಅನುರಣಿತವಾಗಿದೆ. ಎಂತಿದ್ದರೂ ಇದರ ಶೀರ್ಷಿಕೆ 'ಸಾಮಗಾನ' ತಾನೇ!

ಎರಡನೇ ಕವನಸಂಕಲನ 'ಚೆಲುವು ಒಲವು'(೧೯೫೩). ಇದೀಗ ಅನ್ವೇಷಣೆ ಆರಂಭ. ಚೆಲುವು ಒಲವುಗಳೆಂಬ ಲೋಕರುಚಿಗಳ ನಿಕಷದಲ್ಲಿ ನಂಬಿಕೆಯ ಪರೀಕ್ಷೆ. ಈ ಪರೀಕ್ಷೆ ಮುಂದೆ ಬಹುಶಃ 'ಅನಾವರಣ'(೧೯೬೩) ಸಂಕಲನದ ಹೊರತಾಗಿ, ಮಿಕ್ಕೆಲ್ಲ ಕವನ ಸಂಕಲನಗಳಲ್ಲಿನ ಅನೇಕ ಕವನಗಳ ('ಮಲ್ಲಿಗೆ', 'ಸುಂಟರಗಾಳಿ', 'ನಕ್ಷತ್ರ ಲೋಕ', 'ಜಡೆ', 'ಯಾರು', 'ಕೃಷ್ಣಶಕ್ತಿ', 'ಹುಟ್ಟಿದ ಹಬ್ಬ', 'ಕನಸಿನಿಂದ ನನಸಿಗೆ', 'ಆವಾಹನೆ', 'ಶಾಕುಂತಲ ಸಂಧ್ಯೆ', 'ಆದಿಕವಿಗೆ', 'ಒಂದುಸಂಜೆ', 'ವ್ಯಕ್ತಿತ್ವ', 'ನಿನ್ನ ನಗು', 'ವರ್ಷಕ್ಕೊಮ್ಮೆ', 'ಪುರಿ ಜಗನ್ನಾಥನ ದೇಗುಲದಲ್ಲಿ....', ಇತ್ಯಾದಿ) ವಸ್ತುವಾಗಿ ಬೆಳೆದು ಕಾವ್ಯದ ಕಸಬುದಾರಿಕೆಯಲ್ಲಿ ಹದಗೊಂಡು ಅವರ ಈವರೆಗಿನ ಕೊನೆಯ ಸಂಕಲನ 'ಚಕ್ರಗತಿ'ಯ ಕೊನೆಯ ಕವನ 'ಅಸ್ತಮಾನ'ದಲ್ಲಿ ತಾನೇತಾನಾಗಿ ಜಿ.ಎಸ್.ಎಸ್. ಅವರ ಕಾವ್ಯಸಾಧನೆಯ ಉತ್ತುಂಗ ಶಿಖರದಂತೆ ಒಂದು ಕವಿತೆಯಾಗಿ ಹೊರಹೊಮ್ಮುತ್ತದೆ. ಶ್ರೀಕೃಷ್ಣನ ಸಾವನ್ನು ಚಿತ್ರಿಸುವ ಈ ಕವನದಲ್ಲಿ ಶ್ರೀಕೃಷ್ಣನೇ ಇಲ್ಲ. ಇದ್ದರೂ ಆತ ಲೋಕದ ವಿವಿಧ ರೂಪಗಳಲ್ಲಿ, ಬಣ್ಣಗಳಲ್ಲಿ ಪಡಿಮೂಡಿದ್ದಾನಷ್ಟೆ. ಆತನಿಗೆಂತಹ ಸಾವು?

....ಶ್ರೀಹರಿಪಾದ
ಅಪೂರ್ವ ಪಕ್ಷಿಯ ಹಾಗೆ ತೋರಿರಲು ದಟ್ಟ
ಪೊದೆಗಳ ನಡುವೆ, ಕೂಡಲೇ ಹೂಡಿ ಬಿಲ್ಲಿಗೆ ಬಾಣ
ಬಿಟ್ಟನು ಗುರಿಗೆ. ತಾಗಿದ್ದೆ ತಡ ಛಿಲ್ಲೆಂದು
ಚಿಮ್ಮಿತು ರಕ್ತ: ಕೆಂಪಾಯ್ತು ನೀಲಿ ಗಗನ
ಹೊಲದಲ್ಲಿ ಗೇಯುತ್ತಿದ್ದ ಆ ರೈತ ಕಂಡನೊಂ

ದದ್ಭುತವ : ಇದ್ದಕಿದ್ದಂತೆ ಸಂಜೆಯ ಸೂರ್ಯ
ಜಠ್ರನೆ ಜಾರಿ ಕಡಲೊಳಗೆ, ಪಾಂಚಜನ್ಯದ
ಮೊಳಗು ಒಂದೇ ಒಂದು ಕ್ಷಣ ಪರಮಾಶ್ಚರ್ಯ
ಪ್ರಭೆಯಾಗಿ ವ್ಯಾಪಿಸಿತು ಭೂಮಿ - ವ್ಯೋಮಗಳನ್ನು.
ಬೆರಗಾಗಿ, ನೇಗಿಲ ಹೊತ್ತು ನಡೆದನು ರೈತ
ಇಡೀ ದಿವಸ ಹರಗಿ ಹದಮಾಡಿದ್ದ ಹೊಲದೊಳಗೆ
ಬೀಜ ಬಿತ್ತುವ ಬಗ್ಗೆ ಯೋಚಿಸುತ್ತ.

ಲೋಕದ ಪ್ರತಿರೂಪದಂತಿದ್ದ ಅಥವಾ ಯಾರಿಗೆ ಲೋಕವೇ ಪ್ರತಿರೂಪವಾಗಿತ್ತೋ ಆತನೇ ಸತ್ತಗೂ , ಲೋಕಚಕ್ರ ಬೀಜಬಿತ್ತುತ್ತ ಸುತ್ತುತ್ತಲೇ ಇದೆ . ಇದೇ ಚೋದ್ಯ . ಈ ಕರ್ಮಚಕ್ರದ ಚೋದ್ಯವನ್ನು ಮೌನದೊಳಗೆ ಅರಿಯುವ ಪ್ರತಿಭೆ ಈ ಕವನದಲ್ಲಿದೆ. ಹಾಗೇ ಜಿ.ಎಸ್.ಎಸ್. ಅವರ ಕಾವ್ಯಚಕ್ರ ಒಂದು ಸುತ್ತು ಮುಗಿಸುತ್ತಿರುವ ಸೂಚನೆಯೂ ಇಲ್ಲಿದೆ: (ಆರಂಭಿಕ ಕವನಗಳ) ನಂಬಿಕೆ ಇಲ್ಲಿ ಅನುಭವದ (ಕರ್ಮಚಕ್ರದ) ಮೂಲಕ ಅನುಭಾವವಾಗಿ ಮಾಗುತ್ತಿದೆ . ಈ ಅರ್ಥದಲ್ಲೇ ನಾನು ಎಲ್ಲ ಪ್ರತಿಭಾವಂತ ಕವಿಗಳಂತೆ ಶಿವರುದ್ರಪ್ಪನವರೂ ತಮ್ಮ ಮೊದಲ ಕವನ ಸಂಕಲನದ ಪದ್ಯಗಳನ್ನೇ ಈಗಲೂ ಮತ್ತೆ ಮತ್ತೆ ಬರೆಯುತ್ತಾ ಅವುಗಳಿಗೆ ಹೊಸ ಜನ್ಮ ನೀಡುವ ವಿಸ್ಮಯ ಸೃಷ್ಟಿಸುತ್ತಿದ್ದಾರೆಂದು ಹೇಳಿದ್ದು . ಇಂತಹ ಕವಿ ಚಾರಿತ್ರಿಕ ಅನಿವಾರ್ಯತೆಗಳಿಂದಾಗಿ ಲೋಕಮಗ್ನತೆಗೆ ಈಡಾದಾಗಲೂ ಅಗ್ಗದ ಕಾವ್ಯ ಸೃಷ್ಟಿಸಲಾರ . ಜಿ.ಎಸ್.ಎಸ್. ಅವರ ಸಾಮಾಜಿಕವೆಂದು ವರ್ಗೀಕರಿಸಬಹುದಾದ ಬಹಳಷ್ಟು ಕವನಗಳು ಕೇವಲ ಪ್ರತಿಕ್ರಿಯೆಗಳು ಅಥವಾ ಆವೇಶಾತ್ಮಕ ಹೇಳಿಕೆಗಳಾಗದೆ ಪಾರಾಗಿರುವುದಕ್ಕೆ ಇದೇ ಮುಖ್ಯಕಾರಣವೆಂದು ನಾನು ಭಾವಿಸುತ್ತೇನೆ. ಏನಾದರೂ ಇವು, ಕವಿ ತನ್ನ ಕಾವ್ಯಚಕ್ರದ ಒಂದು ಪೂರ್ಣ ಸುತ್ತನ್ನು ಮುಗಿಸುವಾಗ ನಡೆಸಿದ ಪ್ರಯೋಗಗಳು ಹಾಗೂ ಅಭ್ಯಾಸಗಳೇ ಅಲ್ಲವೇ ? ಈ ಪ್ರಯೋಗ - ಅಭ್ಯಾಸಗಳ ಒಂದು ಸ್ಥೂಲ ಪರಿಶೀಲನೆ ಜಿ.ಎಸ್.ಎಸ್. ಅವರ ಕಾವ್ಯದ ಸಾಮಾಜಿಕ ಆಯಾಮಗಳನ್ನೂ , ಜೊತೆ ಜೊತೆಗೇ ಅದರ ವಿಕಾಸದ ಹಾದಿಯ ವಿನ್ಯಾಸ - ಗತಿಗಳನ್ನೂ ಪರಿಚಯಿಸುತ್ತದೆ .

-೨-

ಹಾಗೆ ನೋಡಿದರೆ ಜಿ.ಎಸ್.ಎಸ್. ಅವರ ಆರಂಭಿಕ ನಂಬಿಕೆಯ ಕವನಗಳಲ್ಲೇ ಸಾಮಾಜಿಕತೆ ಅಂತರ್ಗತವಾಗಿದೆ . ಅತೀತವನ್ನು ಸಾಧಿಸುವುದು ಎಂದರೆ ಲೋಕವನ್ನು ಅರ್ಥೈಸಿಕೊಂಡು ಅದನ್ನು ದಾಟಿ ನಿಲ್ಲುವುದು . ಲೋಕವನ್ನು ಅರ್ಥೈಸಿಕೊಳ್ಳುವುದೆಂದರೆ ಲೋಕದ ದುಖಃವನ್ನು ಅರ್ಥೈಸಿಕೊಳ್ಳುವುದು ; ಲೋಕದ ದುಖಃದೊಂದಿಗೆ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವುದು . ಇದು ತಾತ್ವಿಕವಾಗಿ ಬುದ್ಧ - ಬಸವ - ರಾಮಕೃಷ್ಣ - ವಿವೇಕಾನಂದರ ದಾರಿ . ಈ ದಾರಿಯಲ್ಲೇ ನಡೆದು ಸಾಧಿಸಿಕೊಂಡ ಅದ್ವಯ ದೃಷ್ಟಿಕೋನದಿಂದಾಗಿ , **ಜಲಗಾರ**ನಲ್ಲಿ ಶಿವನನ್ನು ಕಾಣಲು ಹಿಂಜರಿಯದ ಕುವೆಂಪು ಅವರ ಪ್ರಿಯ ಶಿಷ್ಯರಾದ ಜಿ.ಎಸ್.ಎಸ್. ಅವರ ಕಾಣ್ಕೆ ಕೂಡಾ ಅದೇನೇ. 'ಅಲ್ಲಿ - ಇಲ್ಲಿ ' ಎಂಬ ಅವರ ಎರಡನೇ ಕವನದಲ್ಲೇ ಶಿವನು ' ಉಡುಗಣವೇಷ್ಟಿತ ಚಂದ್ರ ಸುಶೋಭಿತ ದಿವ್ಯಾಂಬರ ಸಂಚಾರಿ/ ಕಣ್ಣ

ನೀರಿನಲಿ ಮಣ್ಣಧೂಳಿನಲಿ ಹೊರಳುತ್ತಿರುವರ **ಸಹಚಾರಿ** 'ಯಾಗಿ ಕಾಣುತ್ತಾನೆ . ಅಷ್ಟೆ ಅಲ್ಲ, ಮುಂದಿನ ಒಂದು ಕವನದಲ್ಲಿ ಕಣ್ಣೀರೇ ಜಗದ ಹೃದಯ ಇರಬಹುದೆಂಬ ಭಾವವೂ ಇವರನ್ನಾವರಿಸುತ್ತದೆ . 'ಕಣ್ಣೀರು 'ಎಂಬ ಕವನದ ಕೊನೆಯ ಈ ಮೂರು ಸಾಲುಗಳನ್ನು ಗಮನಿಸಿ :

ಕಣ್ಣೀರಿನಲಿ ಕಾಲದೇಶಗಳು ಕರಗುವುವು
ವಿಶ್ವದಲಿ ತೇಲುವೀ ಬ್ರಹ್ಮಾಂಡಗಳು ಎಲ್ಲ -
ಕಣ್ಣೀರಿನುಂಡೆಗಳೋ ಬಲ್ಲವನೆ ಬಲ್ಲ

ಹಾಗೇ '**ಹಣತೆ**' ಎಂಬ ಕವನದಲ್ಲಿ

ಈ ಮುರುಕು ಗುಡಿಸಿಲಿನಲಿ
ಕಿರಿ ಹಣತೆ ಬೆಳಗುತಿದೆ
ಧ್ಯಾನಸ್ಥಯೋಗಿಯೊಲು ಸ್ತಿಮಿತವಾಗಿ
ಬಡವರಾತ್ಮದ ಹಣತೆ
ಇಂತೆ ಬೆಳಗುವುದಲ್ತೆ
ಅಜ್ಞಾತವಾಸದಲಿ ದೀನವಾಗಿ -

ಎಂದು ಹೇಳುವಾಗಾಗಲೀ ಅಥವಾ 'ನೆಲದ ಕರೆ ' ಎಂಬ ಕವನದಲ್ಲಿ

ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೇ
ನಾಲ್ಕು ಹನಿಯ ಚೆಲ್ಲಿ
ದಿನದಿನವು ಕಾದು ಬಾಯಾರಿ ಬೆಂದೆ
ಬೆಂಗದಿರ ತಾಪದಲ್ಲಿ
....
ಓ ಬನ್ನಿ ಬನ್ನಿ, ಓ ಬನ್ನಿ ಬನ್ನಿ
ನನ್ನೆದೆಗೆ ತಂಪ ತನ್ನಿ
ನೊಂದ ಜೀವರಿಗೆ ತಂಪನೀಯುವುದೆ
ಪರಮ ಪೂಜೆಯೆನ್ನಿ

ಎಂದು ಹೇಳುವಾಗಾಗಲೀ ,ಕವಿಗೆ ಲೋಕವನ್ನು ದಾಟುವುದೆಂದರೆ ದುಃಖವನ್ನು ದಾಟುವುದು. ಅದೇ ಅತೀತದೆಡೆಗೆ ನಮ್ಮನ್ನು ಕೊಂಡೊಯ್ಯುವುದು ಎಂಬ ತಿಳುವಳಿಕೆ ಇರುವುದು ಗೊತ್ತಾಗುತ್ತದೆ . ಅಂದರೆ ಅತೀತದ ಹಾದಿಯನ್ನು ಲೋಕದೊಳಗೇ ಹುಡುಕಿಕೊಂಡು ಹೊರಟಿರುವ ಸಹಜತೆಯ ಸೂಚನೆಯೂ ಇಲ್ಲಿದೆ .

ಜಿ. ಎಸ್. ಎಸ್. ಅವರ ಕಾವ್ಯದ ಮುಂದಿನ ಘಟ್ಟವೆಲ್ಲ ಲೋಕದೊಡನೆ ವ್ಯವಹರಿಸಿದುದರ ಅನುಭವಗಳ ಒರೆಗಲ್ಲಿನ ಮೇಲೆ ಒಳಗಿನ ನಂಬಿಕೆಯನ್ನು ತಿಕ್ಕಿತೀಡುವುದಕ್ಕೆ ಮೀಸಲಾದದ್ದು . ಈ ಹಿನ್ನೆಲೆಯಲ್ಲಿ 'ದೇವಶಿಲ್ಪಿ '(೧೯೫೬) ಸಂಕಲನದ 'ಇದು ಲೋಕವಂತೆ' ಕವನದಲ್ಲಿ ಮೊದಲಬಾರಿಗೆ ವ್ಯಕ್ತವಾಗಿರುವ ಕವಿಯ ಈ ಸಿನಿಕತೆಯನ್ನು ಗಮನಿಸಿ :

ಹೊಗಳುಭಟ್ಟರ ಸಂತೆ
ಇದು ಲೋಕವಂತೆ
ಎಲ್ಲೆಲ್ಲಿಯೂ ಇವರೆ
ಕಂತೆ ಕಂತೆ
ಆದರ್ಶ ಗೀದರ್ಶ
ಬರಿ ಬಣಗು ಕಂತೆ
ಪುಸ್ತಕದ ಬದನೆಕಾಯಿ
ತಿನುವುದಕೆ ಬಂತೆ ?
....
ಹೊಗಳಿ ಹೊಗಳಿಸಿಕೊಳುವ
ಚಿಂತೆಯೇ ಚಿಂತೆ
ಒಂಟೆ ಮದುವೆಗೆ ಕತ್ತೆ
ಪದ ಹೇಳಿದಂತೆ ...

ಆದರೆ ಕವಿತೆಯ ಜಾಳುತನಕ್ಕೂ ಕಾರಣವಾಗಿರುವ ಈ ಸಿನಿಕತೆ ಇನ್ನೂ ಈ ಕವಿಯನ್ನು ಪೂರ್ಣ ಆವರಿಸಿಲ್ಲ ಎಂಬುದು ಅವರ ಮುಂದಿನ 'ದಾರಿ' ಎಂಬ ಪದ್ಯದಲ್ಲಿ ಸ್ಪಷ್ಟವಾಗುತ್ತದೆ:

ಹರಿದಾರಿ ಹರದಾರಿ ಹರಿದಿರುವ ದಾರಿ
ಅಲ್ಲಿಯೂ ದಾರಿ ಇಲ್ಲಿಯೂ ದಾರಿ
ಎಲ್ಲೆಲ್ಲಿಯೂ ನೂರು ದಾರಿ
....
ನಡೆದುದೇ ದಾರಿ ನುಡಿದುದೇ ದಾರಿ
ಎಂಬ ರೀತಿಯಲ್ಲಿ
ನೂರು ದಾರಿಗಳ ಜೇಡಜಾಲದಲಿ
ದಿಕ್ಕು ತಪ್ಪಲೆದು
ಇದು ಪ್ರಗತಿಯೆಂದು ಕರೆದು
ತಡಕಾಡುತಿಹುದು ಮನುಕುಲವು ನೋಡು
ಆ **ಜ್ಯೋತಿ ಪಥವ** ಮರೆತು

ಈ ಜ್ಯೋತಿ ಪಥದ ನೆನಪು ಮರೆವುಗಳ ಉಯ್ಯಾಲೆ 'ದೀಪದ ಹೆಜ್ಜೆ' (೧೯೫೫) ಹಾಗೂ 'ಕಾರ್ತೀಕ' (೧೯೬೧) ಕವನಸಂಕಲನದುದ್ದಕ್ಕೂ ಜೀಕಿರುವುದನ್ನು ನಾವು ಗಮನಿಸಬಹುದು. ಈ ಜೀಕು ಶಿವರುದ್ರಪ್ಪನವರ ಈ ಘಟ್ಟದ ಕಾವ್ಯಕ್ಕೆ ಹೊಸ ಚಲನೆಯೊಂದಿಗೆ ಆಳ ಹಾಗೂ ವಿಸ್ತಾರಗಳನ್ನು ತಂದುಕೊಟ್ಟಿದೆ. 'ದೀಪದ ಹೆಜ್ಜೆ' ಕವನಸಂಕಲನವಂತೂ ಜಿ.ಎಸ್.ಎಸ್. ಅವರ ಕಾವ್ಯ ಪ್ರಯೋಗಶೀಲತೆಯ ಅತ್ಯುತ್ತಮ ಉದಾಹರಣೆಗಳಿಂದ ತುಂಬಿ ಹೋಗಿದೆ. ನಂಬಿಕೆಯನ್ನು ಅನುಭವಗಳ ಒರೆಗಲ್ಲಿಗೆ ಹಚ್ಚಿ ಪರಿಶೀಲಿಸಿದಾಗ ಕಂಡ ಬದುಕಿನ ಕಟು ನಿಷ್ಠುರತೆ ಕವಿಯ ಹೃದಯಕ್ಕೆ ಬಲವಾಗಿ ತಾಕತೊಡಗಿ

ರುವುದನ್ನು ಇಲ್ಲಿನ ಕವನಗಳಲ್ಲಿ ನೋಡಬಹುದು .'ಇವನು 'ಕವನದ ಈ ಸಾಲುಗಳನ್ನು ಕವಿ ಬದುಕನ್ನು ಈಗ ಮುಗ್ಧತೆಯನ್ನು ಮೆಟ್ಟಿನಿಂತ ಹೊಸ ನಿಷ್ಠುರತೆಯಿಂದ ನೋಡಲು ನಡೆಸಿರುವ ಪ್ರಯತ್ನದ ದೃಷ್ಟಿಯಿಂದ ಗಮನಿಸಿ :

ತಲೆಯ ತಪ್ಪಲೆಯಲ್ಲಿ
ವಿಚಾರಗಳ ಕುದಿತ
ಎದೆಯ ಗೂಡೊಳಗೆನಿತೊ
ಮುರಿದ ಗಡಿಯಾರಗಳತುಡಿತ
.. ..
ಸಿನಿಮ - ಹೊಟೆಲ್ - ಸರ್ಕಸ್ - ಆ ದೊಂಬರಾಟ
ಇಸ್ಪೀಟು - ಸಿಗರೇಟು - ಹಾವಾಡಿಗನ ಮಾಟ
ಕಾವ್ಯಪಾರಾಯಣ - ಭಾಷಣ - ಹರಿಕತೆಯ ಸವಿಯೂಟ
ಓ ಎಷ್ಟೊಂದು - ನೋವು ಮರೆಯಲು ಮಾನವನು
ಮಾಡಿರುವ ಹೂಟ

ಹಾಗೇ 'ಸಂಜೆದಾರಿ' ಎಂಬ ಕವನದ ಕಟುವಿಷಾದದ ಈ ಬಹು ಚಿತ್ರವತ್ತಾದ ಸಾಲುಗಳು:

ಕೈಹಿಡಿದ ಸರಪಳಿಯ ಜಗ್ಗುತಿದೆ ಕರಿನಾಯಿ
ಹೊಳೆ ಹೊಳೆವ ಕೆಂಗಣ್ಣು ಜೋಲ್ವ ನಾಲಿಗೆ ಬಾಯಿ
ಸಂಜೆ ಮುಗಿಲಿನ ಕೆಳಗೆ
ದೂರ ದೂರದವರೆಗೆ
ಮುಗಿವಿರದ ಪ್ರಶ್ನೆಯೊಲು ಹಾಸಿರಲು ಟಾರ್ ಬೀದಿ
ಕೈಹಿಡಿದು ಸರಪಳಿಯ ಜಗ್ಗುತಿದೆ ಕರಿನಾಯಿ ಮುಂದೆ ಮುಂದೆ
ಹಿಡಿದ ಕೈ ಸಾಗುತಿದೆ ಹಿಂದೆ ಹಿಂದೆ ...

ಈ ಕಟುಸತ್ಯದ ಅನುಭೂತಿ ಮುಂದಿನ ಇನ್ನೂ ಅನೇಕ ಕವನಗಳಲ್ಲಿ ಘನಗೊಂಡು 'ಕಾರ್ತೀಕ' ಸಂಕಲನದ 'ಕನಸಿನಿಂದ ನನಸಿಗೆ' ಎಂಬ ಕವನದಲ್ಲಿ ಈ ಬೆರಗು ಸೃಷ್ಟಿಯಾಗುವುದು :

ಯಾವ ಮಗ್ಗ ಇದು ! ಯಾರು ನೇಯುವರೋ ಕಾಣದಲ್ಲ ಲಾಳಿ !
ಕನಸಿನಿಂದ ಎಚ್ಚರದ ದಡಕೆ ಬಂದಿರುವ ಸೊಗದ ದಾಳಿ !
ದಿನವು ಹಡಗುಗಳು ಬಂದು ತಂಗುವುವು ಈ ತೆಂಗು ತೀರದಲ್ಲಿ
ಏನು ಬರುವುವೋ ಎಷ್ಟು ಬರುವುವೋ ಹೇಗೆ ಬರುವುವೋ
...ನಿಲವು ಪ್ರಶ್ನೆಯಲ್ಲಿ

- ೪ -

ಆದರೆ ಈ ಬೆರಗು ,ಪ್ರಶ್ನೆ ಇದ್ದಕ್ಕಿದ್ದಂತೆ ಸ್ತಬ್ಧಗೊಂಡಂತೆ ಜಿ.ಎಸ್.ಎಸ್. ಅವರ ಕಾವ್ಯ ಒಂದು ಮಹಾನ್ ಸ್ಥಿತ್ಯಂತರವನ್ನು ಕಾಣುತ್ತಿದೆ , ಮುಂದಿನ ಕವನ ಸಂಕಲನಗಳಲ್ಲಿ. ಯಾಕೆ ಹೀಗೆಂದು ಕಾವ್ಯದ ಹೊರಗೆ ಕಾರಣಗಳನ್ನು ಹುಡುಕಲು ಹೊರಟರೆ, ಇದು ನೆಹರೂ

ಆಡಳಿತದ ಇಳಿಗಾಲದ ದಿನಗಳು ,ಮೌಲ್ಯಗಳ ಇಳಿದಾರಿಯ ದಿನಗಳು ಎಂಬುದು ಗೋಚರವಾಗುತ್ತದೆ. ಶಿವರುದ್ರಪ್ಪನವರ ಕಾವ್ಯಕ್ಕೆ ನಗರ ಪ್ರಜ್ಞೆಯ ಸೂಕ್ಷ್ಮಗಳೂ, ಉಪಮೆ-ಸಂಕೇತಗಳೂ ಹೊಸ ಉತ್ಸಾಹದೊಂದಿಗೆ ಪ್ರವೇಶಿಸಿದ ಕಾಲವಿದು .ಕವಿಯ ಮನಸ್ಸನ್ನು ಈಗ ಆಧುನಿಕ ಮಧ್ಯಮವರ್ಗದ ಪ್ರಜ್ಞೆ ಆವರಿಸಿಕೊಂಡಿರುವ ಸೂಚನೆಗಳನ್ನು ಇವರ ಮುಂದಿನ ಕವನಸಂಕಲನಗಳಾದ 'ಅನಾವರಣ '(೧೯೬೩) ಹಾಗೂ 'ತೆರೆದ ದಾರಿ' (೧೯೬೬) ಗಳ ಕವನಗಳಲ್ಲಿ ಕಾಣಬಹುದು .ಇಲ್ಲಿ ದೇವಿ , ಬೆಳದಿಂಗಳು , ಗುರು , ಹೂವು , ಹಕ್ಕಿಗಳಿಗೆ ಬದಲಾಗಿ ಗಾಂಧಿ ,ನೆಹರೂ ,ಹಳೇಪೇಪರ್ ಖಾಲಿಶೀಶೆಯವನಲ್ಲದೆ ; ನಾಯಿ, ಛತ್ರಿ , ಬಟ್ಟೆಯಂಗಡಿ , ಹೊಟೆಲ್ , ರೇಡಿಯೋ ಮುಂತಾದ ಸಾಮಾಜಿಕ ವ್ಯಕ್ತಿತ್ವಗಳೂ ಪ್ರತೀಕಗಳೂ ಇವರ ಕಾವ್ಯದ ವಸ್ತುಗಳಾಗಿರುವುದನ್ನು ನಾವು ಗಮನಿಸಬಹುದು .ಕವಿಯ ನಂಬಿಕೆ ಅಲ್ಲಾಡತೊಡಗಿದೆ.'ಕುಲುಮೆಯ ಒಳಗೆ ಕಿಡಿಯಿಲ್ಲ ','ನಾಯಿಗಳಿವೆ ಎಚ್ಚರಿಕೆ ', 'ಕೋಗಿಲೆ ರಿಪೇರಿ ' ಮುಂತಾದ ಕವನಗಳು ಕವಿಯ ಈ ವಿಚಲಿತ ಪ್ರಜ್ಞೆಗೆ ಸಾಕ್ಷಿಯಂತಿವೆ . ಕವಿ ಇಲ್ಲಿ ತಾನು ಪ್ರವೇಶಿಸಿರುವ ಅನುಭವ ಲೋಕದ ಎಲ್ಲ ತಲ್ಲಣ -ತರಂಗಾಂತರಗಳನ್ನೂ ನಿಭಾಯಿಸಲು ಬೇಕಾದ ತಕ್ಕ ಕಾವ್ಯ ಪರಿಕರಗಳಿಲ್ಲದೆ ತನ್ನ ಕಾವ್ಯವನ್ನು ವರ್ತಮಾನದ(ಸಾಮಾಜಿಕ) ಒತ್ತಡಗಳಿಗೆ ಒಪ್ಪಿಸಿಬಿಟ್ಟು ದಿಙ್ಮೂಢರಾಗಿ ಕೂತಂತೆ ತೋರುತ್ತದೆ.ಇದು ಆಧುನಿಕ ಮಧ್ಯಮವರ್ಗದ ಮಿತಿಗಳನ್ನು ಮೀರಲಾಗದ ಅಸಹಾಯಕ ಸ್ಥಿತಿಯೂ ಇರಬಹುದು .

ಇಲ್ಲಿಂದ ಮುಂದೆ ಸಾಮಾಜಿಕ ಸಮ್ಮೋಹಿನಿಗೊಳಗಾದಂತೆ ಜಿ.ಎಸ್.ಎಸ್. ಪೂರ್ಣವಾಗಿ ಸಾಮಾಜಿಕ ಕವಿಯಾಗಿ ಪರಿವರ್ತನೆಗೊಳ್ಳುತ್ತಾರೆ :ಮುಂದೆ ,ದೇಶಾದ್ಯಂತ ನಿಧಾನವಾಗಿ ತೆರೆ ತೆರೆಗಳಾಗಿ ಇತ್ತೀಚಿನವರೆಗೂ ನಮ್ಮ ರಾಷ್ಟ್ರಜೀವನದ ದಡಗಳನ್ನು ಅಪ್ಪಳಿಸಿದ ಸಾಮಾಜಿಕ / ರಾಜಕೀಯ ಪ್ರವಾಹಗಳು ಇವರ ಕಾವ್ಯವನ್ನು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಘಾಸಿಗೊಳಿಸಿರುವುದನ್ನು ನಾವು ನೋಡಬಹುದು . ಜಿ.ಎಸ್.ಎಸ್. ಇಲ್ಲೆಲ್ಲಾ ತಮ್ಮ ವ್ಯಕ್ತಿತ್ವದ ಲಾಲಿತ್ಯವನ್ನೇ ಕಳೆದುಕೊಂಡಂತೆ ತಮ್ಮ ಕವನಗಳಲ್ಲಿ ಅಸಮಾಧಾನ ಆಕ್ರೋಶಗಳೇ ಮೇಲುಗೈ ಸಾಧಿಸಲು ಬಿಟ್ಟಿರುವುದು ಆಶ್ಚರ್ಯವನ್ನುಂಟುಮಾಡುತ್ತದೆ. ಜಿ.ಎಸ್.ಎಸ್.ಅವರ ಕಾವ್ಯಜೀವನ ನವೋದಯದಲ್ಲಿ ಆರಂಭವಾದರೂ ಅದು ನಂತರ ಪ್ರಗತಿಶೀಲ ,ನವ್ಯ ಹಾಗೂ ಬಂಡಾಯ ಎಂಬ ಮೂರು ಸಾಹಿತ್ಯ ಚಳುವಳಿಗಳ ಮೂಲಕ ಹಾದು ಬರಬೇಕಾಯಿತು .ಈ ಮೂರೂ ಚಳುವಳಿಗಳ ಅಡ್ಡ ಪರಿಣಾಮಗಳಿಗೆ ಜಿ.ಎಸ್.ಎಸ್.ಅವರ ಕಾವ್ಯ ಅನುಕ್ರಮವಾಗಿಯಲ್ಲದಿದ್ದರೂ ,ಸಂದರ್ಭಾನುಸಾರ ಈಡಾಗಿರುವುದನ್ನು ನಾವು ಕಾಣಬಹುದು .ಅದರ ಮೊದಲ ಸೂಚನೆ 'ತೆರೆದ ದಾರಿ 'ಯ 'ಸಾಕು ನಿಲ್ಲಿಸು ಸಾಮಗಾನ 'ಎಂಬ ಕವನದಲ್ಲಿ ಕಾಣಸಿಗುತ್ತದೆ .ಇವರ ಮೊದಲ ಕವನಸಂಕಲನದ ಹೆಸರು 'ಸಾಮಗಾನ 'ಎಂಬುದನ್ನು ನೆನಪಿಸಿಕೊಂಡಾಗ ಜಿ.ಎಸ್.ಎಸ್. ಇಲ್ಲಿ ತಮ್ಮ ಆವರೆಗಿನ ಕಾವ್ಯವನ್ನೇ ಧಿಃಕರಿಸಿ ನಿಂತಂತೆ ತೋರುತ್ತದೆ !ಕವಿ ತಮ್ಮ ಕಾವ್ಯದ ಬಗ್ಗೆ ತಾನೇ ನಂಬಿಕೆ ಕಳೆದುಕೊಂಡಿದ್ದಾರೆಯೆ ?ಈ ಕವನದಲ್ಲಿ ಮೊದಲ ಬಾರಿಗೆ ಕವಿ ಸಾಮಾಜಿಕವಾಗಿ ಆಸ್ಫೋಟಿಸುತ್ತಾರೆ :

ದೇಶಾದ್ಯಂತ ಅಣೆಕಟ್ಟುಗಳ ಕಟ್ಟಿ ನಾವು
ಬೆಳೆದಿದ್ದೇನು , ಬರಿ ಹಸಿವೆ ?
... ...
ಬಂತೆ ದೀಪಾವಳಿ ? ಇಷ್ಟೊಂದು ಹಣತೆಗಳಲ್ಲಿ
ಎಣ್ಣೆಯಿಲ್ಲ .
ಬರೀ ಮಾತುಗಳ ಕಡ್ಡಿ ಗೀಚುವಿಯಲ್ಲ ,
ನಿನಗೆ ನಾಚಿಕೆಯಿಲ್ಲ ?

ಹಾಗೇ 'ಸರಸ್ವತಿ ' ಎಂಬ ಕವನದಲ್ಲಿ ತಾವು ನಂಬಿದ್ದ ಶಕ್ತಿ ಸರಸ್ವತಿಯನ್ನು ಹೀಗೆ ಕೇಳಿಕೊಳ್ಳುತ್ತಾರೆ :

ಓ ತಾಯಿ ಸರಸ್ವತಿ
ನಿನ್ನ ವೀಣೆ ತಂತಿಗಳಲಿ
ಜೇಡ ಬಲೆಯ ನೂತಿದೆ
ನಿನ್ನ ಪಾದಪೀಠದ ಕೆಳ -
ಗಿಲಿ ಹೆಗ್ಗಣ ಸೇರಿವೆ
....
... ...
ಓ ತಾಯಿ ಸರಸ್ವತಿ
ಏನಿದೆಂಥ ದುರ್ಗತಿ
ಕಾಳಿಯಾಗಿ ಏಳು ತಾಯಿ
ಶೂಲವನ್ನು ತಾಳು ತಾಯಿ
ಕಲ್ಲಾದರೆ ನೀನು ಹೀಗೆ
ಹೇಳಿಕೊಳುವುದಾರಿಗೆ ?

ಕವಿ ಸಾಮಾಜಿಕವಾಗಿ ಎಷ್ಟು ಅಶಾಂತಿಗೀಡಾಗಿದ್ದಾರೆ , ಅಸಹಾಯಕರಾಗಿದ್ದಾರೆ ಎಂಬುದನ್ನು ಈ ಸಾಲುಗಳಲ್ಲಿ ಕಾಣಬಹುದು . ಆದರೆ ಏಕೆ ಎಂಬ ಪ್ರಶ್ನೆಗಳನ್ನು ಉತ್ತರಿಸುವಷ್ಟು ಶಕ್ತಿ ಈ ಸಾಲುಗಳಲ್ಲಿ ಇಲ್ಲ . ಜಿ.ಎಸ್.ಎಸ್. ಅವರ ಕಾವ್ಯದ ಹುಟ್ಟುಗುಣವಾದ ಸರಳ ಲಯವಷ್ಟೆ ಇಲ್ಲಿನ ಸಾಲುಗಳಿಗೆ ಕಾವ್ಯ ಶಕ್ತಿ ನೀಡಿರುವುದು . ಸಿಟ್ಟು ಸೆಡವು ಆಸ್ಫೋಟಗಳು ಈ ಕವಿಯ ಸಹಜ ಅಭಿವ್ಯಕ್ತಿ ರೂಪಗಳಲ್ಲ ; ಇವುಗಳ ಪ್ರಯೋಗದಿಂದ ಇವರ ಕಾವ್ಯ ಬಿರುಕು ಬಿಡ ತೊಡಗಿದೆಂಬುದನ್ನು ಈ ಘಟ್ಟದ ಇವರ ಅನೇಕ ಕವನಗಳಲ್ಲಿ ಕಾಣಬಹುದು . ಈ ಅಶಾಂತ ಘಟ್ಟ 'ದೋಷೋದ್ಧಾರಕ ', 'ನಿತ್ಯಕಥೆ ', 'ದಾಸಪಂಥ ' ಮುಂತಾದ ಸಾಮಾಜಿಕ ಪರಿವೇಷವುಳ್ಳ ಕವನಗಳ ಮೂಲಕ ಕಾವ್ಯದೊಳಕ್ಕೆ ಅಶಾಂತಿಯ ಜೊತೆಗೆ ವ್ಯಂಗ್ಯ,, ಕಟಕಿಗಳನ್ನೂ ತಂದುಕೊಳ್ಳುತ್ತಾ 'ಗೋಡೆ' (೧೯೭೨) ಎಂಬ , ಜಿ.ಎಸ್.ಎಸ್. ಅವರ ಕಾವ್ಯಜೀವನದ ಈ ನಿರ್ಬಂಧಿತ ಘಟ್ಟಕ್ಕೆ ಅರ್ಥಪೂರ್ಣವೆನಿಸುವ ಶೀರ್ಷಿಕೆಯ ಕವನಸಂಕಲನವನ್ನು ಪ್ರವೇಶಿಸುತ್ತದೆ .

- ೫ -

ಇದೀಗ ಅವರ ಕಾವ್ಯಜೀವನದ ಹೊಸ ಸವಾಲು. ಸರಳ ವ್ಯಂಗ್ಯ, ಕಟಕಿಗಳಲ್ಲೇ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳುವ ಅಶಾಂತಿ ಎಂಬ, ಸುತ್ತ ಎದ್ದಿರುವ ಗೋಡೆಯನ್ನು ದಾಟಿ ಮತ್ತೆ ಕಾವ್ಯದಲ್ಲಿ ಸಮತೆಯನ್ನು ಸಾಧಿಸಿಕೊಳ್ಳಬೇಕಾದ ಸವಾಲು. ಈ ಸವಾಲಿಗೆ ಆತ್ಮಪರಿವೀಕ್ಷಣೆಯೇ ಉತ್ತರ ಎಂಬುದು ಕವಿಗೂ ಈ ಹೊತ್ತಿಗೆ ಗೊತ್ತಾಗಿದೆ. ಇದರ ಹೊಳಹುಗಳನ್ನು 'ಗೋಡೆ' ಮತ್ತು ಮುಂದಿನ, ಇದರಂತೆಯೇ ಇನ್ನೊಂದು ಅರ್ಥಪೂರ್ಣ ಶೀರ್ಷಿಕೆಯುಳ್ಳ 'ಕಾಡಿನ ಕತ್ತಲೆಯಲ್ಲಿ '(೧೯೮೨) ಎಂಬ ಕವನಸಂಕಲನಗಳ ಮುಖ್ಯ ಕವನಗಳಲ್ಲಿ ಕಾಣಬಹುದು. 'ಗಾಂಧಿ ಶತಮಾನೋತ್ಸವ' ಎಂಬ ಕವನದಲ್ಲಿ, ಹಬ್ಬಿರುವ ಮಬ್ಬಿನೊಳಗೆ ನಮ್ಮೆಲ್ಲರಲ್ಲೂ ಅಂತಃಸಾಕ್ಷಿಯಾಗಿ ಅಡಗಿರುವ ಗಾಂಧಿಯನ್ನು ಕಲ್ಪಿಸಿಕೊಳ್ಳುವ ಪರಿ ಇದು -

ನಾವೂ ಇದ್ದೇವೆ -
ಮೂಲೆಯಲ್ಲಿ ಮಿಣ ಮಿಣ ಮೋಂಬತ್ತಿ ಮಬ್ಬಿನ ಸುತ್ತ
ಎಲೆ ತಿರುವಿ ಹಾಕುತ್ತ
ಅವರಿವರ ಪಾಚಿಗಟ್ಟಿದ ಮಾತಿನ ಮೇಲೆ ಕಾಲೂರಿ ನಡೆಯುತ್ತ
ಗದ್ದುಗೆಯ ಮೇಲೆ ವಿರಾಜಿಸುವ ಹದ್ದುಗಣ್ಣಿನ
ಮೃಗರಾಜನೆದುರು ಪಂಚತಂತ್ರ ಪ್ರತಿಭೆಯಲ್ಲಿ ಬಾಲವಲ್ಲಾಡಿ
-ಸುತ್ತಾ, ಗುಂಪಿನಲ್ಲಿ ಗೋವಿಂದವಾಗುತ್ತ
ಬೇಯುವಲ್ಲೆಲ್ಲಾ ನುಗ್ಗಿ, ಕೈಗೆ ಸಿಕ್ಕಷ್ಟು ಲಪಟಾಯಿಸುತ್ತಾ
ಬೀದಿ ಧೂಳುಗಳ, ಗಲ್ಲಿಗಳ, ಕೊಳಕುಗಳ
ಕಿರುಚುಗಳ, ಬಣ್ಣಗಳ, ಕಣ್ಣುಗಳ ನಡೂಮಧ್ಯ
ನಾವೂ ಇದ್ದೇವೆ......
ಇದ್ದಕಿದ್ದಂತೆ ಇದರೊಳಗೆ ಯಾರೋ
ಕೋಲು ಕುಟ್ಟುವ ಸದ್ದು ಕೇಳುತ್ತದೆ.
ಯಾರೋ ಸಣ್ಣಗೆ ಕಣ್ ತೆರೆದು ನಮ್ಮೊಳಗನ್ನೆಲ್ಲಾ
ಟಾರ್ಚ್ ಹಾಕಿ ಝಗ್ಗೆಂದು ಬಯಲಿಗೆಳೆದಂತೆ
ಭಯವಾಗುತ್ತದೆ...

ಅಂತಃಸಾಕ್ಷಿಯನ್ನೇ ಕಳೆದುಕೊಂಡಂತಿರುವ ಇಡೀ ರಾಷ್ಟ್ರದ ಈ ದುರಂತಮಯ ಸ್ಥಿತಿಯನ್ನು ಮಹಾಭಾರತದ ಒಂದು ದೃಶ್ಯೋಪಮೆಯ ಮೂಲಕ ಕಾವ್ಯದ ಎಲ್ಲ ಆಂತರಿಕ ಕ್ರಿಯಾಶೀಲತೆಯೊಡನೆ ಹೊರ ಹೊಮ್ಮುವ ಚಿತ್ರವತ್ತತೆಯಲ್ಲಿ ಕಟ್ಟಿಕೊಡುವ 'ಭೀಮಾಲಾಪ', ಜಿ.ಎಸ್.ಎಸ್. ತಮ್ಮ ಈ ಸಾಮಾಜಿಕ ಕಾವ್ಯ ಪ್ರಯೋಗದಲ್ಲಿ ಸಾಧಿಸಿದ ಕೌಶಲ್ಯದ ಅತ್ಯುತ್ತಮ ಉದಾಹರಣೆಯಂತಿದೆ. ಕವಿ ತನ್ನನ್ನು ಇಲ್ಲಿ ದುಃಖಧ್ಯಾನಿತನಾಗಿರುವಂತೆ ತೋರುವ ಭೀಮನಿಗೆ ಹೋಲಿಸಿಕೊಂಡು ಬರೆಯುತ್ತಾರೆ:

ಸೀರೆ ಉಟ್ಟು, ಬಳೆತೊಟ್ಟು, ಕಾಲಿಗೆ

ಗೆಜ್ಜೆ ಕಟ್ಟಿದ್ದಾನೆ ಒಬ್ಬ
ಇನ್ನೊಬ್ಬ ಕಾವಿ ಉಟ್ಟು
ಮೂಲೆಗೆ ಕೂತಿದ್ದಾನೆ
ದನದ ಕೊಟ್ಟಿಗೆಯಲ್ಲಿ ಒಬ್ಬ, ಕುದುರೆ ಲಾಯದಲ್ಲಿ
ಮತ್ತೊಬ್ಬ
ಇದ್ದಾಳೆ ಇವಳು ಅವರಿವರ ತಲೆಯ
ಹೇನು ಹೆಕ್ಕುತ್ತಾ
ಆಗಾಗ ನಮ್ಮನ್ನೂ ಕುಕ್ಕುತ್ತಾ
ನಾನೂ ಇದ್ದೇನೆ - ಅಡುಗೆ ಮನೆಯಲ್ಲಿ
ಉರಿವ ಸೌದೆಗಳ ಜೊತೆಗೆ
ಪಾತ್ರೆಗಳಲ್ಲಿ ಕೊತ ಕೊತ ಕುದಿದು
ಹಳೆಯ ನೆನಪುಗಳನ್ನು ರುಬ್ಬುತ್ತಾ...

ಈ ದುಃಖಧ್ಯಾನ ಮುಗಿಯುವುದು ಈ ಎಚ್ಚರದಲ್ಲಿ -

ಗೆರೆ ದಾಟಲಾರದ ನಾನು ಕಾಯುತ್ತಿದ್ದೇನೆ
ಉರಿವ ಸೌದೆಗಳ ಜೊತೆಗೆ
ಪಾತ್ರೆಗಳಲ್ಲಿ ಕೊತ ಕೊತ ಕುದಿದು ಕಾಯುತ್ತಿದ್ದೇನೆ.

ಗೆರೆ ದಾಟಲಾರದ ಎಚ್ಚರ ಇಲ್ಲಿ ಕವಿತೆಯೊಳಗಿನ ಭೀಮನದು ಮಾತ್ರವಲ್ಲ; ಕವಿತೆ ಕಟ್ಟುವ ಕಸಬುದಾರಿಕೆಯ ಎಚ್ಚರ ಕೂಡಾ. ನವ್ಯರ ಮಧ್ಯ ಇದ್ದೂ, ಕವಿತೆ ಅನಗತ್ಯವಾಗಿ ಅಶ್ಲೀಲವಾಗಲು ಬಿಡದ ಜಿ.ಎಸ್.ಎಸ್. ಅವರ ಆಂತರ್ಯದ ಎಚ್ಚರ ಕೂಡಾ ಇದು. ನವ್ಯರ ಸಾಮಾಜಿಕ ಕ್ರೋಧಕ್ಕೂ ಈ ಕವಿಯ ಸಾಮಾಜಿಕ ಕ್ರೋಧಕ್ಕೂ ಇರುವ ವ್ಯತ್ಯಾಸ ಇದೇ. ನವ್ಯರು ಇದನ್ನು ವೈಯುಕ್ತಿಕ ಕ್ರೋಧದ ಆಸ್ಫೋಟನೆಯ ಮೂಲಕ ವೈಯುಕ್ತಿಕವಾಗಿ ಪರಿಹರಿಸಿಕೊಳ್ಳುವುದರಲ್ಲೇ ತೃಪ್ತರಾದರೆ, ಈ ಕವಿ 'ಸಾಮಾಜಿಕ ಧ್ಯಾನ'ವೆಂಬ 'ಅಪಶಬ್ದ'ದ ಮೂಲಕ ಕರೆಯಬಹುದಾದ - ಎಲ್ಲಕ್ಕೂ ಪ್ರತಿಕ್ರಿಯಿಸುತ್ತಲೇ ಅದನ್ನು ಅರಿಯುವ, ವಾಸ್ತವ ಸತ್ಯಕ್ಕೆ ದಟ್ಟವಿಷಾದದೊಡನೆ ಎಚ್ಚರಗೊಳ್ಳುವ - ವ್ಯವಧಾನದ ಕ್ರಮವನ್ನು ಅನುಸರಿಸುವರು. ಇದು ಜಿ.ಎಸ್.ಎಸ್. ಈ ಮುನ್ನ ಅನುಭವಿಸಿದ ಆಧುನಿಕ ಕಾವ್ಯ ಪರಿಕರಗಳ ಕೊರತೆಯನ್ನು ತುಂಬಿಕೊಳ್ಳುವ ಸೃಜನಶೀಲ ಪ್ರಯತ್ನವೂ ಆಗಿರಬಹುದು. ಆದುದರಿಂದಲೇ ಜಿ.ಎಸ್.ಎಸ್. ಅವರ ಕಾವ್ಯದಲ್ಲಿ ನವ್ಯಕಾವ್ಯದ ತೀವ್ರತೆ ಹಾಗೂ ತುರ್ತು (ಹಾಹಾಕಾರ) ಎದ್ದು ಕಾಣುವುದಿಲ್ಲ. ಆದರೆ ಈ ತೀವ್ರತೆ ಹಾಗೂ ತುರ್ತುಗಳ ಹಿಂದಿರುವ ಅಹಂ ಮೂಲವಾದ ಅನಾಥಪ್ರಜ್ಞೆಗೆ ಪರ್ಯಾಪ್ತವಾದ ಸಾಮಾಜಿಕ ಆವೃತತೆಯಿಂದ ಹುಟ್ಟುವ ಆತ್ಮಸಾಕ್ಷ್ಯತ್ವದ ಪಾರದರ್ಶಕ ಬೆಳಕಿದೆ. ಜಿ.ಎಸ್.ಎಸ್. ತಮ್ಮ ಕಾವ್ಯ ಪ್ರಯೋಗದ ಮೂಲಕ ಕಂಡುಕೊಂಡ ಸಾಮಾಜಿಕ ಸತ್ಯದ ಈ ಪಾರದರ್ಶಕ ರೂಪವನ್ನು, ಅವರ 'ದುಃಸ್ವಪ್ನ' ಎಂಬ ಕವನದಲ್ಲಿ ಕಾಣಬಹುದು.

ಕಂಡೆ

ಎಂತೆಂಥವರು ಏನೇನೋ ಆದದ್ದಕಂಡೆ
ಗೊಮ್ಮಟನಾಗಿ ನಿಂತಿದ್ದ ಮಹಾಮೂರ್ತಿ
ಕರಗಿ ಕೊಚ್ಚೆಯಾಗಿ ಹರಿದದ್ದ ಕಂಡೆ
ಇಂದ್ರನೈರಾವತಕ್ಕೆ ತೊಣಚಿ ಹತ್ತಿ
ಬೀದಿನಾಯಾಗಿ ಬೂದಿಯಲ್ಲಿ ಹೊರಳಾಡಿದ್ದ ಕಂಡೆ
ನಿಗಿ ನಿಗಿ ಉರಿದ ಉಜ್ವಲ ಮಾತೆಲ್ಲ
ಬರೀ ಬೂದಿಯಾಗಿ ತೆಪ್ಪಗಾಗಿದ್ದ ಕಂಡೆ
ಕೊಳಕುಮಂಡಲಕ್ಕೆ ಏಳು ಹೆಡೆ ಮೂಡಿ
ಮಾನಸ ಸರೋವರದಲ್ಲಿ ಜಲಕ್ರೀಡೆಯಾಡಿದ್ದ ಕಂಡೆ

-ಹೀಗೆ ಅವನತಿಯ, ತಲ್ಲಣಗೊಳಿಸುವ ಚಿತ್ರ ಕೊಡಕೊಡುತ್ತಾ ಸಾಗುವ ಈ ಕವನ,

ಕಂಡು ಎಚ್ಚರಗೊಂಡೆ
ಎಚ್ಚರವೆಲ್ಲ ನಿಗಿ ನಿಗಿ ಕೆಂಡದ ಉಂಡೆ

ಎಂಬ ಅರಿವು - ಎಚ್ಚರಗಳ **ಸಾಮಾಜೀಕರಣ**ದಲ್ಲಿ ಮುಗಿಯುತ್ತದೆ. ಈವರೆಗಿನ ಸಿಟ್ಟು ವ್ಯಂಗ್ಯ, ವಿಷಾದಗಳೆಲ್ಲ ಮುಪ್ಪರಿಗೊಂಡು ಗ್ರಹಿಕೆಯ ಹೊಸ ಹದವೊಂದು ಸೃಷ್ಟಿಯಾಗಿದೆ ಇಲ್ಲಿ. ನಾನು ಈ ಮುನ್ನ ಅಪಶಬ್ದವೆಂದು ಬಳಸಿದ 'ಸಾಮಾಜಿಕ ಧ್ಯಾನ'ವೆಂದರೆ ಇದೇ. ಇದು ಕವಿಯನ್ನು 'ಸಾಮಾಜಿಕ ಸತ್ಯ'ದ ಪ್ರತಿಕ್ರಿಯಾತ್ಮಕ ಸ್ಥಿತಿಗೆ ಕೊಂಡೊಯ್ದಿದೆ. 'ಕಾಡಿನ ಕತ್ತಲಲ್ಲಿ' ಸಂಕಲನದ ಕೊನೆಯ ಪದ್ಯ 'ನಾನೇಕೆ ಬರೆಯುತ್ತೇನೆ', ಜಿ.ಎಸ್.ಎಸ್. ಕಂಡುಕೊಂಡಿರುವ ಸಾಮಾಜಿಕ ಸತ್ಯ ಹಾಗೂ ಕಾವ್ಯ ಸತ್ಯಗಳೆರಡಕ್ಕೂ ಉದಾಹರಣೆಯಂತಿದೆ:

ನಾನು ಬರೆಯುತ್ತೇನೆ
ಸುಮ್ಮನಿಲಾರದ್ದಕ್ಕೆ
ನನ್ನ ವೇದನೆ ಸಂವೇದನೆಗಳನ್ನು
ಕ್ರಿಯೆ ಪ್ರತಿಕ್ರಿಯೆಗಳನ್ನು
ದಾಖಲು ಮಾಡುವುದಕ್ಕೆ
ನಿಂತ ನೀರಾಗದೆ, ಮುಂದಕ್ಕೆ
ಹರಿಯುವುದಕ್ಕೆ
ಎಲ್ಲದರ ಜತೆ ಬೆರೆಯುವುದಕ್ಕೆ
ನಾನು ಬರೆಯುತ್ತೇನೆ
ನನ್ನನ್ನು ನಾನು ಕಂಡುಕೊಳ್ಳುವುದಕ್ಕೆ
ಮತ್ತೆ ಕಾಣಿಸುವುದಕ್ಕೆ
ನಿಮ್ಮೊಂದಿಗೆ ಸಂವಾದಿಸುವುದಕ್ಕೆ
ನಾನು ಬರೆಯುತ್ತೇನೆ
ಖುಷಿಗೆ, ನೋವಿಗೆ
ರೊಚ್ಚಿಗೆ ಮತ್ತು ಹುಚ್ಚಿಗೆ

ಅಥವಾ ನಂದಿಸಬಾರದ ಕಿಚ್ಚಿಗೆ

ಜಿ.ಎಸ್.ಎಸ್.ಅವರ ಕಾವ್ಯದ ಸಾಮಾಜಿಕ ಸತ್ಯದ ಆವಿಷ್ಕಾರ ಹೀಗೆ ಒಡನಾಡಿ ಬದುಕುವುದರ ಮೂಲಕ ತನ್ನನ್ನು ತಾನು ಕಂಡುಕೊಳ್ಳುವುದರ ಸರಳ ಅರಿವಿನೊಂದಿಗೆ ಮುಕ್ತಾಯಗೊಳ್ಳುತ್ತದೆ .ವ್ಯಕ್ತಿಯೆಂದರೆ ಸಮಾಜದ ಇನ್ನೊಂದು ಮುಖ ;ಹಾಗೇ ಸಮಾಜವೆಂದರೆ ವ್ಯಕ್ತಿಯ ಇನ್ನೊಂದು ಮುಖ ಈ ಕಂಡರಿಸುವಿಕೆಯಲ್ಲಿ ಕಾಡಿನ ಕತ್ತಲಿನ ಹಾದಿ ಮುಗಿಯುತ್ತದೆ .ಹಾಗೆಯೇ ,ಮುಂದಿನ ಸಂಕಲನವಾದ 'ಪ್ರೀತಿ ಇಲ್ಲದ ಮೇಲೆ ' (೧೯೮೭)ಎಂಬ ಮತ್ತೊಂದು ಅರ್ಥಪೂರ್ಣವಾದ ಶೀರ್ಷಿಕೆಯುಳ್ಳ ಕವನಸಂಕಲನದ 'ಅವಸ್ಥೆ 'ಎಂಬ ಪದ್ಯದಲ್ಲಿ ಈ ಅರಿವು ಹೀಗೆ ವೈಯಕ್ತಿಕ ಸಾಕ್ಷಾತ್ಕಾರದ ರೂಪದಲ್ಲಿ ವ್ಯಕ್ತವಾಗಲು ಸಾಧ್ಯವಾಗಿದೆ :

ಚಳಿಗೆ ಗಡಗಡನೆ ನಡುಗಿ
ಮುದುರಿ ಮೂಲೆಗೆ ಕೂತ
ಹರಕು ಚಿಂದಿಯ ಪುಟ್ಟ ಹುಡುಗನನ್ನು ಕಂಡು
ಬೆಚ್ಚನೆಯ ಬಟ್ಟೆ ತೊಟ್ಟ ನನ್ನೊಳಗೂ
ನಡುಕ ಶುರುವಾಗುತ್ತದೆ .
ಅವನು ಹಾಗಿರೋದಿಕ್ಕೆ
ನಾನೂ ಕಾರಣ ಅನಿಸುತ್ತೆ

-ಎಂದು ಆರಂಭವಾಗುವ ಕವನ ,ಇಂತಹ ಹಲವು ಸಾಮಾಜಿಕ ಚಿತ್ರಗಳನ್ನು ನೀಡುತ್ತಾ

ಅವರೆಲ್ಲಾ ಹಾಗಿರೋದಕ್ಕೆ
ನಾನೂ ಕಾರಣ ಅನಿಸುತ್ತೆ

ಎಂದು ಪದೇ ಪದೇ ಮನವರಿಕೆ ಮಾಡಿಕೊಳ್ಳುವದು ,ಪುನರಾವೃತ್ತಿಯ ಲಯದಲ್ಲಿ ಮನಸ್ಸಿನಲ್ಲಿ ನಿಂತುಬಿಡುತ್ತದೆ .ಹಾಗೆ ನೋಡಿದರೆ ಈ ಸಂಕಲನದ - ಶೀರ್ಷಿಕಾ ಪದ್ಯವೂ ಸೇರಿದಂತೆ -ಹಲವು ಕವನಗಳು ಈ ಪುನರಾವೃತ್ತಿಯ ಲಯವನ್ನು ಬಳಸಿಕೊಂಡು ಪ್ರೀತಿ ಇಲ್ಲದ ಸ್ಥಿತಿಯ ಅರ್ಥಹೀನತೆಯನ್ನೂ,ಅಸಮಾನತೆಯನ್ನೂ ಮನವರಿಕೆ ಮಾಡಿಕೊಡು ವಂತಹ ಮನಕಲಕುವ ಪ್ರಶ್ನೆಗಳೊಂದಿಗೆ ಮನಸ್ಸನ್ನು ತುಂಬಿಕೊಳ್ಳುತ್ತವೆ :

ಪ್ರೀತಿ ಇಲ್ಲದ ಮೇಲೆ
ದಕ್ಷಿಣಾಫ್ರಿಕದ ಕಗ್ಗತ್ತಲಿಗೆ
ಬೆಳಕು ಮೂಡೀತು ಹೇಗೆ ?
ಸೆರೆಮನೆಯ ಕಂಬಿಯ ನಡುವೆ
ಕಮರುವ ಕನಸು ಕೊನರೀತು ಹೇಗೆ ?
ಬಿಳಿ ಜನರ ಕರಾಳ ಕಪ್ಪು ಹೃದಯಕ್ಕೆ
ಕ್ರಿಸ್ತನ ಕರುಣೆ ಅರ್ಥವಾದೀತು ಹೇಗೆ ?

-ಈ ಸಾಲುಗಳ ,ಕವನಗಳ ಪರಿಣಾಮಶೀಲತೆಗೆ ಮುಖ್ಯ ಕಾರಣ ಅವು ಬಿಡಿಸಿಡುವ ಸರಳ, ನೇರ ಆದರೆ ಆತ್ಮೀಯವಾದ ಸಾಮಾಜಿಕ ಚಿತ್ರಗಳ ಮೂಲಕ ಜಿನುಗುವ ದುಃಖ . ಇದು

ಮನವರಿಕೆಯ - ತನ್ನ ಕಾವ್ಯ ಪ್ರಯೋಗದ ನೆಲೆಯಲ್ಲಿಯೇ ಸಾಧಿಸಿಕೊಂಡ ಸಾಕ್ಷಾತ್ಕಾರ (realisation)ದ ಫಲವಾದ ದುಃಖ .ಇದು ಸಹಜವಾಗಿಯೇ ಅರಿವು ತುಂಬಿಕೊಂಡ ದುಃಖ. (ಸಂಸಾರ ದುಃಖಮಯ ಎಂಬ ಬುದ್ಧನ ಅರಿವಿನ ಬೇರಿನಲ್ಲಿರುವ ಪಾರಮಾರ್ಥಿಕ ದುಃಖ). ಈ ಲೇಖನದ ಪೀಠಿಕೆಯಲ್ಲಿ ಜಿ.ಎಸ್.ಎಸ್. ಅವರ ಕಾವ್ಯದ ಅಂತಿಮ ಬಿಕ್ಕಟ್ಟನ್ನು ಸೂಚಿಸುತ್ತದೆಂದು ಪ್ರಸ್ತಾಪಿಸಿದ 'ಯಾವ ಹಾಡ ಹಾಡಲಿ ?' ಕವನದ ತುಂಬಾ ತುಂಬಿಕೊಂಡಿರುವುದೂ ಪುನರಾವೃತ್ತಿಯ ಲಯ ಕೌಶಲ್ಯದ ಮೂಲಕ ಮಂಥನಗೊಂಡು ಹುಟ್ಟುವ ಇಂತಹ ದುಃಖವೇ. ಹೀಗಾಗಿ ಈ ದುಃಖ, ಜಿ.ಎಸ್.ಎಸ್. ಅವರ ಕಾವ್ಯದ ಅಂತಿಮ ಬಿಕ್ಕಟ್ಟಿನ ಹೇಗೋ ಹಾಗೆ ಅಂತಿಮ ಬಿಡುಗಡೆಯ ಅವಸ್ಥೆಯೂ ಹೌದು . ಹಾಗೇ ಪುನರಾವೃತ್ತಿಯ ಲಯವನ್ನು ತನ್ನೊಡಲೊಳಗೆ ಇಟ್ಟುಕೊಂಡ ಈ ಅವಸ್ಥೆಯಿಂದಾಗಿ ಜಿ.ಎಸ್.ಎಸ್. ಅವರ ಕಾವ್ಯದೊಳಕ್ಕೆ ಚಕ್ರದ ಪ್ರವೇಶದ ಪ್ರತೀಕವಾಗಿ ಅವರ ಕಾವ್ಯ ಹೊಸದೊಂದು ನೆಲೆ ಮುಟ್ಟುವ ಅಚ್ಚರಿಯನ್ನು ನಾವು ಮುಂದೆ ಕಾಣಬಹುದು. 'ಎಲ್ಲೋ ಮಗು ಅಳುತಾ ಇದೆ' ಕವನವನ್ನೇ ನೋಡಿ. ಇಲ್ಲಿ ಕವಿ, ದುಃಖವು ಮಗುವಿನ ದುಃಖದ ರೂಪಕದ ಮೂಲಕ ವೈಯುಕ್ತಿಕ - ಸಾಮಾಜಿಕ ಸ್ತರಗಳ ದ್ವಂದ್ವವನ್ನು ಮೀರಿ ಚರಿತ್ರೆಯ ಚಲನೆಗೆ ಶೃತಿಯಾಗುವುದನ್ನು ಕಂಡರಿಸುತ್ತಾರೆ :

ಎಲ್ಲೋ ಮಗು ಅಳುತಾ ಇದೆ
ಒಂದೆ ಸವನೆ
ದೂರದ ಬಿರುಗಾಳಿಯ ಮೊರೆಯಂತೆ
ಮುಗಿಲಿಂದಿಳಿಯುವ ಧಾರಾಕಾರದ
ಮಳೆಯಂತೆ

- ಎಂದು ಪ್ರಕೃತಿಲೋಕದ ರೂಪಕಾಲಂಕಾರಗಳ ಧ್ವನಿಶಕ್ತಿಯೊಂದಿಗೆ ಆರಂಭವಾಗಿ ಮತ್ತೆ ಮತ್ತೆ 'ಎಲ್ಲೋ ಮಗು ಅಳುತಾ ಇದೆ ಒಂದೇ ಸಮನೆ' ಎಂಬ ಪುನರಾವರ್ತನೆಯ ಲಯದ ಮೂಲಕ, ಮನುಷ್ಯ ಲೋಕದ ಸಾಹಸ ಸಾಧನೆಗಳನ್ನೆಲ್ಲ ಮಣ್ಣು ಮಾಡುವ ಆತ್ಯಂತಿಕ ದುರಂತದಲ್ಲಿ ತಾರಕವನ್ನು ಮುಟ್ಟಿ ಹೀಗೆ ಮುಗಿಯುತ್ತದೆ :

ಮಗು ಅಳುತಾ ಇದೆ ಒಂದೇ ಸಮನೆ
ಶತಶತಮಾನದ ಬೆವರಿನ ತೆನೆಗಳ -
ನೆತ್ತಿದ ಹೊಲ ಗದ್ದೆಗಳಲ್ಲಿ
ಕವಿ - ವಿಜ್ಞಾನಿಯ - ಕ್ರಾಂತಿಕಾರಿಗಳ
ಸಾಧನೆ - ಅನ್ವೇಷಣೆಗಳ ಹಾದಿಯಲಿ
ಬಿರುಗಣ್ಣುರಿಯಲಿ ಕಮರುವ ಕನಸಿನ
ಚಿತೆಯ ಜ್ವಾಲೆಗಳ ಧೂಮದಲಿ
ಚರಿತ್ರೆಯುದ್ದಕು ಕೆನೆವ ಕುದುರೆಗಳ
ರಥ ಚಕ್ರದ ಕೆಂಧೂಳಿಯಲಿ
ಎಲ್ಲೋ ಮಗು ಅಳುತಾ ಇದೆ ... .

ಈ ಚಕ್ರ ಚರಿತ್ರೆಯ ಚಕ್ರ. ಅಥವಾ ಕರ್ಮ ಚಕ್ರ. ದುಃಖದ ಸುಳಿ ಹುಟ್ಟುವುದೂ ಅಡಗುವುದೂ ಇದರ ಅಚ್ಚಿನಲ್ಲಿಯೇ. ಆದುದರಿಂದ ಈ ಸುಳಿಯಿಂದ ಬಿಡುಗಡೆ ಪಡೆಯುವ ಏಕೈಕ ಮಾರ್ಗವೆಂದರೆ ಈ ಚಕ್ರದ ಚಲನೆಯ ತರ್ಕವನ್ನು ಅರ್ಥಮಾಡಿಕೊಳ್ಳುವುದು. 'ಚರಿತ್ರೆ - ಪುರಾಣ' ಎಂಬ ಕವಿತೆಯಲ್ಲಿ ಕವಿಗೆ ಅದರ ಹೊಳಹು ಸಿಕ್ಕಿದೆ:

ಮುಂದಕ್ಕೆ ಚಲಿಸುತ್ತಿದ್ದರೆ ಅದು ಚರಿತ್ರೆ
ನಿಂತು ಮಡುಗಟ್ಟಿದರೆ ಪುರಾಣ
ಪರಿಸ್ಥಿತಿ ಹೀಗೆ ಪುರಾಣವಾಗುತ್ತಲೇ
ಶುರುವಾಗುತ್ತದೆ ಅದರ ಪಾರಾಯಣ.

- ಚರಿತ್ರೆ - ಪುರಾಣಗಳ ರೂಪಾಂತರದ ಈ ಚಕ್ರೀಯ ಸತ್ಯದ ಹೊಳಹು ಜಿ.ಎಸ್.ಎಸ್. ಅವರ ಕಾವ್ಯವನ್ನು ಒಂದು ಹೊಸನೆಲೆಗೇ ಒಯ್ಯುತ್ತದೆ. ಇಲ್ಲಿಂದ ಅವರ ಕಾವ್ಯದ ಜನ್ಮಾಂತರ ಆರಂಭ.

- ೬ -

ಜನ್ಮಾಂತರವೆಂದರೆ ಒಂದು ಅವಸ್ಥೆಯ ಅನುಭವ - ಅನುಭೂತಿ - ತಿಳುವಳಿಕೆಯನ್ನೆಲ್ಲ ಬೀಜೀಕರಿಸಿಕೊಂಡು ಮಣ್ಣಲ್ಲಿ (ಕಾಲದಲ್ಲಿ) ಮಲಗಿ ಮತ್ತೆ ಗಿಡವಾಗಿ ಎದ್ದು ಮರವಾಗಿ ಅರಳುವುದು. ಜಿ.ಎಸ್.ಎಸ್. ಅವರ ಈವರೆಗಿನ ಕೊನೆಯ ಸಂಕಲನ 'ಚಕ್ರಗತಿ' (೧೯೯೨) ಯಲ್ಲಿ ನಾವು ಹಳೆಯ ಕಾವ್ಯ ಪ್ರಯೋಗಗಳೆಲ್ಲದರಿಂದ ಹೊಮ್ಮಿದ ಹೊಸ ಎಚ್ಚರ ಕೌಶಲಗಳ ಸ್ಪಷ್ಟ ಸೂಚನೆಗಳನ್ನು ಕಾಣಬಹುದು. ವ್ಯಕ್ತಿ ಮತ್ತು ಅತೀತದ ಸಂಬಂಧವನ್ನು ನಂಬಿಕೆಯ ನೆಲೆಯಲ್ಲಿ ಒಪ್ಪಿಕೊಂಡು ಆರಂಭವಾದ ಇವರ ಕವಿತೆ ವೈಚಾರಿಕತೆಗೆ ತೆರೆದುಕೊಳ್ಳುತ್ತಾ ವ್ಯಕ್ತಿ ಮತ್ತು ಸಮಾಜಗಳ ನಡುವಣ ಸಂಬಂಧದ ಅನ್ವೇಷಣೆಗೆ ತಿರುಗಿ ಅದು ಮಾಗಿದಂತೆ ಮತ್ತೆ ಇನ್ನೊಂದು ಸ್ತರದಲ್ಲಿ ವ್ಯಕ್ತಿ ಮತ್ತು ಅತೀತದ ನಡುವಣ ಸಂಬಂಧವೇ ಆಗಿರುವುದನ್ನೂ; ಈ ಎಲ್ಲ ಸಂಬಂಧಗಳೂ ಅರಿವು ತುಂಬಿಕೊಂಡ ದುಃಖದ ಮೂಲಕವೇ ಅರ್ಥಪೂರ್ಣವಾಗುವುದನ್ನೂ ಕಂಡು ಬೆರಗಾಗಿ ನಿಲ್ಲುವುದರೊಂದಿಗೆ ಒಂದು ಪೂರ್ಣ ಸುತ್ತು ಮುಗಿಸುತ್ತದೆ. ಈ ಹೊಸ ಬೆರಗೇ 'ಚಕ್ರಗತಿ' ಯ ಬಹಳಷ್ಟು ಕವನಗಳನ್ನು ಆವರಿಸಿ ಜಿ.ಎಸ್.ಎಸ್. ಅವರನ್ನು ಒಬ್ಬ ಹಚ್ಚಹೊಸ ಕವಿಯೇನೋ ಎಂಬಂತೆ ಹೊಸ ಬೆಳಕಿನಲ್ಲಿ ನಿಲ್ಲಿಸಿರುವುದು. ಈ ಸಂಕಲನದ 'ಸಂಭವ' ಎಂಬ ಮೊದಲ ಕವನವೇ ಕವಿಯಲ್ಲಿ ಕಾವ್ಯ ಕುರಿತ ತಿಳುವಳಿಕೆ ಹೇಗೆ ಕ್ರಾಂತಿಕಾರಕವಾಗಿ ಮಾರ್ಪಾಡಾಗಿದೆ ಎಂಬುದನ್ನು ಸೂಚಿಸುತ್ತದೆ:

ಕಾಯುತ್ತಿರಲು ಹೀಗೆ ನಾನೊಬ್ಬನೆ
ಕವಿತೆಗೆ, ಅದೆಲ್ಲಿಂದಲೋ ಸದ್ದಿರದೆ
ಹಾರಿ ಬಂತೊಂದು ಕಪ್ಪನೆ ಕಾಗೆ, ಅಸ್ಪಷ್ಟತೆಗೆ
ಮೂಡಿದ ಹಾಗೆ ಎರಡು ರೆಕ್ಕೆ
ವಕ್ರಾಭಿವ್ಯಕ್ತಿಗಳ ಕೊಂಬೆ ನಕ್ಷೆಯ ನಡುವೆ
ರೆಕ್ಕೆಯರಳಿಸಿ, ಸ್ವರವೆತ್ತಿ ಕೂತೊಡನೆ ಕಾಗೆ

ಇಡೀ ಮರಕ್ಕೆ ಮರವೇ, ಪ್ರತೀಕವಾಗಿ
ಪರಿಣಮಿಸಿತ್ತು ನಾನು ಕಾಯುತ್ತಿದ್ದ ಕವಿತೆಗೆ

- ಪೌರಾಣಿಕವಾಗಿ ಪಿತೃಗಳಿಗೆ ಪ್ರತೀಕವಾಗಿರುವ ಕಾಗೆ ಈ ಕವನದಲ್ಲಿ ಅಸ್ತಿತ್ವದ ನಿಗೂಢ ನೆನಪಿನಾಳದಿಂದೆದ್ದ ಒಂದು ತರಂಗ ಇಡೀ ಅಸ್ತಿತ್ವಕ್ಕೇ ಒಂದು ಹೊಸ ರೂಪ ಹಾಗೂ ಅರ್ಥ ನೀಡುವ ಪವಾಡ ಸದೃಶತೆಗೆ ಸಾಕ್ಷಿಯಾಗಿದೆ . ಬದುಕಿಗೂ ಕಾವ್ಯಕ್ಕೂ , ಚರಿತ್ರೆಗೂ ಪುರಾಣಕ್ಕೂ ಇರುವ ಸಂಬಂಧವೂ ಹೀಗೆ, ಇಷ್ಟೇ ಪವಾಡಸದೃಶವಾದುದು ; ತಿರುಗುವ ಗಾಲಿ ಎಲ್ಲವನ್ನೂ ಒಂದು ಮಾಡುತ್ತದೆ . ಈ ಚಕ್ರೀಯ ಸತ್ಯದ ಅರಿವು ಇಲ್ಲಿ ದಾಖಲಾಗಿದೆ :

ಜಗನ್ನಾಥನ ಗಾಲಿ ಕಣ್ಣುಗಳಲ್ಲಿ ಕಂಡೆ : ವಿಸ್ತಾರ
ವಾದ ಸೂರ್ಯಕಾಂತಿಯ ಹೊಲದ ವೈಭವವನ್ನು ,
ಹಗಲು - ರಾತ್ರಿಗಳನ್ನು ಒಟ್ಟಿಗೇ ಹಿಡಿದು , ಆಯ -
ಸ್ಕಾಂತ ಕೇಂದ್ರಬಿಂದುವಿಗೆ ತಂದ ಕೌಶಲವನ್ನು
(ಪುರಿ ಜಗನ್ನಾಥನ ದೇಗುಲದಲ್ಲಿ)

ಈ ಕೌಶಲವೇ ನಾನು ಈ ಮುನ್ನ ಜಿ . ಎಸ್. ಎಸ್. ಅವರ ಕಾವ್ಯ ಸಾಧನೆಯ ಉತ್ತುಂಗ ಶಿಖರವೆಂದು ಗುರುತಿಸಿ ಪ್ರಸ್ತಾಪಿಸಿದ , 'ಅಸ್ತಮಾನ' ಕವಿತೆಯನ್ನು ಸೃಷ್ಟಿಸಿರುವುದು . ಈ ಕೌಶಲದ ಒಂದು ರೂಪ ಇಲ್ಲಿ ಹಾಗೂ ಈ ಸಂಕಲನದ ಇನ್ನೂ ಹಲವು ಕವನಗಳಲ್ಲಿ ಕಾಣಬರುವ *run on stanza* ತಂತ್ರ , ಅಂದರೆ ಪದ್ಯ ಸ್ಟಾಂಜಾಗಳಲ್ಲಿ ವಿರಮಿಸದೆ ನಿರಂತರತೆಯನ್ನು ಕಾಪಾಡಿಕೊಂಡು ಹೋಗುವ ತಂತ್ರ . ಕಂದ - ವೃತ್ತ - ಚಂಪೂಗಳನ್ನು ಜೋಡಿಸುವ ಪಂಪನ ತಂತ್ರದ ವಿಕಸಿತ ರೂಪದಂತಿರುವ ಇದು, ಬದುಕೂ , ಸತ್ಯವೂ ಹಾಗೇ ಎಂದು ಜಿ . ಎಸ್. ಎಸ್. ಅವರಿಗೆ ಆಗಿರುವ ಮನವರಿಕೆಗೆ ಸಂಬಂಧಿಸಿದ ತತ್ವವೂ ಆಗಿರಬಹುದು . ಹೀಗೆ ಗ್ರಹಿಕೆ ಮತ್ತು ಅಭಿವ್ಯಕ್ತಿಗಳನ್ನು ಐಕ್ಯಗೊಳಿಸುವ ಈ ಚಕ್ರೀಯ ಸತ್ಯವನ್ನು ತಮ್ಮ ಇತ್ತೀಚಿಗಿನ 'ಚರಿತ್ರೆ ಅಂದರೆ' ಎಂಬೊಂದು, ಈ ತಂತ್ರದಲ್ಲೇ ಬರೆದಿರುವ, ಕವನದಲ್ಲಿ ಅಂತಿಮವಾಗಿ ಕಾಣಿಸಿರುವುದು ಹೀಗೆ :

ಚರಿತ್ರೆ ಅಂದರೆ ನಡೆದುದಷ್ಟೇ ಅಲ್ಲ , ನಡೆಯು -
ತ್ತಿರುವುದು ಕೂಡಾ . ಎಲ್ಲ ಪಾತಗಳೂ ಮರೆತು
ಮತ್ತೆ ಚಿತ್ತವಿಕಾರ . ನಾಗರೀಕತೆಯ ಹೃದ -
ಯದ ಮೇಲೆ ಎಷ್ಟೊಂದು ಗಾಯಗಳ ಗುರುತು !

- ೭ -

ಇದಿಷ್ಟು ಇದುವರೆಗಿನ ಜಿ . ಎಸ್. ಶಿವರುದ್ರಪ್ಪನವರ ಕಾವ್ಯದಲ್ಲಿನ ಸಾಮಾಜಿಕ ದರ್ಶನ . ಬಹುಶಃ ಇವರಷ್ಟು ಸಾಮಾಜಿಕ ಕವನಗಳನ್ನು ಬರೆದ ಹಿರಿಯಕವಿ ಇನ್ನೊಬ್ಬರಿಲ್ಲ. ಅಡಿಗರ ಸಾಮಾಜಿಕತೆ ಸಾರತಃ ರಾಜಕೀಯ ಸ್ವರೂಪದ್ದು . ಆದರೆ ಜಿ . ಎಸ್. ಎಸ್. ಸಾರ್ವತ್ರಿಕ ನೆಲೆಗಳಲ್ಲಿಯೇ ಸಮಾಜದ ಏರುಪೇರುಗಳಿಗೆ ಪ್ರತಿಕ್ರಿಯಿಸಿದವರು . ಇಂತಹ ಪ್ರತಿಕ್ರಿಯೆಗಳ ಪ್ರಕ್ರಿಯೆಯ ಮೂಲಕವೇ ತಮ್ಮ ಕಾವ್ಯದ ಕಸಬುದಾರಿಕೆಯನ್ನು ಹದಗೊಳಿಸಿಕೊಂಡು ಹೊಸ ಕಾಣ್ಕೆಗಳಿಗೆ ತಮ್ಮ ಕಾವ್ಯದ ಕಣ್ಣುಗಳನ್ನು ತೆರೆದುಕೊಂಡವರು.

ಈ ಅರ್ಥದಲ್ಲಿ ಜಿ.ಎಸ್.ಎಸ್. ನಮ್ಮ ಓರ್ವ ಬಹು ಮುಖ್ಯ **ಸಾಮಾಜಿಕ ಕವಿ**. ಈ ಮಾತನ್ನು ಇಲ್ಲಿ ಎತ್ತಿ ಹೇಳುತ್ತಿರುವುದೇಕೆಂದರೆ , ಹೀಗೆ ಸಾಮಾಜಿಕ ಕವಿಗಳಾದ ಅನೇಕರು ಕ್ರಮೇಣ ಕವಿತ್ವವನ್ನೇ ಕಳೆದುಕೊಂಡು ಬರೀ ಸಾಮಾಜಿಕರಾದದ್ದೇ ಹೆಚ್ಚು . ಈ ದೃಷ್ಟಿಯಿಂದ ಇದು ಅಪಾಯದ ದಾರಿ . ಆದರೆ ಈ ಕವಿ , ಕವಿತೆ ಮತ್ತು ಸಾಮಾಜಿಕತೆಗಳ ದ್ವಂದ್ವವನ್ನು ಕಾವ್ಯಕಸಬುದಾರಿಕೆಯಲ್ಲಿ (ಎಲ್ಲ ಅತಿಗಳನ್ನೂ ಐಕ್ಯಗೊಳಿಸುವ) ಮಧ್ಯಮ ಮಾರ್ಗವನ್ನು ಅನುಸರಿಸುವ ಮೂಲಕ ಪರಿಹರಿಸಿಕೊಂಡಿದ್ದಾರೆ . ಈ ಕಾರಣದಿಂದಲೇ ಇವರ ಕಾವ್ಯ ಸರಳ, ಪಾರದರ್ಶಕ ಹಾಗೂ ಉತ್ತರಣೀಯವೂ (transcedent) ಆಗಿದೆ . ಈ ಅರ್ಥದಲ್ಲಿ ಜಿ.ಎಸ್.ಎಸ್. ಅವರನ್ನು ಸಮನ್ವಯ ಕವಿ ಎನ್ನುವುದಕ್ಕಿಂತ **ಮಧ್ಯಮಮಾರ್ಗದ ಕವಿ** ಎಂದು ಗುರುತಿಸುವುದು ಹೆಚ್ಚು ಉಚಿತ ಅನ್ನಿಸುತ್ತದೆ. ಏನಾದರೂ ಈ ಮಧ್ಯಮ ಮಾರ್ಗದ ಗುರು ಬುದ್ಧ ತಾನೇ ? ಹಾಗಲ್ಲದೆ 'ಅಸ್ತಮಾನ 'ದ ಕೃಷ್ಣ ಹೀಗೆ ಕಂಡಾನೆ ?:

ನಿಶ್ಶಬ್ದ ಕಾನನದೊಳಗೆ ಹಸಿರ ಹಣೆ ಬಿಡಿಸಿದ -
ಶ್ವತ್ಥ ವೃಕ್ಷದ ಕೆಳಗೆ ಮಂದಹಾಸದ
ಮೂರ್ತಿ ; ಒಂದು ಕಾಲನ್ನಿನ್ನೊಂದು ಕಾಲಿನ ಮೇಲೆ
ನವಿಲುಗರಿಯಂತಿರಿಸಿ ಮಲಗಿದ ಮೌನ

□

ನಮಗೆ ಮನಸ್ಸೆಂಬುದು ಇದ್ದ ಬಳಿಕ ಅದು ಹಲವು ಕನಸುಗಳನ್ನು ಕಂಡೇ ಕಾಣುತ್ತದೆ. ಅವುಗಳ ಸಾಧ್ಯಾಸಾಧ್ಯತೆ ಭವಿಷ್ಯದಲ್ಲಿ ನಿರ್ಣಯವಾಗಬೇಕು . ಕನಸು ನನಸಾಗಲು ನಾವು ಅವುಗಳ ಗಾತ್ರಕ್ಕೆ ಬೆಳೆಯಲೇಬೇಕು ; ಸುತ್ತಣ ಪರಿಸರ , ಸಮಾಜ ಅದಕ್ಕೆ ಅನುಕೂಲವಾಗಿರಬೇಕು . ಆದರೂ ಎಣಿಸಿದ್ದೆಲ್ಲ , ಮಾಡಹೋದದ್ದೆಲ್ಲ ಕೈಗೂಡೀತೆಂಬ ನಿಯಮವಿಲ್ಲ. ಎಣಿಕೆಗೂ ನಮ್ಮ ಮಾಡುವಿಕೆಗೂ ನಿಕಟ ಸಂಬಂಧವಿರುವಷ್ಟು ಕಾಲ ಕರ್ತವ್ಯ ಸಂತೋಷವನ್ನು ಕೊಡಬಲ್ಲದು . ಅನುಭವಗಳಿಂದ ನಮ್ಮ ಜೀವ ಪಕ್ವವಾಗಬಲ್ಲದು . ಮೊಳೆತ ಹೂವು ಮಿಡಿಯಾಗಿ , ಕಾಯಾಗಿ , ಹಣ್ಣಾಗುತ್ತದೆ . ಹಣ್ಣಾದ ಬಳಿಕ ಗಿಡಕ್ಕೆ ಅಂಟಿರಲಾರದೇ ಉದುರುತ್ತದೆ. ಆಯಿತು ಅದರ ಕೆಲಸ. ಮುಂದೆ ಆ ಹಣ್ಣಿನಿಂದ ಇನ್ನೊಂದು ಗಿಡವಾದೀತೆ? ಆ ಚಿಂತೆ ಹಣ್ಣಿಗೇಕೆ ? ಗಿಡವಾಗುವ ಸಾಮರ್ಥ್ಯ ಅದರಲ್ಲಿದ್ದರೆ ಸಾಕು . ಹೆಚ್ಚಿನ ಹಂಬಲ ಬೇಡ .

- ಶಿವರಾಮ ಕಾರಂತ

ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಕನ್ನಡ ಸಾಹಿತ್ಯ

-ಡಾ. ಸಿ.ಎನ್.ರಾಮಚಂದ್ರನ್

ಅಭಿವ್ಯಕ್ತಿಸ್ವಾತಂತ್ರ್ಯವನ್ನು ಕುರಿತು ನಡೆಯುವ ಚರ್ಚೆ ಸಾಮಾನ್ಯವಾಗಿ ಸರ್ಕಾರ / ಅಧಿಕಾರ ಹೇಗೆ ಸ್ವಾತಂತ್ರ್ಯವನ್ನು ಮೊಟಕುಗೊಳಿಸುತ್ತದೆ ; ಮತ್ತು ಹೇಗೆ ವಿವಿಧ ಕಾಲಘಟ್ಟಗಳಲ್ಲಿ ವಿವಿಧ ಲೇಖನಗಳನ್ನು / ಕಲಾಕೃತಿಗಳನ್ನು ಸರಕಾರ ಮುಟ್ಟುಗೋಲು ಹಾಕಿದೆ ಎಂಬುದರ ಸುತ್ತಲೇ ಕೇಂದ್ರೀಕೃತವಾಗಿರುತ್ತದೆ. ಸರಕಾರಗಳಿಂದ/ ಶಾಸನಗಳಿಂದ ಆಗುವ ನಿಯಂತ್ರಣ ಅನೇಕ ನಿಯಂತ್ರಣ ಮಾರ್ಗಗಳಲ್ಲಿ ಒಂದು ಮಾರ್ಗ ಮಾತ್ರ. ಇದು ಪ್ರತ್ಯಕ್ಷ ಹಾಗೂ ನೇರವಾದ ನಿಯಂತ್ರಣ. ಆದರೆ ವ್ಯಕ್ತಿಯ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಎಂದಿನಿಂದಲೂ ಶಾಸನಗಳಿಂದಲ್ಲದೆ ಅಪ್ರತ್ಯಕ್ಷ ಹಾಗೂ ಪರೋಕ್ಷ ನಿಯಂತ್ರಣವಿದ್ದೇ ಇದೆ; ಮತ್ತು ಇಂತಹ ನಿಯಂತ್ರಣ ಹೆಚ್ಚು ವ್ಯಾಪಕ ಹಾಗೂ ಪರಿಣಾಮಕಾರಿಯೂ ಆಗಿರುತ್ತದೆ. ಆದ್ದರಿಂದ, ಈ ಲೇಖನದ ಮೊದಲನೆಯ ಭಾಗದಲ್ಲಿ ಪರೋಕ್ಷ ನಿಯಂತ್ರಣವನ್ನು ಚರ್ಚಿಸಿ ಅನಂತರ ಎರಡನೆಯ ಭಾಗದಲ್ಲಿ ಪ್ರತ್ಯಕ್ಷ ನಿಯಂತ್ರಣದ ಸ್ವರೂಪ ಹಾಗೂ ಕಾರಣಗಳನ್ನು ಗುರುತಿಸಲು ಪ್ರಯತ್ನಿಸಿದ್ದೇನೆ. ಕೊನೆಯ ಭಾಗದಲ್ಲಿ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕರ್ನಾಟಕದಲ್ಲಿ ಕಂಡುಬಂದಿರುವ ಅಭಿವ್ಯಕ್ತಿ ಸ್ವಾತಂತ್ರ್ಯ ದಮನದ ದೃಷ್ಟಾಂತಗಳನ್ನು ಒಟ್ಟಾರೆಯಾಗಿ ವ್ಯಾಖ್ಯಾನಿಸಲು ಯತ್ನಿಸಿದ್ದೇನೆ.

೧

ಮಾತು, ಸಾಹಿತ್ಯ ಮತ್ತು ಇತರ ಕಲೆಗಳು, ಇತಿಹಾಸ, ಸಮಾಜಶಾಸ್ತ್ರ ಇತ್ಯಾದಿ ಮಾನವಿಕ ಶಾಸ್ತ್ರಗಳು ಇವೇ ಮುಂತಾದ ಕ್ಷೇತ್ರಗಳಲ್ಲಿ ಜ್ಞಾನ - ಸಂವಹನದ ಸ್ವರೂಪವನ್ನು ಕುರಿತು ಚರ್ಚಿಸುವಾಗ ಮಿಶಲ್ ಫುಕೋ ಎಂಬ ಈ ಶತಮಾನದ ಪ್ರಸಿದ್ಧ ಫ್ರೆಂಚ್ ಚಿಂತಕನ 'ಡಿಸ್‌ಕೋರ್ಸ್' ಪರಿಕಲ್ಪನೆ ತುಂಬಾ ಪ್ರಸ್ತುತವೆಂದು ತೋರುತ್ತದೆ. ಅತ್ಯಂತ ಸಂಕೀರ್ಣ ಹಾಗೂ ಅಮೂರ್ತ 'ಡಿಸ್‌ಕೋರ್ಸ್' ಪರಿಕಲ್ಪನೆಯನ್ನು (ಕೆಲವು ಸೂಕ್ಷ್ಮಗಳನ್ನು ಕಳೆದುಕೊಳ್ಳುವ ಅಪಾಯವಿದ್ದರೂ) ಸ್ಥೂಲವಾಗಿ 'ಭಾಷೆ ಮತ್ತು ಸಾಮಾಜಿಕ ಸಂಸ್ಥೆಗಳ ಆಂತರಿಕ ಸಂಬಂಧ' ಎಂದು ವ್ಯಾಖ್ಯಾನಿಸಬಹುದು. ಈ ವ್ಯಾಖ್ಯಾನದ ನೆಲೆಯಲ್ಲಿ ಡಿಸ್‌ಕೋರ್ಸ್ ವಿಶ್ಲೇಷಣೆ ಎಂದರೆ ವಿಶಿಷ್ಟ ಸೂಚನಾ ಪ್ರಕ್ರಿಯೆಯನ್ನು ಮತ್ತು ಪರಿಣಾಮತಃ

ಡಾ. ಸಿ. ಎನ್. ರಾಮಚಂದ್ರನ್, ೫ ಪ್ರೇಮಸಾಗರ ಅಪಾರ್ಟ್‌ಮೆಂಟ್ಸ್ ಮಣ್ಣುಗುಡ್ಡ ಮಂಗಳೂರು

ಜ್ಞಾನದ ವಿಶಿಷ್ಟ ರೂಪಗಳನ್ನು ಸಾಧ್ಯವಾಗಿಸುವ **ಸಾಂಸ್ಥಿಕ ನಿಯಮ - ನಿಬಂಧನೆಗಳನ್ನು** (ಪ್ರತ್ಯಕ್ಷ ಹಾಗೂ ಪರೋಕ್ಷ) ಗುರುತಿಸುವುದು.

ಈ ಪರಿಕಲ್ಪನೆ ನಾವು ಸಾಧಾರಣವಾಗಿ ವಸ್ತು, ಭಾವ, ಭಾಷೆ, ಅನುಭವ ಇತ್ಯಾದಿಗಳ ಬಗ್ಗೆ ಹೊಂದಿರುವ ಅಭಿಪ್ರಾಯವನ್ನು ಪ್ರಶ್ನಿಸಿ ಪುನರ್ವ್ಯಾಖ್ಯಾನಿಸುತ್ತದೆ. 'ಈ ಭೌತಿಕ ಪ್ರಪಂಚಕ್ಕೆ ಸ್ವತಂತ್ರ ಅಸ್ತಿತ್ವವಿದೆ; ಅದರೊಡನಾಗುವ ನಮ್ಮ ಅನುಭವಗಳಿಗೆ ಇವುಗಳಿಂದ ಬೇರೆಯಾದ ಭಾಷೆ ಒಂದು ಸಂವಹನ ಮಾರ್ಗ' ಎಂದು ನಾವು ನಂಬುತ್ತೇವೆ. ಆದರೆ ಫುಕೋ ವಾದಿಸುವುದೇನೆಂದರೆ, ಭಾಷೆಯಿಂದ ಹೊರತಾದ ಸ್ವತಂತ್ರ ಅಸ್ತಿತ್ವ ವಸ್ತುವಿಗೂ ಇಲ್ಲ, ಅನುಭವಕ್ಕೂ ಇಲ್ಲ; ಮತ್ತು ಇವೆರಡಕ್ಕೂ ರೂಪಕೊಡುವ ಭಾಷೆಯನ್ನು ಸಾಮಾಜಿಕ ರಾಜಕೀಯ ಸಂಸ್ಥೆಗಳು ನಿಯಂತ್ರಿಸುತ್ತವೆ. ಸಾಂಸ್ಥಿಕ ನಿಯಂತ್ರಣ ಅಥವಾ ಒತ್ತಡದಿಂದ ಮುಕ್ತವಾದ ಯಾವ ಜ್ಞಾನವೂ ಅಥವಾ ಜ್ಞಾನಮಾರ್ಗವೂ ಇರಲು ಸಾಧ್ಯವಿಲ್ಲ.

ಸಾಂಸ್ಥಿಕ ನಿಯಂತ್ರಣಗಳು ಪ್ರತಿಯೊಂದು ಜ್ಞಾನಮಾರ್ಗಕ್ಕೂ ಒಂದು ವಿಶಿಷ್ಟ ರೂಪವನ್ನು ಕೊಡುವುದು ಮತ್ತು ವಿಶಿಷ್ಟ ದೃಷ್ಟಿಕೋನವನ್ನು ನಿರ್ಮಿಸುವುದು, ಮುಖ್ಯವಾಗಿ, 'ಆಯ್ಕೆ' ಮತ್ತು 'ಪ್ರತ್ಯೇಕತೆ' (*selection and ristriction*) ಎಂಬ ಎರಡು ವಿಧಾನಗಳಿಂದ. ವ್ಯವಸ್ಥಿತವಾಗಿ, ಸಾಂಸ್ಥಿಕ 'ಆಯ್ಕೆ' ಮತ್ತು 'ಪ್ರತ್ಯೇಕತೆ'ಗಳ ಸೂತ್ರಗಳು - ಯಾರು ಹೇಳುವ ಅಧಿಕಾರ ಹೊಂದಿದ್ದಾರೆ? ಏನನ್ನು ಹೇಳಬಹುದು? ಮತ್ತು ಹೇಗೆ ಹೇಳಬೇಕು? - ಎಂಬುದನ್ನು ನಿರ್ಧರಿಸುತ್ತವೆ. ಹಾಗೆಯೇ ಒಂದು ಜ್ಞಾನಕ್ಷೇತ್ರದಲ್ಲಿ ಯಾವುದು 'ಸತ್ಯ' ಯಾವುದು 'ಅಸತ್ಯ'; ಯಾವುದು 'ಯೋಗ್ಯ' ಯಾವುದು 'ಅಯೋಗ್ಯ' ಯಾವುದು 'ಮಹತ್ವಪೂರ್ಣ' ಯಾವುದು 'ಕ್ಷುಲ್ಲಕ' - ಎಂಬುದೆಲ್ಲವನ್ನೂ ನಿರ್ಧರಿಸುತ್ತವೆ.

ಈ ಅಂಶಗಳನ್ನು ಸ್ಪಷ್ಟಪಡಿಸಲು ಒಂದೆರಡು ನಿದರ್ಶನಗಳನ್ನು ನೋಡೋಣ: 'ಭಾರತೀಯ ಸಂಸ್ಕೃತಿ' ಅಥವಾ 'ಭಾರತೀಯ ದರ್ಶನ' ಎಂಬ ಜ್ಞಾನಶಾಖೆಯಲ್ಲಿ ಸಾಧಾರಣವಾಗಿ ನಾವು ವೇದೋಪನಿಷತ್ತುಗಳು, ಗೀತೆ ಮುಂತಾದ ಕೃತಿಗಳು; ಆಚಾರ್ಯತ್ರಯರ ವೈಚಾರಿಕತೆ; ವಾಲ್ಮೀಕಿ, ವ್ಯಾಸ, ಕಾಳಿದಾಸ ಮುಂತಾದವರ ಸಾಹಿತ್ಯ; ಇವುಗಳನ್ನು ಪರಿಗಣಿಸುತ್ತೇವೆ. ಎಂದರೆ, ಪ್ರಾರಂಭದಲ್ಲಿಯೇ, ಬೌದ್ಧ - ಜೈನರ, ಮುಸ್ಲಿಮರ ಕ್ರಿಶ್ಚಿಯನ್‌ರ, ಯಹೂದಿಗಳ, ಪಾರ್ಸಿಗಳ, ಆದಿವಾಸಿಗಳ, ಬುಡಕಟ್ಟು ಜನಾಂಗಗಳ ಸಂಸ್ಕೃತಿ - ಆಚರಣೆ - ನಂಬಿಕೆಗಳನ್ನು 'ಭಾರತೀಯ ಸಂಸ್ಕೃತಿ' ಎಂಬ ಘಟಕದಿಂದ ಪ್ರತ್ಯೇಕಿಸುತ್ತೇವೆ. ಆಯ್ಕೆ ಮಾಡಲ್ಪಟ್ಟ ಘಟಕದಲ್ಲಿಯೂ ವೇದಗಳೆಂದರೆ ಎಲ್ಲಾ ಅಲ್ಲ - ಮೊದಲೆರಡು ವೇದಗಳು; ಉಪನಿಷತ್ತುಗಳಲ್ಲಿ ಪ್ರಶ್ನ, ಕಠ, ಈಶಾವಾಸ್ಯ ಮುಂತಾದ ಕೆಲವು ಉಪನಿಷತ್ತುಗಳು ...., ಹೀಗೆ ಆ ಘಟಕವನ್ನು ಸಂಕುಚಿತಗೊಳಿಸುತ್ತಾ ಹೋಗುತ್ತೇವೆ. ವಿಗ್ರಹಾರಾಧನೆ ಮತ್ತು ಪೂಜಾವಿಧಾನಗಳನ್ನು ಒಪ್ಪಿಕೊಂಡರೂ, ಅವುಗಳಲ್ಲಿ ಶಿವ, ವಿಷ್ಣು, ಮುಂತಾದ ವೈದಿಕ ದೇವತೆಗಳು ಬರುತ್ತಾರೆಯೇ ಹೊರತು ತಾಂತ್ರಿಕರ, ಕಾಪಾಲಿಕರ, ಶೂದ್ರರ, ಪಂಚಮರ ಸಾವಿರಾರು ದೇವತೆಗಳು ಮತ್ತು ಅವರ ಪೂಜಾ ವಿಧಾನಗಳು ಹೊರಗೇ ಉಳಿಯುತ್ತವೆ. ಅರ್ಥಾತ್, ಆಯ್ಕೆ ಮತ್ತು ಪ್ರತ್ಯೇಕತೆಗಳ ಸೂತ್ರಗಳು ವ್ಯವಸ್ಥಿತವಾಗಿ 'ಯಾವುದು ಭಾರತೀಯ ದರ್ಶನ - ಯಾವುದು ಅಲ್ಲ' ಎಂದು ನಿರ್ಧರಿಸುತ್ತಾ,

ಭಾರತೀಯ = ಹಿಂದೂ ; ಹಿಂದೂ= ಉಚ್ಚವರ್ಣ ; ಉಚ್ಚವರ್ಣ= ಆಸ್ತಿಕ ; ಆಸ್ತಿಕ = ಪುರುಷ ಎಂಬಂತಹ ಸಮೀಕರಣಗಳನ್ನು ಸೃಷ್ಟಿಸುತ್ತವೆ. ಮತ್ತು ಈ ಸೂತ್ರ - ಸಮೀಕರಣಗಳ ಹಿಂದೆ ಅನೇಕಬಗೆಯ ಸಂಸ್ಥೆಗಳು (ರಾಜತ್ವ, ಪುರೋಹಿತಶಾಹಿ , ವರ್ಣಾಶ್ರಮ ಧರ್ಮ, ಕಾನೂನು ಇತ್ಯಾದಿ...) ಕ್ರಿಯಾಶೀಲವಾಗಿರುತ್ತವೆ.

ಈಗ ಸಾಹಿತ್ಯಕ್ಷೇತ್ರಕ್ಕೆ ಬರೋಣ. 'ಸಾಹಿತ್ಯವೆಂದರೆ ಏನು ?' ಎಂಬ ಪ್ರಶ್ನೆಗೆ ಎಲ್ಲರೂ ಸುಲಭವಾಗಿ ಒಪ್ಪುವಂತಹ ಒಂದು ವ್ಯಾಖ್ಯಾನವೆಂದರೆ 'ಅರ್ಥಪೂರ್ಣ, ಸಾಂದ್ರ , ಹಾಗೂ ಸಂಕೀರ್ಣ ಮಾನವಾನುಭವಗಳ ಸಫಲ ಅಭಿವ್ಯಕ್ತಿ ; ಮತ್ತು ಈ ಅಭಿವ್ಯಕ್ತಿ ಸಾಹಿತ್ಯದಲ್ಲಿ ಭಾಷೆಯ ಮಾಧ್ಯಮದ ಮೂಲಕ ಆಗುತ್ತದೆ ' ಎಂಬುದು . ಹೀಗೆ ವ್ಯಾಖ್ಯಾನಿಸಲ್ಪಟ್ಟ ಸಾಹಿತ್ಯವನ್ನು ಬೋಧಿಸುವ ಒಂದು ಸಂಸ್ಥೆಯ ಪಠ್ಯಕ್ರಮವನ್ನು ಮತ್ತು ಪರೀಕ್ಷಾ ಪದ್ಧತಿಯನ್ನು ಗಮನಿಸಿದಗೆ ಮೇಲೆ ಹೇಳಿದ ವ್ಯಾಖ್ಯಾನಕ್ಕೆ ಅನೇಕಾನೇಕ ತಿದ್ದುಪಡಿಗಳಾಗಿರುವುದು ಕಂಡುಬರುತ್ತದೆ . ಸ್ಕೂಲು/ ಕಾಲೇಜು/ ವಿವಿ/ ಸಂಶೋಧನೆ .... ಮುಂತಾದ ಸಂಸ್ಥೆಗಳು ಸಾಹಿತ್ಯವೆಂದು ಪರಿಗಣಿಸುವ ಕೃತಿಸಮೂಹದಲ್ಲಿ 'ಜನಪ್ರಿಯ ಸಾಹಿತ್ಯ '(ಸಾಹಸಪ್ರಧಾನ ಕತೆ -ಕವನ -ಕಾದಂಬರಿಗಳು, ಇತ್ಯಾದಿ), 'ಧಾರ್ಮಿಕ ಸಾಹಿತ್ಯ' (ನೀತಿಕತೆಗಳು, ಪುರಾಣಗಳು, ಪ್ರವಚನಗಳು ಇತ್ಯಾದಿ), 'ಶಿಶುಸಾಹಿತ್ಯ ' (ಮಕ್ಕಳ ಕತೆ -ಕವನಗಳು, ಫ್ಯಾಂಟಸಿಗಳು , ಇತ್ಯಾದಿ) ಇವು ಯಾವವೂ ಸೇರುವುದಿಲ್ಲ . ಹಾಗೆಯೇ , 'ಜನಪದ ಸಾಹಿತ್ಯ ' ಮತ್ತು 'ಮಹಿಳಾ ಸಾಹಿತ್ಯ' ಇವುಗಳೂ ಇರುವುದಿಲ್ಲ ; ಅಥವಾ ಇದ್ದರೂ ಎಲ್ಲೋ ಅಂಚಿನಲ್ಲಿ ಮರೆಯಾಗುತ್ತವೆ. ಅರ್ಥಾತ್, 'ಸಾಹಸಪ್ರಧಾನ , ನೀತಿಪ್ರಧಾನ , ಕತೆ ಕವನಗಳಲ್ಲಿ ಮಾನವಾನುಭವ ಕಂಡುಬರುವುದಿಲ್ಲ ; ಮಹಿಳಾ ಸಾಹಿತ್ಯ - ಶಿಶು ಸಾಹಿತ್ಯ - ಜಾನಪದ ಸಾಹಿತ್ಯ - ಇವುಗಳಲ್ಲಿ ಕಂಡುಬರುವ ಮಾನವಾನುಭವ ಅಷ್ಟೇನೂ ಪ್ರಸ್ತುತವಲ್ಲ' ಇತ್ಯಾದಿ ಅಲಿಖಿತ ತಿದ್ದುಪಡಿಗಳು ಮಾಡಲ್ಪಡುತ್ತವೆ . ಪರಿಣಾಮತಃ : ಕಾಲೇಜುಗಳು / ವಿವಿಗಳು / ಅಕಾಡೆಮಿಗಳು ಮುಂತಾದ ಸಂಸ್ಥೆಗಳು ತಮ್ಮ ಆಚರಣೆಯ ಮೂಲಕ ಕೆಲವೇ ಕೆಲವು ಕೃತಿಗಳನ್ನು 'ಸಾಹಿತ್ಯ 'ವೆಂದು ಮನ್ನಿಸಿ, ಕೃತಿಗಳಲ್ಲಿ ತರತಮ ಶ್ರೇಣಿಯನ್ನು ನಿರ್ಮಿಸಿ ಅವುಗಳ ಮೂಲಕ ಒಂದು ಪ್ರಧಾನ ಸಾಹಿತ್ಯಕ ಪರಂಪರೆಯನ್ನು ನಿರ್ಮಿಸುತ್ತವೆ. ಇಂತಹ ಎಲ್ಲಾ ಸಾಹಿತ್ಯಕ ಪರಂಪರೆಗಳೂ 'ಆಯ್ಕೆ' ಮತ್ತು 'ಪ್ರತ್ಯೇಕತೆ' ಎಂಬ ಸೂತ್ರಗಳಿಂದ ಅಸ್ತಿತ್ವಕ್ಕೆ ಬರುತ್ತವೆ.

ಸಾಹಿತ್ಯವೂ ಸೇರಿದಂತೆ ಎಲ್ಲಾ ಜ್ಞಾನಗಳೂ , ಜ್ಞಾನಮಾರ್ಗಗಳೂ ಸಾಂಸ್ಥಿಕ ನಿಯಂತ್ರಣದಿಂದ ರೂಪುಗೊಳ್ಳುತ್ತವೆ ಎಂದಾದರೆ , 'ಅಭಿವ್ಯಕ್ತಿ ಸ್ವಾತಂತ್ರ್ಯ' ಎಂಬ ಪರಿಕಲ್ಪನೆಗೆ ಅರ್ಥವೇ ಇಲ್ಲದಂತಾಗುತ್ತದೆ . ಈ ಅಂಶವನ್ನೇ ಬೇರೆ ಶಬ್ದಗಳಲ್ಲಿ ಹೇಳಬೇಕಾದರೆ , ಎಲ್ಲಾ ಕಾಲಘಟ್ಟಗಳಲ್ಲಿಯೂ ಮತ್ತು ಎಲ್ಲಾ ಸಮಾಜಗಳಲ್ಲಿಯೂ, ಲೇಖಕರು ಯಾವುದನ್ನು ಸಮಕಾಲೀನ 'ಸಂಸ್ಥೆಗಳು' 'ಸಾಹಿತ್ಯ 'ವೆಂದು , 'ಇತಿಹಾಸ 'ವೆಂದು 'ದರ್ಶನ 'ವೆಂದು ಮಾನ್ಯಮಾಡಿವೆಯೋ ಅದನ್ನೇ ರಚಿಸಬೇಕಾಗುತ್ತದೆ. ಆಯಾಯಾ ಕಾಲದ ಪ್ರಭಾವೀ 'ಸಂಸ್ಥೆಗಳು' (ರಾಜಾಸ್ಥಾನ ಮತ್ತು ಅಲ್ಲಿಯ ವಿದ್ವಾಂಸರು , ಶಿಕ್ಷಣ ಸಂಸ್ಥೆಗಳು, ಲಾಕ್ಷಣಿಕರು , ಹಸ್ತಪ್ರತಿ ತಯಾರಿಸುವವರು ಅಥವಾ ಇಂದಿನ ಪ್ರಕಾಶಕರು ಇತ್ಯಾದಿ)

ನಿರ್ದಾಕ್ಷಿಣ್ಯವಾಗಿ ಲೇಖಕನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸುತ್ತವೆ. ಈ ಹೇಳಿಕೆಗೆ ಪ್ರತಿಯೊಂದು ಸಮಾಜದಲ್ಲಿಯೂ ಅನೇಕ ನಿದರ್ಶನಗಳು ದೊರಕುತ್ತವೆ . ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ (ಕ್ರಿ.ಪೂ.೩೨೩ರ ನಂತರ) ಪಾಶ್ಚಿಮಾತ್ಯ ಸಂಸ್ಕೃತಿಗೆ ಆಧಾರವಾದ ಬಹುದೊಡ್ಡ ಗ್ರಂಥಾಲಯಗಳು ಅಲೆಕ್ಸಾಂಡ್ರಿಯ ಮತ್ತು ಪರ್ಗಮಮ್ (*Alexandria Pergamum*) ಎಂಬ ಎರಡು ನಗರಗಳಲ್ಲಿ ಅಸ್ತಿತ್ವಕ್ಕೆ ಬಂದವು . ಇಂದಿವುಗಳಂತೆ ಈ ಗ್ರಂಥಾಲಯಗಳು ದೊರಕುವ ಗ್ರಂಥಗಳ ಸಂಗ್ರಹಾಲಯಗಳಾಗಿರಲಿಲ್ಲ . ಅಲ್ಲಿಯ ವಿದ್ವಾಂಸರು ಅಲ್ಲಲ್ಲಿ ಚದುರಿಹೋಗಿದ್ದ/ ನಷ್ಟವಾಗಿದ್ದ ಹಸ್ತಪ್ರತಿಗಳನ್ನು ಶೋಧಿಸಿ, ಅವುಗಳ ಲೇಖಕರನ್ನು ಗುರುತಿಸಿ ,ಕೃತಿಗಳ ಪಠ್ಯಗಳನ್ನು ನಿರ್ಣಯಿಸಿ , ಅನಂತರ ಅವುಗಳ ನೂತನ ಹಸ್ತಪ್ರತಿಗಳನ್ನು ತಯಾರಿಸಿ ಗ್ರಂಥಾಲಯದಲ್ಲಿ ರಕ್ಷಿಸಿದರು . ಈ ಅಗಾಧ ಕೆಲಸದಲ್ಲಿ 'ಯಾವುದು ಉಳಿಸಿಕೊಳ್ಳಬೇಕಾದ ಶ್ರೇಷ್ಠ ಕೃತಿ ' ಮತ್ತು 'ಯಾವುದು ಉಚಿತ ಪಠ್ಯ ?' ಎಂಬ ಮಹತ್ವಪೂರ್ಣ ಪ್ರಶ್ನೆಗಳು ಪ್ರತಿಯೊಂದು ಹಂತದಲ್ಲಿಯೂ ಕೆಲಸ ಮಾಡುತ್ತಿದ್ದವು. ಎಂದರೆ ,ಈ ಕೆಲವೇ ಕೆಲವು ವಿದ್ವಾಂಸ -ಸಂಪಾದಕರಿಗೆ 'ಮುಖ್ಯ 'ವೆಂದು ಕಂಡುಬಂದ ಕೃತಿಗಳೇ ಉತ್ತಮ ಹಸ್ತಪ್ರತಿಗಳ ರೂಪದಲ್ಲಿ ಉಳಿದು ಪಾಶ್ಚಾತ್ಯ ಸಂಸ್ಕೃತಿಯನ್ನು ಬೆಳೆಸಿದವು. 'ಸೆನ್ಸಾರ್‌ಶಿಪ್ 'ನ ಪ್ರಾರಂಭವನ್ನು ಇಲ್ಲಿ ಕಾಣುತ್ತೇವೆಂದು ಆರ್ .ಮೆಕಾರ್ಮಿಕ್ ಎಂಬ ವಿದ್ವಾಂಸರು ವಾದಿಸುತ್ತಾರೆ .

ಭಾರತದಲ್ಲಾಗಲೀ ಐರೋಪ್ಯ ರಾಷ್ಟ್ರಗಳಲ್ಲಾಗಲೀ ಮುದ್ರಣ ಕ್ರಾಂತಿಗಿಂತ ಮೊದಲು (ಎಂದರೆ ಒಂದೆರಡು ಸಾವಿರ ವರ್ಷಗಳಷ್ಟು ಕಾಲದ ಅವಧಿಯಲ್ಲಿ) ಸಮಕಾಲೀನ ಸಾಂಸ್ಥಿಕ ಮನ್ನಣೆಯಿಲ್ಲದೆ ಹಸ್ತಪ್ರತಿಗಳು (ಇವುಗಳ ಪ್ರತಿ ಮಾಡುವುದು ಅಧಿಕ ಸಮಯ ಮತ್ತು ಹಣವನ್ನು ಬೇಡುವ ಕೆಲಸವಾದ್ದರಿಂದ) ದೀರ್ಘಕಾಲ ಉಳಿಯಲು ಸಾಧ್ಯವೇ ಇರಲಿಲ್ಲ. ಪ್ರಾಯಶಃ ಈ ಅಂಶವನ್ನೇ ಅನೇಕ ದಂತಕಥೆಗಳು ಸ್ಪಷ್ಟಪಡಿಸುತ್ತವೆ. ಗುಣಾಢ್ಯನ 'ಬೃಹತ್ಕಥೆ' ಅಂದು ರಾಜಮನ್ನಣೆ ಪಡೆದ ಭಾಷೆಯಾದ ಸಂಸ್ಕೃತದಲ್ಲಲ್ಲದೆ ಜನಸಾಮಾನ್ಯರ ಭಾಷೆಯಾದ ಪೈಶಾಚಿಯಲ್ಲಿ ಬರೆಯಲ್ಪಟ್ಟುದರಿಂದ ಅದಕ್ಕೆ ಮನ್ನಣೆ / ಆಶ್ರಯ ಸಿಗದೆ ಅದು ಅಗ್ನಿಗಾಹುತಿಯಾಗಿರಬಹುದು(ಬೇಸತ್ತ ಕವಿಯೇ ಹೀಗೆ ಅದನ್ನು ನಷ್ಟಪಡಿಸಿರಬಹುದು). ಹಾಗೆಯೇ ಭಾಸನ 'ಊರುಭಂಗ 'ದನಂತರ ಅಂತಹ ದುಃಖಾಂತ ನಾಟಕಗಳ ರಚನೆಯೇ ಕಂಡುಬರದೆ ಇರುವುದಕ್ಕೂ; ಮತ್ತು ಕಾಳಿದಾಸ - ಭವಭೂತಿ ಮುಂತಾದವರ ರಕ್ಷಣಾತ್ಮಕ (*defensive*) ವಿನಯಕ್ಕೂ ಪ್ರಧಾನ ಸಾಹಿತ್ಯಿಕ ಪರಂಪರೆಯ ಪ್ರಭಾವ ಹಾಗೂ ಒತ್ತಡಗಳೇ ಕಾರಣಗಳೆಂದು ವಾದಿಸಲು ಸಾಧ್ಯವಿದೆ .('ಪುರಾಣಮಿತ್ಯೇವ ನ ಸಾಧು ಸರ್ವಂ ' ಎಂದು ಕಾಳಿದಾಸನು ಮಂಡಿಸಿದರೆ 'ಕಾಲೋಹ್ಯಯಂ ನಿರವಧಿಃ ವಿಪುಲಾಚ ಪೃಥ್ವೀ ' ಎಂದು ಭವಭೂತಿ ತನ್ನನ್ನು ತಾನೇ ಸಂತೈಸಿಕೊಳ್ಳುತ್ತಾನೆ . ಂತಹ ನಿದರ್ಶನಗಳು ಮನ್ನಣೆಪಡೆದ ಪರಂಪರೆಗಿಂತ ಸ್ವಲ್ಪವಾದರೂ ಭಿನ್ನವಾಗಿ ಬರೆಯಲು ಪ್ರಯತ್ನಿಸುವುದು ಎಷ್ಟು ದುಃಸ್ಸಾಹದ ಕೆಲಸ ಂಬುದನ್ನು ಪ್ರಕಟಗೊಳಿಸುತ್ತದೆ .)

ಇನ್ನು ಕನ್ನಡ ಸಾಹಿತ್ಯ ಸಂದರ್ಭವನ್ನೇ ತೆಗೆದುಕೊಂಡರೆ , ಪಂಪನಿಂದ ಕುವೆಂಪುವರೆಗೂ ಕವಿಗಳು ಎದುರಿಸಬೇಕಾಗಿದ್ದ ಮುಖ್ಯ ಸಮಸ್ಯೆಯೆಂದರೆ ಅತ್ಯಂತ ಪ್ರಭಾವ

ಶಾಲಿಯಾದ ಸಂಸ್ಕೃತ ಮಹಾಕಾವ್ಯ ಪರಂಪರೆಯನ್ನು ಒಪ್ಪಿಕೊಂಡೇ (ಏಕೆಂದರೆ ಸಂಪೂರ್ಣವಾಗಿ ಆ ಪರಂಪರೆಯನ್ನು ತ್ಯಜಿಸಿ ಕವಿ ಎನಿಸಿಕೊಳ್ಳಲು ಸಾಧ್ಯವೇ ಇರಲಿಲ್ಲ), ಕನ್ನಡದ ಹಾಗೂ ತಮ್ಮ ಅನನ್ಯತೆಯನ್ನು ಶೋಧಿಸುವುದು ಹೇಗೆ ಎಂಬುದು . ವಿಶಾಲಾರ್ಥದಲ್ಲಿ,'ಮಾರ್ಗ-ದೇಸಿ' ತಿಕ್ಕಾಟ ಈ ಅಂಶವನ್ನೇ ದಾಖಲಿಸುತ್ತದೆ. ಕನ್ನಡ ಕವಿಗಳ ಇಂತಹ ಅನನ್ಯತೆಯ ಶೋಧವೇ ಒಂದು ನೆಲೆಯಲ್ಲಿ 'ಚಂಪೂ 'ಕಾವ್ಯ ಸಂಪ್ರದಾಯವಾಗಿ, ಇನ್ನೊಂದು ನೆಲೆಯಲ್ಲಿ ರಗಳೆ - ಷಟ್ಪದಿ - ಸಾಂಗತ್ಯ ಮುಂತಾದ ಕಾವ್ಯಮಾಧ್ಯಮ ಪ್ರಯೋಗಗಳಾಗಿ ಪರಿಣಮಿಸಿತು .

ಇಲ್ಲಿ ನಾನು ಒತ್ತಿಹೇಳಬೇಕಾದ ಅಂಶವೆಂದರೆ, ಪಂಪನೇ ಆದಿಯಾಗಿ ಯಾವ ಕನ್ನಡ ಕವಿಗೂ ಸಂಪೂರ್ಣವಾದ ಅಭಿವ್ಯಕ್ತಿ ಸ್ವಾತಂತ್ರ್ಯವಿರಲಿಲ್ಲ ಎಂಬುದು . ಈ ಹೇಳಿಕೆಯನ್ನು ಇನ್ನೂ ಸ್ಪಷ್ಟಪಡಿಸಬೇಕೆಂದರೆ : ತನ್ನ 'ವಿಕ್ರಮಾರ್ಜುನ ವಿಜಯ 'ದಲ್ಲಿ ದ್ರೌಪದಿಯನ್ನು ಕೇವಲ ಅರ್ಜುನನ ಪತ್ನಿಯನ್ನಾಗಿ ಚಿತ್ರಿಸುವಾಗ ಮತ್ತು ತಾನು ಜೈನನಾಗಿದ್ದರೂ(ಎಂದರೆ ವಿಷಯಾಸಕ್ತಿಗಳು ಆತ್ಮೋನ್ನತಿಯ ದಾರಿಯಲ್ಲಿರುವ ಘೋರ ಕಂಟಕಗಳೆಂದು ನಂಬಿದ್ದರೂ) ಸಂಸ್ಕೃತ ಮಹಾಕಾವ್ಯ ಸಂಪ್ರದಾಯದಂತೆ ದೀರ್ಘವಾಗಿ ವೇಶ್ಯಾವಾಟಿಕೆಯ ವರ್ಣನೆ ಮತ್ತು ಸುರತದ ವರ್ಣನೆಗಳನ್ನು ತರುವ ಪಂಪ; ವಸ್ತು - ಭಾಷೆ - ಧರ್ಮ ಇವೆಲ್ಲಾ ನೆಲೆಗಳಲ್ಲಿಯೂ ಸಂಪ್ರದಾಯವನ್ನು ತ್ಯಜಿಸಿ 'ರಗಳೆ ಕಾವ್ಯ 'ವನ್ನು ರಚಿಸಿದ ನಂತರ ಪಂಡಿತ ಮನ್ನಣೆಗಾಗಿ ಸಾಂಪ್ರದಾಯಕ 'ಗಿರಿಜಾ ಕಲ್ಯಾಣ 'ವನ್ನು ರಚಿಸುವ ಹರಿಹರ ; 'ಚಂದಿರನೊಳಗೆ ಕಪ್ಪುಂಟು ಬೆಳ್ದಿಂಗಳು/ ಕಂದಿ ಕುಂದಿಹುದೋ ನಿರ್ಮಲವೊ/ / ಸಂಧಿಸಿ ಶಬ್ದ ದೋಷಗಳೊಮ್ಮೆ ಸುಕಥೆಗೆ/ ಬಂದರೆ ಧರ್ಮ ಮಾಸುವುದೇ/ /' ಎಂದು ಅಳುಕಿನಿಂದ ತನ್ನ ಕಾವ್ಯವನ್ನು ಸಮರ್ಥಿಸಿಕೊಳ್ಳುವ ರತ್ನಾಕರವರ್ಣಿ ; ಆಧುನಿಕ ಕಾವ್ಯದಲ್ಲಿ ಅಷ್ಟಾದಶ ವರ್ಣನೆಗಳಿಗೆ ಸ್ಥಾನವಿಲ್ಲವೆಂಬುದನ್ನು ಗ್ರಹಿಸಿದ್ದರೂ (ಈ ಗ್ರಹಿಕೆಯನ್ನು ಮನೋರಮೆಯ ಮೂಲಕ ದಾಖಲಿಸಿ) ತನ್ನ 'ರಾಮಾಶ್ವಮೇಧ 'ದಲ್ಲಿ ಪುರ - ಅದ್ರಿ - ಸಾಗರ - ಸ್ತ್ರೀ ವರ್ಣನೆಗಳನ್ನು ತರುವ ಮುದ್ದಣ ...... ಇವರೆಲ್ಲರೂ ಪರೋಕ್ಷವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿರುವ ನಿಯಂತ್ರಣಗಳ ಮತ್ತು ಒತ್ತಡಗಳ ಸಾಕ್ಷಿ .

ಸಾಹಿತ್ಯ ಕ್ಷೇತ್ರವನ್ನು ಬಿಟ್ಟು ಇತರ ಅಭಿವ್ಯಕ್ತಿ ಮಾಧ್ಯಮಗಳನ್ನು ಪರಿಗಣಿಸಿದರೂ ಇಂತಹದೇ ಕತೆಯನ್ನು ನೋಡುತ್ತೇವೆ . ಎರಡು ರಾಷ್ಟ್ರಗಳು ಪರಸ್ಪರ ಯುದ್ಧದಲ್ಲಿ ತೊಡಗಿರುವಾಗ , ಯಾವ ಒಂದು ರಾಷ್ಟ್ರದ ವೃತ್ತಪತ್ರಿಕೆ / ರೇಡಿಯೋ / ದೂರದರ್ಶನ ಮುಂತಾದ ಮಾಧ್ಯಮವೂ 'ಸತ್ಯ 'ವನ್ನು ಕಾಣಲಾಗುವುದಿಲ್ಲ - ದಾಖಲಿಸಲಾಗುವುದಿಲ್ಲ . ಇದಕ್ಕೆ ಕಾರಣ 'ರಾಷ್ಟ್ರ ಪ್ರೇಮ 'ಎಂಬ ಮೌಲ್ಯ . ಈ ಮೌಲ್ಯವನ್ನು ಎತ್ತಿಹಿಡಿದು ಅದಕ್ಕೆ ಮಹತ್ವವನ್ನು ಕೊಡುವುದು ಆಯಾಯಾ ರಾಷ್ಟ್ರದ ರಾಜಕೀಯ ಸತ್ತೆಯಾದುದರಿಂದ. ಧರ್ಮ - ನೀತಿ - ನ್ಯಾಯಗಳು ಮತ್ತು ಅಂತಿಮ ಜಯ ಆಯಾಯಾ ರಾಷ್ಟ್ರದ್ದೇ ಆಗಿರುತ್ತದೆ . ಈ 'ರಾಷ್ಟ್ರಪ್ರೇಮ 'ವೆಂಬ 'ಸಂಸ್ಥೆ 'ಯ ಪ್ರಭಾವವನ್ನು ನಾವು ಬಿಬಿಸಿಯ ಅನುಭವದಿಂದ ಗ್ರಹಿಸಬಹುದು . ಫಾಕ್‌ಲಂಡ್ ದ್ವೀಪಕ್ಕಾಗಿ ಇಂಗ್ಲಂಡ್ ಮತ್ತು ಅರ್ಜೆಂಟೀನಾ ನಡುವೆ ಯುದ್ಧ ನಡೆದಾಗ ಬಿಬಿಸಿ ಎಂದಿನಂತೆ 'ಅರ್ಜೆಂಟೀನಾ ಹೇಳುವಂತೆ ...' .... 'ಇಂಗ್ಲಂಡ್

ಹೇಳುವಂತೆ ...' ಎಂದು ವಸ್ತುನಿಷ್ಠವಾಗಿ ಯುದ್ಧದ ಸುದ್ದಿಯನ್ನು ಚಿತ್ರಿಸಲು ಪ್ರಾರಂಭಿಸಿತು. ಪರಿಣಾಮತಃ, ಬಿಬಿಸಿ ಸಂಸ್ಥೆಯ ವಿರುದ್ಧ ಇಂಗ್ಲಂಡ್ ನಾಡಿನುದ್ದಕ್ಕೂ ಜನರ ಅಸಮಾಧಾನವು ಹರಡಿ, ಬ್ರಿಟಿಶ್ ಸರ್ಕಾರವು ಆ ಸಂಸ್ಥೆಗೆ ಕೊಡುತ್ತಿದ್ದ ಅನುದಾನವನ್ನು ನಿಲ್ಲಿಸುವ ಸಂದರ್ಭ ಬಂದಿತು. ಆ ಸಂಸ್ಥೆಯ ಅಂದಿನ ಅಧ್ಯಕ್ಷರು ರಾಜೀನಾಮೆ ನೀಡಬೇಕಾಯಿತು.

ರಾಷ್ಟ್ರೀಯತೆ ಮತ್ತು ರಾಷ್ಟ್ರಪ್ರೇಮಗಳಂತೆಯೇ ಸ್ವಧರ್ಮ, ಸ್ವಭಾಷೆ, ಸ್ವಸಂಸ್ಕೃತಿ ಮುಂತಾದ 'ವ್ಯವಸ್ಥೆ'ಗಳೆಲ್ಲವೂ ಪರೋಕ್ಷವಾಗಿ ಅಭಿವ್ಯಕ್ತಿ ಮಾಧ್ಯಮಗಳ ಮೇಲೆ ಪ್ರಭಾವ ಬೀರುತ್ತಲೇ ಇರುತ್ತವೆ. ಇವೆಲ್ಲವುಗಳಿಂದ ಮುಕ್ತವಾದ ಅಭಿವ್ಯಕ್ತಿ ಸಾಹಿತ್ಯದಲ್ಲಾಗಲೀ, ಲಲಿತಕಲೆಗಳಲ್ಲಾಗಲೀ, ಸಮೂಹ ಮಾಧ್ಯಮಗಳಲ್ಲಾಗಲೀ ಎಂದೂ ಸಾಧ್ಯವಾಗುವುದಿಲ್ಲ.

೨

ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೇರವಾಗಿ ನಿಯಂತ್ರಿಸುವ ಅಂಶಗಳನ್ನು ಪರಿಗಣಿಸುವಾಗ ಮೊಟ್ಟಮೊದಲು ನಮಗೆ ಕಾಣುವುದೇನೆಂದರೆ ಆಧುನಿಕ ಪ್ರಜಾಪ್ರಭುತ್ವ ವ್ಯವಸ್ಥೆಗಳೆಲ್ಲವೂ ಒಂದು ವಿಧದ ದ್ವಂದ್ವದಲ್ಲಿ ಸಿಕ್ಕಿಕೊಂಡು ಹಗ್ಗದ ಮೇಲೆ ನಡೆಯುವ ದೊಂಬರಾಟವನ್ನಾಡುವುದು. ಪ್ರಾರಂಭದಲ್ಲಿ ಎಲ್ಲಾ ಪ್ರಜಾಪ್ರಭುತ್ವಗಳೂ ಸಂಪೂರ್ಣ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ತಮ್ಮ ಪ್ರಜೆಗಳಿಗೆ ನೀಡುತ್ತವೆ, ಮತ್ತು ಅನಿರ್ಬಂಧಿತ ಅಭಿವ್ಯಕ್ತಿ ಸ್ವಾತಂತ್ರ್ಯವೇ ಪ್ರಜಾತಂತ್ರ ವ್ಯವಸ್ಥೆಯ ಅಡಿಗಲ್ಲು ಎಂದು ಘೋಷಿಸುತ್ತವೆ. ಅನಂತರ ಒಂದೊಂದೇ ಅಪವಾದಗಳನ್ನು ನಿರ್ಮಿಸುತ್ತಾ ಆ ಸ್ವಾತಂತ್ರ್ಯವನ್ನು ಆದಷ್ಟು ಮೊಟಕುಗೊಳಿಸುತ್ತವೆ.

ಮೇಲುನೋಟಕ್ಕೆ ಈ ಹೇಳಿಕೆ ಅಮೆರಿಕಾದ ಪ್ರಜಾತಂತ್ರ ವ್ಯವಸ್ಥೆಯನ್ನು ಕುರಿತು ಸತ್ಯವಲ್ಲವೆಂದು ತೋರುತ್ತದೆ. ಏಕೆಂದರೆ, ಅಮೆರಿಕನ್ ಸಂವಿಧಾನದ ಫಸ್ಟ್ ಅಮೆಂಡ್‌ಮೆಂಟ್ (ಮೊದಲಿನ ಹತ್ತು ಅಮೆಂಡ್‌ಮೆಂಟ್‌ಗಳನ್ನು 'ಬಿಲ್ ಆಫ್ ರೈಟ್ಸ್' - ಮೂಲಭೂತ ಹಕ್ಕುಗಳು ಎಂದು ಕರೆಯುತ್ತಾರೆ) ಹೀಗಿದೆ : "Congress shall make no law .. abridging the freedom of speech or of the press". (ಪ್ರಜೆಗಳ ವಾಕ್‌ಸ್ವಾತಂತ್ರ್ಯವನ್ನು ಅಥವಾ ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವಂತಹ ಯಾವ ಶಾಸನವನ್ನೂ ಶಾಸನಸಭೆ ಮಾಡತಕ್ಕದ್ದಲ್ಲ). ಈ ನಿಷೇಧ ಸಂಪೂರ್ಣವಾದದ್ದು ಮತ್ತು ಇದಕ್ಕೆ ಯಾವುದೇ ಅಪವಾದಗಳನ್ನು ಸಂವಿಧಾನ ಗುರುತಿಸುವುದಿಲ್ಲ. ಆದ್ದರಿಂದ ಈ ರಾಷ್ಟ್ರದಲ್ಲಿ ಸಂಪೂರ್ಣ ಅಭಿವ್ಯಕ್ತಿ ಸ್ವಾತಂತ್ರ್ಯವಿದೆಯೆಂದು ಹೇಳಬಹುದಲ್ಲವೆ? ಉತ್ತರ ಹೌದು ಮತ್ತು ಅಲ್ಲ. 'ಅಲ್ಲ' ಏಕೆಂದರೆ 'ಸಾರ್ವಜನಿಕ ಹಿತ'ದ (*public order*) ನೆಲೆಯಲ್ಲಿ, ಕಾಲದಿಂದ ಕಾಲಕ್ಕೆ ಅಮೆರಿಕಾದ ಅತ್ಯುಚ್ಚ ನ್ಯಾಯಾಲಯ ಅನೇಕ 'ವಿಶಿಷ್ಟ ಪರಿಸ್ಥಿತಿ'ಗಳನ್ನು ಗಮನಿಸುತ್ತಾ ಈ ಸ್ವಾತಂತ್ರ್ಯವನ್ನು ಕುಗ್ಗಿಸುತ್ತಾ ಬಂದಿದೆ. 'ತಾತ್ವಿಕ ನೆಲೆಯ ತರ್ಕವನ್ನು ವ್ಯಾವಹಾರಿಕ ಜ್ಞಾನದಿಂದ ಆಗಾಗ್ಗೆ ಹದಮಾಡಬೇಕಾಗುತ್ತದೆ' (" *Doctrinaire logic has to be*

tempered with a little practical wisdom") ಎಂಬುದು ಈ ಶತಮಾನದಲ್ಲಿ ಅಮೆರಿಕಾದ ನ್ಯಾಯಾಲಯಗಳು ಒಪ್ಪಿಕೊಂಡಿರುವ ನಿಲುವು.

ಮೂಲಭೂತ ಹಕ್ಕಾದ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾರ್ವಜನಿಕ ಹಿತ -ತಕ್ಕಡಿಯ ಈ ಎರಡು ತಟ್ಟೆಗಳನ್ನು ಸಮನಾಗಿ ತೂಗುವ ದೊಂಬರಾಟದಲ್ಲಿ ಭಾರತೀಯ ಸಂವಿಧಾನ ಅಕ್ಷರಶಃ ಬಲಗೈಯಿಂದ ಕೊಟ್ಟುದನ್ನು ಎಡಗೈಯಿಂದ ಕಿತ್ತುಕೊಳ್ಳುತ್ತಿದೆ .ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉಲ್ಲೇಖಿಸುವ ಭಾರತೀಯ ಸಂವಿಧಾನದ ೧೯ (೧):ಎ ಭಾಗ ಹೀಗಿದೆ :'ಎಲ್ಲಾ ಭಾರತೀಯ ಪ್ರಜೆಗಳಿಗೂ ವಾಕ್ ಹಾಗೂ ಅಭಿವ್ಯಕ್ತಿ ಸ್ವಾತ.ತ್ರ್ಯದ ಹಕ್ಕು ಇದೆ ' (*All citizens shall have the right to freedom of speech and expression*) ಅಭಿವ್ಯಕ್ತಿ ಸ್ವಾತಂತ್ರ್ಯ ಪತ್ರಿಕಾ ಸ್ವಾತಂತ್ರ್ಯವನ್ನು ಮತ್ತು ಪ್ರಸಾರ ಸ್ವಾತಂತ್ರ್ಯವನ್ನು ಒಳಗೊಳ್ಳುತ್ತದಾದರೂ ಪತ್ರಿಕೋದ್ಯಮಕ್ಕೆ ಸಾಮಾನ್ಯ ಪ್ರಜೆಗಳಿಗಿರದ ವಿಶೇಷ ಸವಲತ್ತುಗಳೇನೂ(*privileges*) ಇಲ್ಲ.

ಮುಂದುವರಿಯುತ್ತಾ ಸಂವಿಧಾನದ ೧೯(೨) ಭಾಗವು ಮೇಲೆ ಹೇಳಿದ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ 'ಉಚಿತ ನಿರ್ಬಂಧಗಳು ' (*reasonable restrictions*) ಇರಬಹುದೆಂದು ಒಪ್ಪುತ್ತದೆ .'ಉಚಿತ ನಿರ್ಬಂಧಗಳು 'ಇರಬಹುದಾದ ನೆಲೆಗಳೆಂದರೆ :ಭಾರತದ ಸಾರ್ವಭೌಮತ್ವ ಮತ್ತು ಅಖಂಡತೆ ,ರಾಷ್ಟ್ರದ ಭದ್ರತೆ , ಪರದೇಶಗಳೊಡನಿರುವ ಸ್ನೇಹಪೂರ್ಣ ಸಂಬಂಧಗಳು ,ಸಾರ್ವಜನಿಕ ಶಾಂತಿ ,ಸಭ್ಯತೆ ಹಾಗೂ ನೈತಿಕತೆ ,ಅಥವಾ ನ್ಯಾಯಾಲಯ ನಿಂದನೆ ,ಮಾನ ನಷ್ಟ ,ಮತ್ತು ಅಪರಾಧ ಪ್ರಚೋದನೆ ಇವುಗಳಿಗೆ ಸಂಬಂಧಿಸಿದಂತೆ.ಇವುಗಳಲ್ಲಿ ಯಾವ ಒಂದು ನೆಲೆಯಲ್ಲಿಯೂ ಉಚಿತ ನಿರ್ಬಂಧವನ್ನು ಶಾಸನಗಳ ಮೂಲಕ ಕೇಂದ್ರ ಸರಕಾರ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹೇರಬಹುದು.ಇಷ್ಟೇ ಅಲ್ಲದೆ, ಯಾವ ಸಂದರ್ಭದಲ್ಲಿ ಮತ್ತು ಯಾವುದು 'ಉಚಿತ ನಿರ್ಬಂಧ ' ಎಂಬುದು ನ್ಯಾಯಾಲಯದ ನಿರ್ಣಯಕ್ಕೆ ಬಿಟ್ಟ ವಿಷಯ .ಅರ್ಥಾತ್, ಬಾರತೀಯ ಸಂವಿಧಾನ ತನ್ನ ಪ್ರಜೆಗಳಿಗೆ 'ಸೀಮಿತ' ವಾಕ್ - ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿದೆಯೇ ಹೊರತು ಸಂಪೂರ್ಣ ಸ್ವಾತಂತ್ರ್ಯವನ್ನಲ್ಲ ಎಂಬುದನ್ನು ನಾವು ಮರೆಯಬಾರದು.

ಪ್ರಾರಂಭದಲ್ಲಿ ಸಂವಿಧಾನವು ನೀಡಿದ್ದ ಈ ರೀತಿಯ 'ಸೀಮಿತ' ವಾಕ್-ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ಅನಂತರ ಸಂವಿಧಾನಕ್ಕೆ ತರಲಾದ ತಿದ್ದುಪಡಿಗಳು ಇನ್ನಷ್ಟು ಸೀಮಿತಗೊಳಿಸಿವೆ. ಭಾರತೀಯ ದಂಡ ಸಂಹಿತೆ ೧೫೩ಕ್ಕೆ ಬದಲಾಗಿ ಬಂದಿರುವ ೧೫೩ ಎ ಮತ್ತು ೧೫೩ ಬಿ ಸೆಕ್ಶನ್‌ಗಳು ,ಮತ್ತು ಪ್ರತ್ಯೇಕವಾಗಿ ೧೫ನೆಯ ಅಧ್ಯಾಯದ (ಧರ್ಮವನ್ನು ಕುರಿತಾದ ಅಪರಾಧಗಳು ಎಂಬ ಶೀರ್ಷಿಕೆಯುಳ್ಳ) ೨೯೫ -೨೯೮ ಸೆಕ್ಶನ್‌ಗಳು ಅಳಿದುಳಿದಿದ್ದ ವಾಕ್ -ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮತ್ತಷ್ಟು ಕುಗ್ಗಿಸುತ್ತವೆ.೧೯೭೨ರಲ್ಲಿ ತಿದ್ದುಪಡಿಯಾದ ಸೆಕ್ಶನ್ ೧೫೩ ಎ ಎಷ್ಟು ವಿಶಾಲ ವ್ಯಾಪ್ತಿಯನ್ನು ಹೊಂದಿದೆ ಎಂದರೆ -'ಮತ , ಜನಾಂಗ, ಜನ್ಮಸ್ಥಳ ,ಇರುವ ಪ್ರದೇಶ ,ಭಾಷೆ ,ಜಾತಿ ,ವರ್ಗ ,ಅಥವಾ ಇಂತಹ ನೆಲೆಗಳಲ್ಲಿ ಬಾಯಿಮಾತು ,ಬರವಣಿಗೆ, ಸಂಜ್ಞೆ ಇವುಗಳ ಮೂಲಕ ಪ್ರಾದೇಶಿಕ ಸಮುದಾಯಗಳ ಮಧ್ಯೆ

ದ್ವೇಷ ಅಥವಾ ಶತ್ರುತ್ವವನ್ನು ಉಂಟು ಮಾಡಿದರೆ, ಅಥವಾ ಹಾಗೆ ಮಾಡಲು ಪ್ರಯತ್ನಿಸಿದರೆ ಆ ವ್ಯಕ್ತಿ ಶಿಕ್ಷಾರ್ಹ 'ಎಂದು ವಿಧಿಸುತ್ತದೆ .(ಇದು ಆ ಸೆಕ್ಷನ್‌ನ ಸಾರಾಂಶ ಅಷ್ಟೇ). ಈ ಸೆಕ್ಷನ್‌ಗಳನ್ನು ಪಪಶಃ ಎಲ್ಲಾ ಸಂದರ್ಭಗಳಲ್ಲಿಯೂ ಅನ್ವಯಿಸಿದರೆ , ಭಾರತದ ಎಲ್ಲಾ ಪ್ರಾದೇಶಿಕ ಪಕ್ಷಗಳನ್ನು ಹಾಗೂ ಸಂಸ್ಥೆಗಳನ್ನು , ಬಹುತೇಕ ರಾಷ್ಟ್ರೀಯ ಪ್ರಾದೇಶಿಕ ನಾಯಕರುಗಳನ್ನು ಮತ್ತು ಬಹ್ವಂಶ ಎಲ್ಲಾ ರೀತಿಯ ಬರವಣಿಗೆಗಳನ್ನೂ ಶಿಕ್ಷಿಸಬೇಕಾಗುತ್ತದೆ. (ಮತ್ತೆ ,ಮತೀಯ / ಧಾರ್ಮಿಕ ನೆಲೆಯ ಇಂಥ ಸೆಕ್ಷನ್‌ಗಳಲ್ಲದೆ , ನೈತಿಕತೆ , ಸಭ್ಯತೆ - ಶೀಲ ಮುಂತಾದವುಗಳಿಗೆ ಸಂಬಂಧಿಸಿದಂತೆ ಬೇರೆಯೇ ಆದ ಸೆಕ್ಷನ್‌ಗಳಿವೆ).

ಮೇಲೆ ಹೇಳಿದ ಸೆಕ್ಷನ್‌ಗಳ ಆಧಾರದಲ್ಲಿ ಅಪರಾಧಗಳನ್ನು ಗುರುತಿಸಲು ನ್ಯಾಯಾಲಯಗಳು , ಮುಖ್ಯವಾಗಿ , 'ಉದ್ದೇಶ ' ಮತ್ತು 'ಪರಿಣಾಮ ' (*Intention and Result*) ಇವುಗಳನ್ನು ಗಮನಿಸುತ್ತದೆ . ಕಾರ್ಯ ಮಾತಿನ ರೂಪದಲ್ಲಿರಲಿ ಅಥವಾ ಬರವಣಿಗೆಯ ರೂಪದಲ್ಲಿರಲಿ, ಅಪರಾಧವೆಂದು ಪರಿಗಣಿಸಲು ಆ ಕಾರ್ಯದ ಹಿಂದೆ ಭಿನ್ನ ಭಿನ್ನ (ಮತೀಯ ಮುಂತಾದ) ವರ್ಗಗಳ ನಡುವೆ ದ್ವೇಷವನ್ನುಂಟುಮಾಡುವ 'ಉದ್ದೇಶ' ವಿರಬೇಕು ; ಅಥವಾ ಅಂತಹ ದ್ವೇಷ ವಾಸ್ತವಿಕವಾಗಿ ನಿರ್ಮಾಣವಾಗಿರಬೇಕು . ಇಲ್ಲದಿದ್ದರೆ , ಆ ಲೇಖನ / ಭಾಷಣ ಅಪರಾಧವಾಗುವುದಿಲ್ಲ .

ಈ ಸಂದರ್ಭದಲ್ಲಿ ಗಮನಿಸಬೇಕಾದ ಮತ್ತೂ ಒಂದು ಅಂಶವೆಂದರೆ , ಒಂದು ಕಾರ್ಯದ 'ಉದ್ದೇಸ 'ವನ್ನು ಗುರುತಿಸಲು ಸಂಬಂಧಿಸಿದ ಕೃತಿ / ಲೇಖನ / ಭಾಷಣ ಇವುಗಳನ್ನು ಇಡಿಯಾಗಿ ಪರಿಗಣಿಸಬೇಕೇ ಹೊರತು ಅಲ್ಲಲ್ಲಿ ಬರುವ ಕೆಲವು ವಾಕ್ಯಗಳನ್ನು / ಭಾಗಗಳನ್ನು ಸಂದರ್ಭದಿಂದ ಹೊರತುಪಡಿಸಿ ಪರಿಗಣಿಸತಕ್ಕದ್ದಲ್ಲ .

ಈ ಎರಡು ಕಾರಣಗಳಿಂದಾಗಿ , ಎಂದರೆ ೧೫೩ಎ ಇತ್ಯಾದಿ ಶಾಸನಗಳ ನೆಲೆಯಲ್ಲಿ ಅಪರಾಧವಾಗಲು 'ಉದ್ದೇಶ ', 'ಪರಿಣಾಮ ', ಮತ್ತು ಕೃತಿಯ / ಲೇಖನದ / ಭಾಷಣದ ಒಟ್ಟಾರೆ ಅರ್ಥವನ್ನು ಪರಿಗಣಿಸಲಾಗುತ್ತದೆ ಎಂಬ ಕಾರಣದಿಂದಾಗಿ , ಈ ಶಾಸನಗಳು ಮತ - ಧರ್ಮ - ಭಷೆ - ಸಂಸ್ಕೃತಿ ಇವುಗಳನ್ನು ಕುರಿತು ನಡೆಯುವ ಗಂಭೀರ ವೈಚಾರಿಕ ಚಿಂತನೆಯನ್ನು ಮೊಟಕುಗೊಳಿಸುತ್ತವೆ ಎಂಬುದು ಸತ್ಯವಲ್ಲ ಎಂದು ಕೆಲವರು ವಾದಿಸುತ್ತಾ , ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿರುವ ಈ ನಿರ್ಬಂಧಗಳನ್ನು ಸಮರ್ಥಿಸುತ್ತಾರೆ. ಅಂತಹವರು ಮುಂದುವರೆಯುತ್ತಾ ಬಹುಧರ್ಮೀಯ - ಬಹುಭಾಷಿಕ - ಬಹುಜನಾಂಗಿಕ ಭಾರತೀಯ ಸಮಾಜದ ಸಂದರ್ಭದಲ್ಲಿ ಸಾರ್ವಜನಿಕ ಶಾಂತಿ ಮತ್ತು ಸಹಬಾಳ್ವೆಯ ದೃಷ್ಟಿಯಿಂದ ಇಂತಹ ನಿರ್ಬಂಧಗಳು ಅನಿವಾರ್ಯ ಎಂದು ವಾದಿಸುತ್ತಾರೆ. (೧೯೬೧ರಲ್ಲಿ ಈ ಮೇಲಿನ ೧೫೩ಎ ಮತ್ತು ೧೫೩ಬಿ ತಿದ್ದುಪಡಿಗಳು ಅಂಗೀಕಾರಕ್ಕಾಗಿ ಸಂಸತ್ತಿನ ಮುಂದಿದ್ದಾಗ ಇಂತಹದೇ ವಾದಗಳು ಮಂಡಿಸಲ್ಪಟ್ಟವು .)

ಇಂತಹ ವಾದ ಎಷ್ಟು ಸ್ವೀಕಾರಾರ್ಹ ? ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ - ಸಾಂಸ್ಕೃತಿಕ ಪರಿಸ್ಥಿತಿಯನ್ನು ಗಮನಿಸಿದರೆ ಈ ಪ್ರಶ್ನೆಯ ಉತ್ತರ ಸರಳವಾಗಿ 'ಅಹುದು ' ಎಂದು ಮಾತ್ರ ಇರಲು ಸಾಧ್ಯವಿಲ್ಲ . ಅನೇಕ ಸಂದರ್ಭಗಳಲ್ಲಿ ಇಂತಹ ಕರಾಳ ಶಾಸನಗಳಿವೆ ಎಂಬ ಅಂಶವೇ ಮೂಲಭೂತವಾದಿಗಳಿಗೆ ಒಂದು ವಿಧದ ಕುಮ್ಮಕ್ಕು ಕೊಟ್ಟಂತಾಗಬಹುದು;

ಮತ್ತು ಅವರು ಬೀದಿಗಿಳಿದು, ಪ್ರದರ್ಶನ ಮಾಡಿ, ಸರ್ಕಾರದ ಮೇಲೆ ಒತ್ತಡ ತರಬಹುದು. ಅಂತಹ ಸಂದರ್ಭಗಳಲ್ಲಿ, ಅಂತಿಮವಾಗಿ ನ್ಯಾಯಾಲಯದ ತೀರ್ಪು ಆಪಾದಿತರನ್ನು ನಿರ್ದೋಷಿ ಎಂದು ಘೋಷಿಸಿದರೂ, ಲೇಖಕರ ಮಾನಸಿಕ / ದೈಹಿಕ / ಆರ್ಥಿಕ ಹಿಂಸೆ ಕಷ್ಟಗಳೇನೂ ಕಡಿಮೆಯಾಗುವುದಿಲ್ಲ. ಇಂತಹ ಒಂದು ಪ್ರಾತಿನಿಧಿಕ ಘಟನೆಯನ್ನು ಪರಿಗಣಿಸಿದರೆ ಮೇಲಿನ ಅಂಶವು ಸ್ಪಷ್ಟವಾಗುತ್ತದೆ.

ಕಳೆದ ದಶಕದಲ್ಲಿ ಅತ್ಯಂತ ಪ್ರಭಾವಶಾಲಿಯಾಗಿದ್ದ 'ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ 'ವಾರಪತ್ರಿಕೆಯ ಏಪ್ರಿಲ್-೧೦-೧೬ ೧೯೯೨ರ ಸಂಚಿಕೆಯಲ್ಲಿ ನ್ಯಾನ್ಸಿ ಅಡಜಾನಿಯಾ ಎಂಬ ಸಂಶೋಧಕಿಯ 'ಪುರಾಣ ಮತ್ತು ಮಹಾಪುರಾಣ' (*"Myth And Supermyth" - Nancy Adajanio*) ಎಂಬ ವಿದ್ವತ್ಪೂರ್ಣ ಲೇಖನವೊಂದು ಪ್ರಕಟವಾಯಿತು. ಈ ಲೇಖನದ ಮುಖ್ಯ ವಾದ ಹೀಗಿದೆ: ವಸಾಹತುಶಾಹಿಯಿಂದ ಬಿಡುಗಡೆ ಪಡೆದ ಆರಂಭಕಾಲದಲ್ಲಿ ನೂತನ ಸ್ವತಂತ್ರ ರಾಷ್ಟ್ರಗಳು ಒಂದು ಹೊಸ ಇತಿಹಾಸವನ್ನು ತಾವೇ ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಅನಿವಾರ್ಯವಾಗಿ, ರಾಷ್ಟ್ರೀಯತೆಯ ಪರಿಕಲ್ಪನೆಯ ಆಧಾರದಲ್ಲಿ, ಅಂತಹ ಸ್ವತಂತ್ರ ರಾಷ್ಟ್ರಗಳು ತಮ್ಮ ಚರಿತ್ರೆಯನ್ನು ಪುನರ್‌ರಚಿಸುವಾಗ ಗತಕಾಲದ ರಾಜಕೀಯ - ಸಾಂಸ್ಕೃತಿಕ ನಾಯಕರನ್ನು ಅವರ ವಿಶಿಷ್ಟ ಚಾರಿತ್ರಿಕ ಸಂದರ್ಭಗಳಿಂದ ಬೇರ್ಪಡಿಸಿ, ಆದರ್ಶೀಕರಿಸಿ ಅತಿಮಾನವರಂತೆ, ರಾಷ್ಟ್ರದ ಮಾದರಿಗಳಂತೆ ಅವರನ್ನು ಚಿತ್ರಿಸುತ್ತವೆ. ಇಂತಹ ಅತಿಮಾನವ ಮಾದರಿಗಳು ತಮ್ಮ ವಿಶಿಷ್ಟ ಕಾಲ - ದೇಶ ಸಂದರ್ಭಗಳಿಂದ ಬೇರೆಯಾಗಿ, ಆ ಕಾರಣದಿಂದ ಅರ್ಥಹೀನರಾಗಿ ಪುರಾಣಪುರುಷರಾಗುತ್ತಾರೆ. ಈ ವಾದದ ನಿದರ್ಶನಾರ್ಥವಾಗಿ ಲೇಖಕಿ ಶಿವಾಜಿ, ಝಾನ್ಸಿರಾಣಿ ಲಕ್ಷ್ಮೀಬಾಯಿ ಮತ್ತು ಅವಳ ಗಂಡ ಗಂಗಾಧರರಾವ್ ಇವರುಗಳ ವ್ಯಕ್ತಿತ್ವವನ್ನು ಚರ್ಚಿಸುತ್ತಾರೆ.

ಒಟ್ಟಾರೆಯಾಗಿ, 'ಪುರಾಣ ಮತು ಮಹಾಪುರಾಣ 'ಲೇಕನ ವಸಾಹತೋತ್ತರ ಸಾಂಸ್ಕೃತಿಕ ಚಿಂತನೆಯ ಕ್ಷೇತ್ರದಲ್ಲಿ ಇಲ್ಲಿಯವರೆಗೆ ಬಂದಿರುವ ಒಂದು ಅತ್ಯುತ್ತಮ ಲೇಖನ. ಆದರೆ, ಆ ಸಂಚಿಕೆ ಹೊರಬಂದಕೂಡಲೇ ಮಹಾರಾಷ್ಟ್ರದಲ್ಲಿ ಎಲ್ಲೆಡೆಯೂ ಪ್ರತಿಭಟನೆಯೆದ್ದು, ಆ ಸಂಚಿಕೆಯು ಸುಡಲ್ಪಟ್ಟಿತು. ಆ ಪತ್ರಿಕೆಯ ಪ್ರಕಾಶಕ, ಸಂಪಾದಕ, ಮತ್ತು ಲೇಖಕಿ ಇವರನ್ನು ಬಂಧಿಸಬೇಕೆಂದು ಎಲ್ಲಾ ಕಡೆಯೂ ಕೂಗೆದ್ದಿತು. ಆಗ ಮುಖ್ಯಮಂತ್ರಿಯಾಗಿದ್ದ ಶರ್ ಪವಾರ ಅವರೂ ಅಸೆಂಬ್ಲಿಯಲ್ಲಿ ಬಿಜೆಪಿ - ಶಿವಸೇನೆ ಶಾಸಕರೊಡನೆ ಸೇರಿ ಈ ಲೇಖನವನ್ನು ಖಂಡಿಸಿ, 'ಈ ಲೇಖನ ಸಮಾಜದಲ್ಲಿ ಒಡಕುಂಟುಮಾಡುತ್ತದೆ ಮತ್ತು ರಾಷ್ಟ್ರೀಯ 'ಏಕತೆಗೆ ' ಭಂಗ ತರುತ್ತದೆ ' ಎಂದು ತೀರ್ಪಿತ್ತರು. ಭಾರತೀಯ ದಂಡಸಂಹಿತೆ ೧೫೩ಎ ಮತ್ತು ಬಿ ಕಲಮುಗಳ ಆಧಾರದಲ್ಲಿ ಸಂಪಾದಕ - ಪ್ರಕಾಶಕ - ಲೇಖಕಿ ಇವರುಗಳ ಮೇಲೆ ಮೊಕದ್ದಮೆ ಹೂಡಲಾಯಿತು. (ಕೊನೆಗೆ ಆಪಾದನೆ ನಿರಾಧಾರವೆಂದು ನ್ಯಾಯಾಲಯ ತೀರ್ಪಿತ್ತುದು ಬೇರೆಯೇ ವಿಷಯ.)

ಈ ಸಂದರ್ಭದಲ್ಲಿ ಇನ್ನೊಂದು ಪ್ರಶ್ನೆ ಏಳುತ್ತದೆ : ಹಾಗಾದರೆ ಸಾಹಿತಿಯ / ಸಂಶೋಧಕನ / ಭಾಷಣಕಾರನ ಸಾಮಾಜಿಕ ಜವಾಬ್ದಾರಿ ಏನೂ ಇಲ್ಲವೇನು ? ಒಂದು ಸಮಾಜ ಅನೇಕ ಸಾಂದರ್ಭಿಕ, ಸಾಂಸ್ಕೃತಿಕ, ಧಾರ್ಮಿಕ ಒತ್ತಡಗಳಿಂದಾಗಿ ಕೆಲವು ರೂಪಕ

ಗಳನ್ನು ಹಾಗೂ ಸಂಕೇತಗಳನ್ನು ಸೃಷ್ಟಿಸಿ ಬೆಳೆಸುತ್ತದೆ. (ಧಾರ್ಮಿಕ ಕ್ಷೇತ್ರದಲಿ ರಾಮ, ಸೀತೆ ಇತ್ಯಾದಿ; ರಾಜಕೀಯ - ಸಾಂಸ್ಕೃತಿಕ ಕ್ಷೇತ್ರದಲ್ಲಿ ಶಿವಾಜಿ, ರಾಣಾಪ್ರತಾಪ್, ಗುರುಗೋವಿಂದ ಸಿಂಗ್, ಬಸವೇಶ್ವರ ಇತ್ಯಾದಿ ...). ಒಂದು ಇಡೀ ಸಮುದಾಯಕ್ಕೆ ಅನನ್ಯತೆಯನ್ನು ಕೊಟ್ಟು ಅದನ್ನು ಆತ್ಮವಿಶ್ವಾಸ ಮತ್ತು ಸೃಜನಶೀಲತೆಯ ಹಾದಿಯಲ್ಲಿ ಮುನ್ನಡೆಸುವ ಶಕ್ತಿ ಈ ರೂಪಕ - ಸಂಕೇತಗಳಿಗಿರುತ್ತದೆ. ಅಂತಹ ಸಂದರ್ಭದಲ್ಲಿ, ಆ ಸಂಕೇತ - ರೂಪಕಗಳನ್ನು ಅರ್ಥಹೀನವೆಂದು ಸಾಧಿಸುವುದರಿಂದ, ಮತ್ತು ನಷ್ಟಗೊಳಿಸುವುದರಿಂದ ಏನನ್ನು ಸಾಧಿಸಿದಂತಾಗುತ್ತದೆ? ಇದು ಕುತ್ಸಿತ ಮೂರ್ತಿಭಂಜನೆಯಲ್ಲದೆ ಮತ್ತೇನು?

ಈ ವಾದವನ್ನು ಖಂಡಿಸುವುದು ಅಥವಾ ಅಲ್ಲಗಳೆಯುವುದು ಸುಲಭವೇನಲ್ಲ. ಅದೂ ಇನ್ನೂ ಶೇಕಡಾ ೫೦ರಷ್ಟು ಅನಕ್ಷರಸ್ಥರಿರುವ ಮತ್ತು ಅಗಾಧ ಬಡತನದಿಂದ ಬಳಲುತ್ತಿರುವ ಭಾರತದಂತಹ ರಾಷ್ಟ್ರದ ಸಂದರ್ಭದಲ್ಲಿ ಮೇಲಿನ ವಾದವನ್ನು ಅಲ್ಲಗಳೆಯಲು ಸಾಧ್ಯವೇ ಇಲ್ಲ ಎಂದು ತೋರುತ್ತದೆ. ಆದ್ದರಿಂದಲೇ ರಶ್ದಿ ಪ್ರಕರಣದಲ್ಲಿ ಅನೇಕ ಶ್ರೇಷ್ಠ ಚಿಂತಕರು ಮತ್ತು ಸಾಹಿತ್ಯ ಪ್ರಿಯರು 'ಯಾವ ವೈಚಾರಿಕ ಪ್ರಣಾಲಿಯೂ ಅಥವಾ ಸಾಹಿತ್ಯಕೃತಿಯೂ ಸಾಮೂಹಿಕ ಹಿತಕ್ಕಿಂತ ಮೇಲಲ್ಲ. ನೂರಾರು ಮುಗ್ಧ ಜನರ ಸಾವು ನೋವುಗಳಿಗೆ ಕಾರಣವಾಗುವುದಾದರೆ ಅಂತಹ ವೈಚಾರಿಕತೆ ಅಥವಾ ಸಾಹಿತ್ಯ ಕೃತಿ ಸ್ವೀಕಾರಾರ್ಹವಲ್ಲ' ಎಂಬ ನಿಲುವನ್ನು ತಾಳಿ, ಭಾರತ ಸರಕಾರ ರಶ್ದಿಯ ಕಾದಂಬರಿಯನ್ನು ಬಹಿಷ್ಕರಿಸಿದುದನ್ನು ಸಮರ್ಥಿಸಿದರು.

ಆದರೆ ಆಳವಾಗಿ ನೋಡಿದರೆ ಈ 'ಸಾಮೂಹಿಕ ಹಿತ'ದ ನಿಲುವು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಬುದ್ಧಿವಂತಿಕೆಯ ನಿಲುವೆಂದು ಅರಿವಾಗುತ್ತದೆ. ನಿಜ, ಸಾಹಿತಿ / ಲೇಖಕನಿಗೂ ಸಾಮಾಜಿಕ ಜವಾಬ್ದಾರಿಯಿರಬೇಕು. ನಿಜ, ಬೇಕಾಬಿಟ್ಟಿ ವಿಗ್ರಹಭಂಜನೆ ಸಾಮೂಹಿಕ ಹಿತಕ್ಕೆ ವಿರುದ್ಧವಾಗಬಹುದು. ಆದರೆ, ಒಂದು ಪ್ರಬುದ್ಧ ಸಮಾಜದ ಲಕ್ಷಣವೆಂದರೆ ವಿಗ್ರಹಭಂಜನೆಯನ್ನೂ - ಅದು ಜವಾಬ್ದಾರಿಯುತವಾಗಿರಲಿ ಅಥವಾ ಬೇಜವಾಬ್ದಾರಿಯುತವಾಗಿರಲಿ - ಅದನ್ನು ಅರಗಿಸಿಕೊಳ್ಳುವಂತಿರಬೇಕು. ವೈಚಾರಿಕ ಪ್ರಬುದ್ಧತೆಯ ಲಕ್ಷಣವೆಂದರೆ ರೂಪಕಗಳನ್ನು / ಸಂಕೇತಗಳನ್ನು ಗುರುತಿಸಿ, ಅವುಗಳ ಹಿಡಿತದಿಂದ ಹೊರಬರುವುದು. ರೂಪಕಗಳಿಂದ / ಸಂಕೇತಗಳಿಂದ ಸಂಪೂರ್ಣ ಮುಕ್ತಿ ಎಂದಾದರೂ ಸಾಧ್ಯವೇ ಎಂಬುದು ಬೇರೆಯೇ ವಿಷಯ - ಬಹುಶಃ ಸಾಧ್ಯವಿರಲಿಕ್ಕೂ ಇಲ್ಲ. ಆದರೆ ಸಂಕೇತಗಳನ್ನು / ರೂಪಕಗಳನ್ನು ಪ್ರಶ್ನಿಸುವ, ಮತ್ತು ಆ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳುವ ಮಾನಸಿಕ - ವೈಚಾರಿಕ ಸ್ಥಿತಿ ಒಂದು ಜೀವಂತ ಸಮಾಜದ ಲಕ್ಷಣ. ಯಾವುದೇ ಒಂದು 'ಚರಿತ್ರೆ' ಒಂದು ಸಮಾಜವನ್ನು, ಒಂದು ರಾಷ್ಟ್ರವನ್ನು ಎಂದೆಂದಿಗೂ ಬಂಧಿಸಿಡಲಾರದು - ಬಂಧಿಸಿಡಬಾರದು.

೩

ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯಿಕ - ಸಾಂಸ್ಕೃತಿಕ ಇತಿಹಾಸ, ಅಭಿವ್ಯಕ್ತಿ ಸ್ವಾತಂತ್ರ್ಯದ

ದೃಷ್ಟಿಯಿಂದ ಒಟ್ಟಾರೆ ಭಾರತೀಯ ಇತಿಹಾಸದಿಂದ ಬೇರೆಯಾಗಿಲ್ಲ. ಲೇಖಕರು / ಕಲಾವಿದರು /ಸಾಹಿತ್ಯ ಕೃತಿಗಳು / ಲೇಖನಗಳು ಆಗಿಂದಾಗ್ಗೆ ಸರಕಾರದ ಮತ್ತು ಒಂದಲ್ಲಾ ಒಂದು ಸಮುದಾಯದ ಆಗ್ರಹಕ್ಕೆ ತುತ್ತಾಗಿದ್ದಾರೆ / ತುತ್ತಾಗಿವೆ. ಅಂತಹ ಎಲ್ಲಾ ನಿದರ್ಶನಗಳನ್ನು ಪಟ್ಟಿ ಮಾಡುವುದು ಈ ಸಂದರ್ಭದಲ್ಲಿ ಅಸಾಧ್ಯ; ಆದರೂ ಸಾರ್ವಜನಿಕ ನೆನಪು ಕ್ಷಣಿಕವಾದ್ದರಿಂದ, ಕೆಲವನ್ನಾದರೂ ದಾಖಲಿಸಿದರೆ ಕರ್ನಾಟಕದಲ್ಲಿಯೂ (ಭಾರತದ ಉಳಿದ ರಾಜ್ಯಗಳಲ್ಲಿಯಂತೆ) ಸಮಾಜದಲ್ಲಿ ಎಷ್ಟು ಅಸಹನೆ ಮತ್ತು ಆಕ್ರಮಕ ಪ್ರವೃತ್ತಿ ಕಳೆದ ನಾಲ್ಕೈದು ದಶಕಗಳಲ್ಲಿ ಕಂಡು ಬರುತ್ತಿದೆಯೆಂಬುದು ಗೊತ್ತಾಗುತ್ತದೆ. ಐವತ್ತರ ದಶಕದಲ್ಲಿ ಮಾ. ಹಿರಣ್ಣಯ್ಯನವರ 'ಲಂಚಾವತಾರ' ಅಂದಿನ ಸರಕಾರವನ್ನು ಎಷ್ಟು ಕೆರಳಿಸಿತ್ತೆಂದರೆ ನಾಟಕಗಳಿಗೆ ಪ್ರದರ್ಶನ ಪೂರ್ವ ಲೈಸೆನ್ಸ್ ಪದ್ಧತಿಯನ್ನು ಜಾರಿಗೆ ತರಲು ಸರಕಾರ ಯೋಚಿಸಿತ್ತು. ಅನಂತರ, ಸಾಹಿತಿಗಳ ಗುಂಪೊಂದು ಅನಕೃರವರ ಕಾದಂಬರಿಗಳು ಅಶ್ಲೀಲವೆಂದು ಅವನ್ನು ವಿರೋಧಿಸಿದ್ದರು. ಅನಂತರ, ಕಳೆದ ಮೂವತ್ತು ವರ್ಷಗಳಲ್ಲಿ ಈ ಕೆಳಗಿನ ಕೃತಿಗಳು ಪ್ರತಿಭಟನೆಗೆ / ವಾದವಿವಾದಕ್ಕೆ ಕಾರಣವಾಗಿವೆ. ಅವುಗಳೆಂದರೆ : ಮಾಸ್ತಿಯವರ 'ಚೆನ್ನಬಸವನಾಯಕ' ಮತ್ತು 'ಚಿಕವೀರ ರಾಜೇಂದ್ರ'; ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಪ್ರಕಟವಾದ 'ಮಹಮದ್ ದ ಈಡಿಯಟ್' ಕಥೆ; ಅನಂತಮೂರ್ತಿಯವರ 'ಅವಸ್ಥೆ'ಯನ್ನಾಧರಿಸಿದ ಚಲನ ಚಿತ್ರ; ಸಾರಾ ಅಬೂಬಕರ್ ಅವರ ಕಾದಂಬರಿಗಳು ; ಚಂದ್ರಶೇಖರ್ ಐತಾಳ ಅವರ 'ಬ್ರಾಹ್ಮಣ ಬಂಡಾಯ'; ಕನಕದಾಸರ 'ಮೋಹನ ತರಂಗಿಣಿ'ಯ ಪಠ್ಯಭಾಗಗಳು; ಶಿವಪ್ರಕಾಶ್ ಅವರ 'ಮಹಾಚೈತ್ರ'; ಗಿರೀಶ್ ಕಾರ್ನಾಡರ 'ತುಘಲಕ್' (ಎರಡು ವರ್ಷಗಳ ಹಿಂದೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪೂರ್ಣವಾಗದ ಪ್ರದರ್ಶನ); ಶಿರಾಮ ಕಾರಂತರ 'ಓದುವ ಆಟ'; ಪೋಲಂಕಿ ರಾಮಮೂರ್ತಿಯವರ 'ಸೀತಾಯಣ'; ಪಿ. ವಿ. ನಾರಾಯಣ ಅವರ 'ಧರ್ಮಕಾರಣ'; ಉದ್ಯಾವರ ಮಾಧವಾಚಾರ್ಯರ 'ದೊಡ್ಡ ಭಾಗಮ್ಮನ ಕಥೆ'.... ಇತ್ಯಾದಿ.

ಈ ಪಟ್ಟಿಯನ್ನು ಗಮನಿಸಿದರೆ (ಪಟ್ಟಿ ಅಪೂರ್ಣವಾಗಿದೆ) ಕೆಲವು ವಿಷಾದಕರ ಅಂಶಗಳು ಸ್ಪಷ್ಟವಾಗುತ್ತವೆ. ಅವುಗಳೆಂದರೆ :

ಅ) ಈ ಪಟ್ಟಿಯಲ್ಲಿರುವ ಕೃತಿಗಳಲ್ಲಿ 'ಓದುವ ಆಟ'ವನ್ನು ಬಿಟ್ಟರೆ ಉಳಿದೆಲ್ಲವೂ ಕತೆ - ಕಾದಂಬರಿ - ನಾಟಕಗಳು (ಅವುಗಳ ಸಾಹಿತ್ಯಿಕ ಗುಣ ಏನೇ ಇರಲಿ). ಒಂದೂ ನೇರವಾದ ವೈಚಾರಿಕ ಕೃತಿ / ಲೇಖನ ಅಲ್ಲ. ವೈಚಾರಿಕ ಕೃತಿಯೊಂದು ಪ್ರತಿಭಟನೆಗೆ ಕಾರಣವಾದರೆ ಕನಿಷ್ಠ ಪಕ್ಷ ಮುಕ್ತ ಚರ್ಚೆಗೆ ಅವಕಾಶ ಒದಗಿ ಸಮಾಜದ ಅರಿವು ವಿಸ್ತರಿಸುವ ಸಾಧ್ಯತೆಯಿದೆ. ಆದರೆ, ಸಾಹಿತ್ಯಕೃತಿಗಳನ್ನು ಚಾರಿತ್ರಿಕ ದಾಖಲೆಗಳಂತೆ ಓದಿದರೆ ಚರ್ಚೆ - ಸಂವಾದ ಸಾಧ್ಯವೇ ಇಲ್ಲ.

ಆ) ಮುಖ್ಯವಾದ (ಮತ್ತು ಅತ್ಯಂತ ವಿಷಾದಕರವಾದ) ಅಂಶವೆಂದರೆ, ಒಂದೆರಡು ಅಪವಾದಗಳನ್ನು ಬಿಟ್ಟರೆ, ಬಹುತೇಕ ಕೃತಿಗಳು ಪ್ರತಿಭಟನೆಗೆ ಕಾರಣವಾಗುವ ಸಂದರ್ಭ ಅವುಗಳಿಗೆ ಕೇಂದ್ರ / ರಾಜ್ಯ ಸರಕಾರಗಳ ಪ್ರಶಸ್ತಿ ದೊರಕಿದಾಗ ಅಥವಾ ಅವುಗಳು ಯಾವುದಾದರೂ ಒಂದು ತರಗತಿಗೆ ಪಠ್ಯವಾದಾಗ. ಎಂದರೆ, ಪ್ರತಿಭಟನೆಯ ಹಿಂದೆ ಆರ್ಥಿಕ ಕಾರಣದಿಂದ ಉದ್ಭವಿಸುವ ಸಾಮೂಹಿಕ ಅಸಹನೆ ಹಾಗೂ ಅಸೂಯೆ ಕ್ರಿಯಾಶೀಲ

ಆಗಿರುತ್ತವೆಯೆ ?

೩) ಈ ಪಟ್ಟಿಯಲ್ಲಿರುವ ಯಾವ ಕೃತಿಯ ಸಂದರ್ಭದಲ್ಲಿಯೂ ('ಓದುವ ಆಟ'ವೊಂದನ್ನು ಬಿಟ್ಟರೆ) ಆ ವಿಷಯ ನ್ಯಾಯಾಲಯವನ್ನು ತಲುಪಿಲ್ಲ. ಮತ್ತು, ಆ ವಿಷಯವನ್ನು ಕುರಿತ ಮುಕ್ತ ಚರ್ಚೆಯೂ ಆಗಿಲ್ಲ. ಆಗಿದ್ದರೆ, ತಥ್ಯಾಂಶ ಹೊರಬರುವ ಅವಕಾಶವಿತ್ತು. (ಬಹಳಷ್ಟು ಬಾರಿ ಜನರ ಶ್ರದ್ಧೆಗೂ 'ಸತ್ಯ'ಕ್ಕೂ ಸಂಬಂಧವಿರುವುದಿಲ್ಲ ಎಂಬುದೂ ಇಲ್ಲಿ ಗಮನಿಸಬೇಕಾದ ಅಂಶ.) ಹೆಚ್ಚಿನ ಸಂದರ್ಭಗಳಲ್ಲಿ ಸಂಬಂಧಿಸಿದ ಸರಕಾರ / ವಿವಿ, ಸಮುದಾಯದ ಒತ್ತಡಕ್ಕೆ ಮಣಿದಿವೆ.

೪) ಕೃತಿಗಳಿಗೆ ಸಂಬಂಧಿಸಿದಂತೆ ನಡೆದಿರುವ ಪ್ರತಿಭಟನೆ ಮತ್ತು ವಾದ ವಿವಾದಗಳು ಹೆಚ್ಚಾಗಿ ಧಾರ್ಮಿಕ - ಸಾಂಸ್ಕೃತಿಕ ನೆಲೆಯಲ್ಲಿ ಆಗಿವೆಯೇ ಹೊರತು ವೈಚಾರಿಕ - ತಾರ್ಕಿಕ - ಭಾಷಿಕ ನೆಲೆಯಲ್ಲಲ್ಲ; ಮತ್ತು ಇಂತಹ ಪ್ರತಿಭಟನೆಗಳಿಗೆ ಯಾವ ಧಾರ್ಮಿಕ/ಮತೀಯ ಸಮುದಾಯವೂ ಹೊರತಾಗಿಲ್ಲ. ಎಲ್ಲಾ ಸಮುದಾಯಗಳು ಒಂದಲ್ಲ ಒಂದು ಸಂದರ್ಭದಲ್ಲಿ ತಮ್ಮ ಅಸಹನೆಯನ್ನು ಬೀದಿಗಿಳಿದು ಪ್ರದರ್ಶಿಸಿವೆ.

೦

೦

ಇಲ್ಲಿಯವರೆಗೆ ನಡೆಸಿದ ಚರ್ಚೆಯಿಂದ ಸ್ಪಷ್ಟವಾಗುವ ಅಂಶಗಳನ್ನು ಹೀಗೆ ಸಂಗ್ರಹಿಸಬಹುದು :

೧) ತಾತ್ವಿಕ ನೆಲೆಯಲ್ಲಿ ಸಂಪೂರ್ಣ ಅಭಿವ್ಯಕ್ತಿ ಸ್ವಾತಂತ್ರ್ಯವೆಂಬುದು ಒಂದು ಭ್ರಮೆ. ಪರೋಕ್ಷ ಸಾಂಸ್ಥಿಕ ಒತ್ತಡಗಳು ಆಯ್ಕೆ ಮತ್ತು ಪ್ರತ್ಯೇಕತೆಗಳ ಮುಖಾಂತರ ಎಲ್ಲಾ ಕಾಲದಲ್ಲಿಯೂ ಮತ್ತು ಎಲ್ಲಾ ಸಮಾಜಗಳಲ್ಲಿಯೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕುಗ್ಗಿಸುತ್ತವೆ.

೨) ಪ್ರತ್ಯಕ್ಷ ನಿಯಂತ್ರಣಗಳನ್ನು ಪರಿಗಣಿಸುವಾಗ, ಭಾರತೀಯ ಸಂವಿಧಾನವು ಅಮೆರಿಕಾದ ಸಂವಿಧಾವದಂತೆ ಯಾವಾಗಲೂ ಸಂಪೂರ್ಣ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮಾನ್ಯತೆ ನೀಡಿಲ್ಲ. 'ಉಚಿತ ನಿಯಂತ್ರಣ'ದ ತತ್ವವನ್ನು ಒಪ್ಪಿಕೊಂಡಿದೆ.

೩) ೧೯೭೬ರಲ್ಲಿ ಆದ ಸಾಂವಿಧಾನಿಕ ತಿದ್ದುಪಡಿಗಳು (ಭಾರತೀಯ ದಂಡಸಂಹಿತೆ ೧೫೩ ಎ ಮತ್ತು ೧೫೩ ಬಿ) ವ್ಯಾಪಕವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರಜೆಗಳಿಂದ ಕಸಿದುಕೊಂಡಿವೆ ಈ ಭಾಗಗಳು (ಮತ್ತು ೨೯೫ - ೨೯೮ - ೪೯೯ ಮುಂತಾದ ದಂಡ ಸಂಹಿತೆಯ ಶಾಸನಗಳು) ಒಟ್ಟಾರೆಯಾಗಿ ಆಧುನಿಕ ಭಾರತೀಯ ಸಮಾಜದ 'ಅಭದ್ರ ಹಾಗೂ ಅಪ್ರಬುದ್ಧ' ಮಾನಸಿಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತವೆ (ಕೊನೆಯ ಪಕ್ಷ ಆಳುವವರ ದೃಷ್ಟಿಯಲ್ಲಿ). 'ಯಾರು ಎಲ್ಲಿ ಏನು ಮಾತನಾಡಿದರೆ ಅಥವಾ ಬರೆದರೆ ಸಾರ್ವಜನಿಕ ಶಾಂತಿ ಭಂಗವಾಗುತ್ತದೋ ಎಂಬ ಬಾಲಿಶ ಭೀತಿ ಕಂಡುಬರುತ್ತದೆ. ಎಷ್ಟು ಶೀಘ್ರವಾಗಿ ೧೫೩ ಎ ಮತ್ತು ೧೫೩ ಬಿ ತಿದ್ದುಪಡಿಗಳಿಗೆ ತಿದ್ದುಪಡಿಗಳಾಗುತ್ತವೆಯೋ ಅಷ್ಟು ಭಾರತೀಯ ಚಿಂತನೆ ಬೆಳೆಯಲು ಸಾಧ್ಯವಾಗುತ್ತದೆ.

೪) 'ಸಾಮೂಹಿಕ ಹಿತ', ಲೇಖಕನ ಸಾಮಾಜಿಕ ಜವಾಬ್ದಾರಿ ಮುಂತಾದ ನಿಲುವುಗಳು ಅಮೂರ್ತ ಹಾಗೂ ನಿರ್ದಿಷ್ಟವಾಗಿ ಗುರುತಿಸಲು ಅಸಾಧ್ಯವಾದ ಸಂಗತಿಗಳಾಗಿರುತ್ತವೆ.

ಆದ್ದರಿಂದ ಅವು ಕೇವಲ 'ಯುಕ್ತಿವಾದ'(*rationalisation*) ಗಳಾಗುತ್ತವೆ. ಲೇಪಿಸ / ಅರ್ಥಹೀನವಾಗಿದ್ದರೆ ಓದುಗರಿಂದ ತಿರಸ್ಕರಿಸಲ್ಪಟ್ಟು ಕಾಲಗರ್ಭದಲ್ಲಿ ಮರೆಯಾಗುತ್ತದೆ. ಕರ್ನಾಟಕದ ಸಂದರ್ಭದಲ್ಲಿಯೇ ಆಗಲಿ, ಅಖಿಲ ಭಾರತೀಯ ಸಂದರ್ಭದಲ್ಲಿಯೇ ಆಗಲಿ ಅಭಿವ್ಯಕ್ತಿಯ ವಿರುದ್ಧ ಪ್ರತಿಭಟನೆ ಹೆಚ್ಚಾಗಿ ಧಾರ್ಮಿಕ ನೆಲೆಯಿಂದಲೇ ಬಂದಿರುವುದನ್ನು ಗಮನಿಸಿದರೆ ಆಧುನಿಕ ಭಾರತದಲ್ಲಿ, ನಗರೀಕರಣ - ಔದ್ಯೋಗೀಕರಣ - ಉಪಭೋಕ್ತ ಸಂಸ್ಕೃತಿಯ ಪ್ರಭಾವ ಇವುಗಳಿಂದಾಗಿ ಮತೀಯ/ ಧಾರ್ಮಿಕ ವ್ಯವಸ್ಥೆಗಳು ಹೆಚ್ಚು ಹೆಚ್ಚು ಅಭದ್ರ ಮತ್ತು ಅಸ್ಥಿರವಾಗುತ್ತ ಬಂದಿವೆ. ಅಭದ್ರತೆ ಅಸ್ಥಿರತೆ ಹೆಚ್ಚಿದಷ್ಟೂ ಈ ವ್ಯವಸ್ಥೆಗಳು ಹೆಚ್ಚು ಹೆಚ್ಚು ಸೂಕ್ಷ್ಮವಾಗುತ್ತಾ ಕ್ಷುಲ್ಲಕ ವಿಷಯಗಳನ್ನೂ ಅವು ತಮ್ಮ 'ಅಳಿವು - ಉಳಿವಿನ' ಪ್ರಶ್ನೆಯಂತೆ ಭಾವಿಸಿ ಪ್ರತಿಭಟಿಸುತ್ತವೆ.

ಪರಿಣಾಮತಃ, ಮುಕ್ತ ಮಾರುಕಟ್ಟೆಯ ಮತ್ತು ಬಹುರಾಷ್ಟ್ರೀಯ ವಾಣಿಜ್ಯಸಂಸ್ಥೆಗಳ ನೀತಿಯನ್ನು ಭಾರತ ಒಪ್ಪಿಕೊಂಡಿರುವ ಇಂದಿನ ಸಂದರ್ಭದಲ್ಲಿ ಅಭಿವ್ಯಕ್ತಿಸ್ವಾತಂತ್ರ್ಯವನ್ನು ಕುರಿತು ಭವಿಷ್ಯದಲ್ಲಿ ಧಾರ್ಮಿಕ/ ಮತೀಯ ಅಸಹನೆ ಮತ್ತು ಪ್ರತಿಭಟನೆ ಹೆಚ್ಚಾಗುವ ಸಾಧ್ಯತೆಯಿದೆಯೇ ಹೊರತು ಕಮ್ಮಿಯಾಗುವ ಸಾಧ್ಯತೆ ಇಲ್ಲವೆಂದು ತೋರುತ್ತದೆ.

೫) ಸಾವಿರಾರು ವರ್ಷಗಳ ರಾಜತ್ವ ವ್ಯವಸ್ಥೆಯ ನಂತರ, ಕೇವಲ ಈ ಶತಮಾನದಲ್ಲಿ ಪ್ರಜಾತಂತ್ರ ವ್ಯವಸ್ಥೆ ಭಾರತಕ್ಕೆ ಕಾಲಿಟ್ಟಿದೆ; ಮತ್ತು ಈ ವ್ಯವಸ್ಥೆ ಭಾರತದಲ್ಲಿ ಬೇರೂರಲು ಸಹಜವಾಗಿಯೇ ಇನ್ನೂ ಕಾಲ ಬೇಕು. ಆದ್ದರಿಂದ, ಈ ಸಂಕ್ರಮಣ ಕಾಲದಲ್ಲಿ ವಿವಿಧ ಧಾರ್ಮಿಕ ಸಾಂಸ್ಕೃತಿಕ/ ಭಾಷಿಕ ಸಮುದಾಯಗಳು ಅಭದ್ರ ಸ್ಥಿತಿಯ ಅನುಭವದಿಂದಾಗಿ ತಮ್ಮ ಅನನ್ಯತೆಯನ್ನು ರಕ್ಷಿಸಿಕೊಳ್ಳಲು ಆಗಿಂದಾಗ್ಗೆ ಅಕಾರಣವಾಗಿ ಪ್ರತಿಭಟನೆಯ ಹಾದಿಯನ್ನು ಹಿಡಿಯುವುದು ಅಸಹಜ ಅಥವಾ ಅನಿರೀಕ್ಷಿತವೇನಲ್ಲ. ಹದಿನೈದು - ಹದಿನಾರನೆಯ ಶತಮಾನಗಳ ಯುರೋಪಿನ ಚರಿತ್ರೆ, ೧೮ನೆಯ ಶತಮಾನದ ಅಮೆರಿಕಾದ ಚರಿತ್ರೆ, ಮುಂತಾದವು ತೀವ್ರ ಪರಿವರ್ತನಶೀಲ ಸಮಾಜಗಳು ಸಂಕ್ರಮಣ ಕಾಲದಲ್ಲಿ ಬುದ್ಧಿಗಿಂತ ಭಾವನೆಗೆ ಪ್ರಾಧಾನ್ಯ ಕೊಟ್ಟು ಧಾರ್ಮಿಕ ಅಸಹನೆಗೆ ಹೇಗೆ ತುತ್ತಾಗುತ್ತವೆ ಎಂಬುದರ ನಿದರ್ಶನಗಳಾಗಿವೆ. ಭಾರತವೂ ಆ ದಾರಿಯಲ್ಲಿಯೇ ನಡೆಯುತ್ತಿದೆಯೆಂಬುದು ಸ್ಪಷ್ಟ. ಒಂದು ಮುಖ್ಯ ವ್ಯತ್ಯಾಸವೆಂದರೆ, ಆಧುನಿಕ ಭಾರತೀಯ ಸಂಸ್ಕೃತಿ ಬಹುಮುಖೀ ಸಂಸ್ಕೃತಿಯಾದುದರಿಂದ ಆಂತರಿಕ ಅಸಹನೆ ಮತ್ತು ಒತ್ತಡಗಳು ಹೆಚ್ಚು ತೀವ್ರವಾಗಿಯೂ, ಸಂಕೀರ್ಣವಾಗಿಯೂ ಕಂಡು ಬರುತ್ತವೆ.

(ಕೃಪೆ: ''ಪೊನ್ನಕಂಠಿ'' - ೬೬ನೆಯ ಕನ್ನಡ ಸಾಹಿತ್ಯಸಮ್ಮೇಳನದ ಸ್ಮರಣ ಸಂಚಿಕೆ)

□

ಕಾವ್ಯ

ಚನ್ನಣ್ಣ ವಾಲೀಕಾರರ ಎರಡು ಕವಿತೆಗಳು

೧. ಅಂಥ ರಾತ್ರಿ ಸಿಕ್ಕಾಗ ಮಾತ್ರ

ಹಗಲಿನಲಿ ನಡೆದದ್ದು ನೋಡಿ ನೋಡಿ ತಲೆ ಚಿಟ್ಟೆನ್ನಿಸುವಷ್ಟಾದುದ
ಕೆ ಜೀವ ಸತ್ತು ಹೋಗಬೇಕನ್ನುತಿದೆ ಇಲ್ಲಿ. ಇದರಿಂದುಳಿಯಲು
ಈಗ ಕಗ್ಗತ್ತಲ ಖಂಡದ ರಾತ್ರಿಯೊಂದೇ ಮದ್ದು. ಸಾವಿರ ಸಾವಿರ
ವರುಷಗಳ ರಾತ್ರಿ ಸುಖ ಶಾಂತಿ ಸಮೃದ್ಧಿ ನೀಡುವ ರಾತ್ರಿ,
ಮೌನ ಸಾಹಿತ್ಯ ಸಂಗೀತ ಕಲೆ ಜ್ಞಾನ ವಿಜ್ಞಾನ ತಂತ್ರ ಜ್ಞಾನ
ನೀಡುವ ರಾತ್ರಿ. ಸಿದ್ಧಾರ್ಥ ಎದ್ದು ಹೋಗಿ ಬುದ್ಧನಾಗಿ ಬಂದ
ರಾತ್ರಿ ಬಸವ ಮುಳುಗಿ ಕೂಡಲ ಸಂಗಮನಾದ ರಾತ್ರಿ
ದೀನದಲಿತರೇಳ್ಗೆಗಾಗಿ ಕಪ್ಪು ಸೂರ್ಯನನ್ನಾಗಿ ಮಾಡಿದ ಅಂಬೇಡಕರ್
ರಾತ್ರಿ. ಅಂಥ ರಾತ್ರಿ ಸಿಕ್ಕಾಗ ಮಾತ್ರ ಉಳಿಯುತ್ತೇನೆ ಇಲ್ಲಿ
ಎಷ್ಟೋ ಅನುಭವಗಳ ಫಲ ಬಂಗಾರ ಭೂಮಿ ಒಡಲಲ್ಲಿ

೨. ಯಾಕೆ ನನ್ನ ಕೂಗು ...

ಯಾಕೆ ನನ್ನ ಕೂಗು ನನಗೆ ಕೇಳಿಸುತ್ತಿಲ್ಲವಲ್ಲ
ನನ್ನೆದೆಯ ದನಿ ನನಗೆ ಮುಟ್ಟುತ್ತಿಲ್ಲವಲ್ಲ
ನನ್ನ ಅಕ್ಷರಗಳೇಕೆ ನನಗೆ ಕಾಣುತ್ತಿಲ್ಲವಲ್ಲ
ನನ್ನ ಕೈಕಾಲುಗಳು ನನಗೆ ತೋರುತ್ತಿಲ್ಲವಲ್ಲ
ಯಾಕೆ ನನ್ನತನ ರಕ್ತಸಿಕ್ತವಾಗಿ ಬಿದ್ದಿರುವುದಲ್ಲ
ಈ ಗಜಿಬಿಜಿಯ ಜೀವನದಲಿ ....?

ಚನ್ನಣ್ಣಾ ವಾಲೀಕಾರ ಅಧ್ಯಾಪಕರು, ಕನ್ನಡ ವಿಭಾಗ ಪೋಸ್ಟ್ ಗ್ರಾ. ಜುಯೇಟ್ ಸೆಂಟರ್ ರಾಯಚೂರು

ನಾನು ಮತ್ತು ಅನ್ನ

- ಎನ್ .ಕೆ .ಹನುಮಂತಯ್ಯ

ಹೊಳೆವ ಬಿಲ್ಡಿಂಗುಗಳ ಬಾಯಿಂದ
ಕೊಳೆತ ಅನ್ನದಗುಳು
ಭೂಗರ್ಭದಾಳಕ್ಕೆ ಜಾರುತ್ತಿರುವಾಗೆಲ್ಲ
ಹೂತ ನನ್ನ ಬಾಲ್ಯದ
ಪಳಿಯುಳಿಕೆಗಳು ನರಳಿ ನಡುಗುತ್ತವೆ .

೦

ಆಗ ಮಗುವಾಗಿದ್ದೆ :
ಅವ್ವನ ಕರಿಮೊಲೆಯ ಹಾಲಿನಲೂ
ಬೇವು ಚಿಗುರೊಡೆದಾಗ
ಬೆದರಿ ; ಅನ್ನಕ್ಕಾಗಿ ಹಾತೊರೆಯುತ್ತಿದ್ದೆ .
ಅವ್ವ ಸಿಲ್ವರಿನ ತಟ್ಟೆಗ್ಹಿಟ್ಟಿಕ್ಕುವುದೆ ತಡ
ಚಕ್ಕಳವಿರದ ಬೀದಿ ನಾಯಿಗಳೆಲ್ಲ
ನಾಲಿಗೆಯ ನೆಲಕ್ಹಾಸಿ
ನನ್ನ ಕೈಯನ್ನೇ ಕಾಯುತ್ತಿದ್ದವು .
ಖಾರಕ್ಕದ್ದಿದ ಮುದ್ದೆ
ಎಳೆಯ ಕರುಳಲ್ಲಿ ಉರಿಯುತ್ತಿದ್ದರೆ
ಕಣ್ಣ ರೆಪ್ಪೆಯಲಿ
ಬಿಸಿನೀರು
ತೊಟ್ಟಿಕ್ಕುತ್ತಿದ್ದವು !

೦

ತರೆದ ಸೊಪ್ಪಾದ ನನ್ನ
ಕಪ್ಪು ಮುಖದ ಗದ್ದೆಗಳಲಿ
ಭತ್ತ ಬೆಳೆಯುತ್ತಿರಲಿಲ್ಲ ,
ಕಣ್ಣ ಕುಡಿಕೆಯಲಿ
ಅಕ್ಕಿ ಬೇಯುತ್ತಿರಲಿಲ್ಲ !
ಇಂದಿಗೂ ... ಹೀಗೇ..
ಭಾರೀ ಪರುಸೆಯ ನಡುವೆ
ಅಪ್ಪನ ಜುಟ್ಟಿಡಿದು ...
ತೇರನೋಡಿದ ಹಾಗೆ ... □

ಎನ್.ಕೆ.ಹನುಮಂತಯ್ಯ ನಾಗರಘಟ್ಟ ತಿಪಟೂರು ತಾಲೂಕು ತುಮಕೂರುಜಿಲ್ಲೆ ೫೭೨೨೨೪

ಗರುಡ

- ಯಶಸ್ವಿನಿ ಹೆಗಡೆ

೧

ನಮ್ಮ ಮನೆಯಲ್ಲೊಂದು ಹಕ್ಕಿ
ಪಂಜರದೊಳಗೇನಿಲ್ಲ.
ಅದು ಗರುಡ!
ಮುಂಜಾನೆ ರವಿಕಿರಣ
ರೆಪ್ಪೆಯ ಬಳಿ
ಬಣ್ಣಗಳೊಡನೆ ನರ್ತಿಸುವ
ಮೊದಲೇ
ಸದ್ದಿಲ್ಲದೆ ಎದ್ದು ಓಡಾಡುವ
ಇದಕ್ಕೆ ಹೊತ್ತೇರಿದಂತೆ
ಬಂಡಾಯಗೀತೆ ಹಾಡುವ
ಅನಿವಾರ್ಯತೆ !
ರೆಕ್ಕೆ ಬೀಸಿ ಅಲ್ಲಿಂದಿಲ್ಲಿಗೆ
ಹಾರಾಡಿ
ಒಂದು ಪಂಜದಿಂದ
ಮತ್ತೊಂದು ಪಂಜವ
ಉಜ್ಜಿ, ಉಜ್ಜಿ
ನಿಮಿಷಕ್ಕೊಮ್ಮೆ
ಕಣ್ಣನ್ನು ರೆಕ್ಕೆಯಿಂದ
ಒರೆಸಿ, ಒರೆಸಿ
ಅಲ್ಲಿ ಕುಕ್ಕಿ, ಇಲ್ಲಿ ಕುಕ್ಕಿ
ರೆಕ್ಕೆ ಅಗಲ ಹರಡಿ
ಇಲ್ಲದ ಕನ್ನಡಕವ
ಕಣ್ಣ ಮುಂದಿರಿಸಿ
ದನಿಯೇರಿಸಿ...

೨

ಗರುಡಕ್ಕೆ ಇದೆ
ತನ್ನದೇ ಲಾಜಿಕ್ಕು
ಉಳಿದವರ ಲಾಜಿಕ್ಕಿಗೆ
ಇಲ್ಲವೆಂಬಂತೆ
ಯಾವದೇ ದಿಕ್ಕು!

ಯಶಸ್ವಿನಿ ಹೆಗಡೆ ಡಾ/ಒ ಗಜಾನನ ಹೆಗಡೆ ೧೬ ಶಿವಕುಮಾರನಗರ ಸಿರಿಗೆರೆ - ೫೭೭೫೪೧

ಒಮ್ಮೊಮ್ಮೆ ಬಕ್ಕ ತಲೆ
ಯುವನ
ಪಕ್ಕಗಳ ಕೂದಲ
ನೆತ್ತಿಯ ಮೇಲೂ ತಂದು
ಅಂಟಿಸಿ
ಎಣ್ಣೆ ತಿಕ್ಕಿ
ಬೆಳೆಸುವ ಉಮೇದಿ ಇದಕ್ಕೆ!
ಪಕ್ಕದಲ್ಲಿ ಸಮೃದ್ಧ
ಕೇಶರಾಶಿ ನೆತ್ತಿಯ
ಮೇಲೆ ನಿಲ್ಲಲಾರದೇಕೆ ?!
೩
ನಮ್ಮಜ್ಜಿ ಕಥೆ ಹೇಳಿದ್ದರು
ಗರುಡ ವಿಷ್ಣು ವಾಹನ
ವಿಷ್ಣುವಿನ ಕೆಲಸವೋ
ಸ್ಥಿತಿ ಸಂಸ್ಥಾಪನ. □

ರೊಟ್ಟಿ

-ಎಂ.ಎಚ್.ಸಿದ್ದೇಶ್ವರಯ್ಯ

ಸಾಕವ್ವನ ಮಗ ಕೇಳುವನು
ಅವ್ವಾ ನನಗೊಂದು ರೊಟ್ಟಿ
ರೊಟ್ಟಿಗೆ ಬೆಣ್ಣೆಯೆ ಬೇಡೆನಗೆ
ಹಚ್ಚಿಡು ಖಾರಾ ಚಟ್ನಿ

ಅನ್ನವ ತಿನ್ನಲು ಇಂಗದು ಹಸಿವು
ಬೇಕೇ ಬೇಕು ರೊಟ್ಟಿ
ರೊಟ್ಟಿಗೆ ಪಲ್ಯವೆ ಬೇಡೆನಗೆ
ಹಚ್ಚಿಡು ಖಾರಾ ಚಟ್ನಿ

ಕೆನೆ ಕೆನೆ ಹಾಲನು ಕೇಳೆನು ನಾನು
ಕೆನೆ ಕೆನೆ ಮೊಸರನು ನಾನು ಬೇಡೆನು
ಅವ್ವಾ ಕೊಟ್ಟುಬಿಡವ್ವಾ ರೊಟ್ಟಿ
ಹಚ್ಚಿಡು ಖಾರಾ ಚಟ್ನಿ

ಎಚ್.ಎಂ.ಸಿದ್ದೇಶ್ವರಯ್ಯ ಶಿಕ್ಷಕರು ಗೊಪ್ಪೇನಹಳ್ಳಿ -೫೭೭೨೧೫ ಶಿವಮೊಗ್ಗ ಜಿಲ್ಲೆ

ಪಾಯಸದೂಟವ ಕೇಳೇ ಅರಿಯೆನು
ಹೈನದ ಭಾಷೆಯ ನಾನು ತಿಳಿಯೆನು
ಅವ್ವಾ ನನಗೊಂದು ರೊಟ್ಟೀ
ಹಚ್ಚಿಡು ಖಾರಾ ಚಟ್ನೀ

ಮಿಠಾಯಿ ತಿನಿಸು ನನಗೆ ಬೇಡವು
ಲಾಡು ಬೂಂದಿಯು ನನಗೆ ಸೇರದು
ಬೇಕೇ ಬೇಕು ರೊಟ್ಟೀ
ಚಟ್ನಿಯ ಹಚ್ಚಿದ ರೊಟ್ಟಿ □

ಈ ಹುಲ್ಲು ನಿಜಕ್ಕೂ ನನ್ನಂತೆಯೇ...

ಉರ್ದು ಮೂಲ : ಕಿಶ್ವರ್ ನಹೀದ್
ಕನ್ನಡಕ್ಕೆ : ಡಾ. ಎಸ್ .ವಿ.ಪ್ರಭಾವತಿ

ಈ ಹುಲ್ಲು ನನ್ನ.ತೆಯೇ ...
ಕಾಲ ಕೆಳಗೆ ಸುರುಳಿ ಬಿಚ್ಚುತ್ತ ಬೆಳೆಯಬೇಕಿದೆ
ಆದರೆ ತೇವ ಮಾತ್ರ ಬೇರೆನೋ ಹೇಳುತ್ತದೆ :
ಅದು ಸುಡುವ ಅಪಮಾನದ ಉರಿಯೆ ?
ಕುದಿ ಕುದಿವ ಭಾವನೆಗಳ ಬೆಂಕಿಯೆ ?

ಈ ಹುಲ್ಲು ನನ್ನಂತೆಯೇ...
ಅದು ತಲೆಯೆತ್ತುವುದಕ್ಕಿಲ್ಲ
ಆಗಲೇ ಮಾಲಿಯ ಕೆಟ್ಟ ಕಣ್ಣಿಗೆ ಬಿದ್ದು
ತಲೆ ಕತ್ತರಿಸಿಕೊಂಡು ನೆಲಸಮವಾಗುತ್ತದೆ :
ಮಕಮಲ್ಲಿನಂತೆ !
ಹೀಗೆ ಹೆಣ್ಣನ್ನೂ ನೆಲಸಮ ಮಾಡಲು
ನೀವು ಅದೆಷ್ಟು ಹೆಣಗುತ್ತೀರಿ !

ಆದರೂ ನೆನಪಿರಲಿ
ಈ ನೆಲದೊಳಗೆ - ಹೆಣ್ಣೊಳಗೆ ಪುಟಿವ
ಬದುಕಿನ ಬಯಕೆ ಸುಲಭದಲ್ಲಿ ಇಂಗುವುದಿಲ್ಲ.
ನನ್ನ ಮಾತು ಕೇಳಿ :
ಕಾಲು ಹಾದಿ ಮಾಡುವುದೇ ಸರಿ

ಡಾ. ಎಸ್ .ವಿ.ಪ್ರಭಾವತಿ ಬಿಎಸ್‌ವಿಪಿ ಮಹಿಳಾ ಕಾಲೇಜು ವಿಜಯನಗರ ಬೆಂಗಳೂರು -೪೦

ತಮ್ಮ ಬಲವೆಲ್ಲ ಕುಂದಿದ್ದನ್ನು ತಡೆಯಲಾಗದವರೆಲ್ಲ
ನೆಲದೊಂದಿಗೆ ಬೆರೆತು ಬಿಡುತ್ತಾರೆ
ಬಲಶಾಲಿಗಳಿಗೆ ಹಾದಿ ಮಾಡಿಕೊಡುತ್ತಾರೆ

ಆದರೆ ಅವರು ಕೇವಲ ಒಣ ಹುಲ್ಲಿನ ಹಾಗೆ
ಈ ಹಸಿರು ಹುಲ್ಲಿನ ಪರಿಯೇ ಬೇರೆ
ಅದು ಥೇಟ್ ನಿನ್ನಂತೆ .... □

ವರಾನ್ವೇಷಣೆ

-ಪ್ರೀತಿ ಮಡಿಕೇರಿ

ಮರೀನಾ ಬೀಚು
ಸಂಜೆಗೆಂಪು ... ಜನವೋ ಜನ
ರಾಪಿಚ್ಚಮ್ಮನ ಹಸಿವು ಕೂಗು
ಶಂಖ ಕವಡೆ ಕಲರು ಕಲರಾಗಿ
ಮರಳು ಕುಪ್ಪೆ
ಅವನ ಇವನ ಕಣ್ಣಾಸೆ ಕಾಣದಾಸೆ
ಹೆಬ್ಬಲೆಗಳ ನಡುವೆ
ನಾನು - ಪಮ್ಮಿ

ಒಬ್ಬರು ಒಬ್ಬರ ಸೊಂಟಾ ಹಿಡಿದು
ಇನ್ನೊಂದು ಕೈಲಿ ಕೆಲವೊಮ್ಮೆ
ಸೀರೆ ಕೆಲವೊಮ್ಮೆ
ಗಾಳಿ ನರ್ತನ
ದಢಾರನೆ ಬಂದಪ್ಪಳಿಸುವ
ಅಲೆ ಸೊಂಟ ಕತ್ತು ಮುಖ
ಅಂಗಾಲು ಮುಂಗಾಲು
ಸವರಿ ಬಡಿಯುವಾಗ
ಎದೆ ಝಲ್ಲೆನಿಸಿ
ಕಿರುಚಿದ್ದೂ ಕಿರುಚಿದ್ದೇ
ಸಂತೋಷಕ್ಕೋ ಭಯಕ್ಕೋ
ಗೊತ್ತಿಲ್ಲ
ಅದು ಹೇಗೋ ಅಂತೂ
ಕಿರುಚಾಟದ ನಂತರ

ಗೀತಾ ನಾವಲ್ (ಪ್ರೀತಿ ಮಡಿಕೇರಿ) ಅಧ್ಯಾಪಕಿ ಸರಕಾರೀ ಹಿರಿಯ ಕಾಲೇಜು ಕುಶಾಲನಗರ

ಅಲೆ ಬಡಿದಾಟದ
ಹಿಂದೆ
ಸೊಂಟ ಹಿಡಿದಾಟದ
ಹಿಂದೆ
ಶಂಖ ಕವಡೆ ಕಲರು
ರಾಪಿಚ್ಚಮ್ಮನ ಹಸಿವು ಜನರ ಕಣ್ಣಾಸೆ
ಹಿಂದೆ
ಭಯವಿಲ್ಲದ ಬರವಿಲ್ಲದ
ಅತಿ ಚಲುವ ಅತಿ ಒಲವ
ನಿನ್ನ
ಅರಸುವಿಕೆಯಿತ್ತು
ಎಂಬುದಂತೂ ನಿಜ ! □

ಪಾಶ್ಚಾತ್ಯ ಕಾವ್ಯ ಮೀಮಾಂಸೆಯಲ್ಲಿ ರಸದ ವಿವೇಚನೆಯ ಪ್ರಶ್ನೆಯೇ ಏಳುವುದಿಲ್ಲ. ಆದರೆ ರಸ ಎಂಬ ಮಾತಿಗೆ ಕಾವ್ಯಾಸ್ವಾದ ಎಂಬ ಅರ್ಥವನ್ನಿಟ್ಟುಕೊಳ್ಳುವುದಾದರೆ, ಅಲ್ಲಿಯೂ ಕನಿಷ್ಟ ಪಕ್ಷ ಪ್ರಾಚೀನ ಆಚಾರ್ಯರುಗಳ ಬಹುಮತದ ಅಭಿಪ್ರಾಯ 'ಕಾವ್ಯಾಸ್ವಾದ ಆನಂದ ರೂಪವಾದುದು' ಎಂಬ ಸಿದ್ಧಾಂತದ ಪರವಾಗಿಯೇ ಇರುವುದು ಕಂಡುಬರುತ್ತದೆ. ಮೊಟ್ಟಮೊದಲಿಗೆ ಪ್ಲೇಟೋನನ್ನೇ ತೆಗೆದುಕೊಳ್ಳಬಹುದು. ಪ್ಲೇಟೋ ಆನಂದದ ಎರಡು ಬಗೆಗಳನ್ನು ಗುರುತಿಸಿದ್ದಾನೆ: ಒಂದು, ವಿಶುದ್ಧ ಆನಂದ ; ಇದು ಸಮಾಹಿತಿಯ ಅನುಭವಾತ್ಮಕ ರೂಪವಾಗಿರುತ್ತದೆ (ಆತ್ಮ ಸಾಮಂಜಸ್ಯ = ಪುಣ್ಯ = ಸೌಂದರ್ಯ = ಆನಂದ). ಎರಡನೆಯದು ಭೌತಿಕ ಆನಂದ ; ಇದು ಇಂದ್ರಿಯ ಸುಖಕ್ಕೆ ಪರ್ಯಾಯವಾಗಿರುವಂಥದು . ಕಾವ್ಯದ ಮೂಲಕ ಆತ್ಮಸಾಮಂಜಸ್ಯದ (ಇದು ವಾಸ್ತವವಾಗಿ ಭಟ್ಟನಾಯಕ ಹೇಳುವ ಆತ್ಮವಿಶ್ರಾಂತಿಗೆ ಬಹು ದೂರವಾಗಿರುವಂಥದೇನೂ ಅಲ್ಲ!) ಲಾಭ ಅಥವಾ ಪ್ರಯೋಜನ ಉಂಟಾಗದೆ ಇಂದ್ರಿಯ ಸುಖವೇ ಲಭಿಸುತ್ತದೆ ಎಂಬುದು ಪ್ಲೇಟೋ ಕಾವ್ಯದ ಮೇಲೆ ಹೊರಿಸಿರುವ ಬಹು ದೊಡ್ಡ ಆರೋಪ:'ಅದು ಕೇವಲ ಪ್ರೀತಿಕರವಾದುದಲ್ಲ ಶ್ರೇಯಸ್ಕರವಾದುದೂ ಹೌದು ಎಂಬುದನ್ನು ಯಾರಾದರೂ ತೋರಿಸಿದರೆ ಅದರಿಂದ ನಮಗೆ ಲಾಭವೇ ಆಗುತ್ತದೆ. ಆದರೆ, ಕಾವ್ಯದ ದುರಂತ ಮತ್ತು ಸುಖಾಂತ ರೂಪಗಳೆರಡರಲ್ಲಿಯೂ, ಅದರ ಆಸ್ವಾದನೆ ಆಹ್ಲಾದಮಯವೇ ಆಗಿರುತ್ತದೆಂಬ ವಿಷಯದಲ್ಲಿ ಆತನಿಗೆ ಯಾವ ಅನುಮಾನವೂ ಇಲ್ಲ.

- ಡಾ. ನಗೇಂದ್ರ

(ರಸಸಿದ್ಧಾಂತ : ಪುಟ ೧೪೬ -೧೪೭)

ಅಭಿವೃದ್ಧಿಯ ಪರಿಕಲ್ಪನೆ ಮತ್ತು ಪರಿಸರ

- ಡಾ . ಯು . ಚಂದ್ರ ಪೂಜಾರಿ

ಈ ಲೇಖನದ ಉದ್ದೇಶ ಅಭಿವೃದ್ಧಿ ಮತ್ತು ಪರಿಸರ ಸಮಸ್ಯೆಯ ನಡುವಿನ ಸಂಬಂಧದ ಬಗೆಗಿನ ಒಂದು ವಿಶ್ಲೇಷಣೆಯನ್ನು ಮಾಡುವುದಾಗಿದೆ . ಲೇಖನದಲ್ಲಿ ಮುಖ್ಯವಾದ ಈ ರೀತಿಯಿದೆ - ನಮ್ಮ ಅಭಿವೃದ್ಧಿ ಕಾರ್ಯಕ್ರಮಗಳು ಪಶ್ಚಿಮದ ಶ್ರೀಮಂತ ರಾಷ್ಟ್ರಗಳ ಅನುಭವ ಆಧಾರಿತವಾಗಿದ್ದು ಅವರದ್ದೇ ಸ್ಥಿತಿ ತಲುಪಲು ಮಾಡುವ ಪ್ರಯತ್ನಗಳಾಗಿವೆ. ಇಂದು ಇತರರಿಗೆ ಮಾದರಿಯಾಗಿರುವ ಪಶ್ಚಿಮದ ಅಭಿವೃದ್ಧಿಯ ಹಿಂದೆ ಪರಿಸರ ನಾಶದ ದೊಡ್ಡ ಕತೆಯೇ ಇದೆ ಎನ್ನುವ ಅಂಶ ವಿಶೇಷ ಪ್ರಚಾರ ಪಡೆದಿಲ್ಲ . ಜತೆಗೆ ಅವರ ಸ್ಥಿತಿಯನ್ನೇ ತಲುಪಲು ಅವರು ತುಳಿದ ಮಾರ್ಗವನ್ನೇ ತುಳಿಯುವ ನಾವು ಅವರದ್ದೇ ರೀತಿಯ ಪರಿಸರ ನಾಶದ ಬೆಲೆಯನ್ನು ನಮ್ಮ ಅಭಿವೃದ್ಧಿಗೆ ತೆರಬೇಕಾಗಿದೆ ಎನ್ನುವ ವಿಚಾರ ಅಭಿವೃದ್ಧಿ ವ್ಯಾಖ್ಯಾನದೊಳಗೆ ಸೇರಿಕೊಂಡಿಲ್ಲ . ಹಾಗಾಗಿ ಪರಿಸರ ಸಮಸ್ಯೆ ಸಂಬಂಧಿತ ಚರ್ಚೆಗಳಲ್ಲಿ ಅಭಿವೃದ್ಧಿ ಪರಿಕಲ್ಪನೆಯಲ್ಲಿ ಒಳಗೊಂಡಿರುವ ಪರಿಸರ ನಾಶದ ಅಂಶ ಕೂಡಾ ಚರ್ಚೆಯ ವಸ್ತುವಾಗಿಲ್ಲ . ಈ ಹಿನ್ನೆಲೆಯಲ್ಲಿ ಪರಿಸರ ಸಮಸ್ಯೆ ಮತ್ತು ಅಭಿವೃದ್ಧಿ ನಡುವಿನ ಸಂಬಂಧದ ಬಗೆಗಿನ ವಿಶ್ಲೇಷಣೆಯ ಪ್ರಯತ್ನ ಮಾಡಬೇಕಾಗಿದೆ . ಈ ಲೇಖನದ ಪ್ರಥಮ ಭಾಗದಲ್ಲಿ ಪ್ರಚಲಿತದಲ್ಲಿರುವ ಅಭಿವೃದ್ಧಿಯ ಪರಿಕಲ್ಪನೆ ಮತ್ತು ಪಶ್ಚಿಮದ ಮಾದರಿಯ ಅಭಿವೃದ್ಧಿಯ ಹಿಂದಿರುವ ಪರಿಸರ ನಾಶದ ವಿವರಣೆಗಳಿವೆ . ಎರಡನೇ ಭಾಗದಲ್ಲಿ ಆಧುನೀಕರಣದ ವಿಫಲತೆ ಮತ್ತು ಅದಕ್ಕೆ ಪ್ರತಿಕ್ರಿಯೆಯಾಗಿ ಬಂದ ಪರಿಸರವಾದ ಮತ್ತು ಅದರ ಲೋಪ ದೋಷಗಳ ವಿವರಣೆಯನ್ನು ಒಳಗೊಂಡಿದೆ .

ಭಾಗ : ೧

ಅಭಿವೃದ್ಧಿಯ ವ್ಯಾಖ್ಯಾನದಲ್ಲಿ ಆಧುನಿಕ ವ್ಯವಸ್ಥೆಯ ಉತ್ಪಾದನಾ ಸಾಮರ್ಥ್ಯದ ಬಗ್ಗೆ ಧಾರಾಳ ವಿವರಣೆಯಿದೆ . ಆದರೆ ಈ ಉತ್ಪಾದನಾ ಸಾಮರ್ಥ್ಯವನ್ನು ತಮ್ಮದಾಗಿಸಿಕೊಳ್ಳುವಲ್ಲಿ ಪಶ್ಚಿಮದ ರಾಷ್ಟ್ರಗಳು ಮಾಡಿದ ಪರಿಸರ ನಾಶದ ಬಗ್ಗೆ ಹೆಚ್ಚಿನ ಮಾಹಿತಿ ನಮಗೆ ದೊರಕಿಲ್ಲ. ಅದು ಹೇಗಾಯಿತೆಂಬುದನ್ನು ಇಲ್ಲಿಸ್ವಲ್ಪ ವಿಸ್ತಾರವಾಗಿಯೇ ವಿವರಿಸುತ್ತೇನೆ . ಕೈಗಾರಿಕಾಕ್ರಾಂತಿ ಪಶ್ಚಿಮ ಯುರೋಪಿನ ಸಮಾಜದಲ್ಲಿ ಮೂಲಭೂತ ಪರಿವರ್ತನೆಗೆ ಕಾರಣ ವಾಯಿತು.

ಡಾ. ಎಂ. ಚಂದ. ಪೂಜಾರಿ ಸರ್ಕಾರಿ ಪ. ಪೂ. ಕಾಲೇಜು ಕೂರ್ನಾಡು ಬಂಟ್ವಾಳ ತಾ। ೫೭೪೧೫೪

ಹಲವಾರು ತಾಂತ್ರಿಕ ಆವಿಷ್ಕಾರಗಳು ಆರಂಭದಲ್ಲಿ ಉತ್ಪಾದನಾಕ್ರಮದಲ್ಲಿ ನಂತರ ಉತ್ಪಾದನಾ ಸಂಬಂಧಗಳಲ್ಲಿ ಬದಲಾವಣೆಗೆ ಕಾರಣವಾದವು. ಈ ಬೆಳವಣಿಗೆಯಿಂದ ಪ್ರಭಾವಿತಗೊಂಡ ಸಮಾಜಶಾಸ್ತ್ರಜ್ಞರು ಇದೇ ಉತ್ಪಾದನಾಕ್ರಮವನ್ನು ಹಿಂದುಳಿದ ವ್ಯವಸ್ಥೆಯಲ್ಲಿ ಅಳವಡಿಸುವುದರಿಂದ ಆ ವ್ಯವಸ್ಥೆಯ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆ ಸಾಧ್ಯ ಎನ್ನುವ ತೀರ್ಮಾನಕ್ಕೆ ಬರುತ್ತಾರೆ. ಬಂಡವಾಳಶಾಹಿ ಉತ್ಪಾದನಾ ಕ್ರಮವನ್ನು ಅದರ ಹಿಂದಿನ ಊಳಿಗಮಾನ್ಯ ಉತ್ಪಾದನಾ ಕ್ರಮದೊಂದಿಗೆ ಹೋಲಿಸಿ ಅದನ್ನು ಮುಂದುವರಿದ ಅಥವಾ ಆಧುನಿಕ ಎಂದು ವರ್ಗೀಕರಿಸಲಾಯಿತು. ಬಂಡವಾಳಪೂರ್ವ ವ್ಯವಸ್ಥೆಗಳನ್ನು ಹಿಂದುಳಿದವು ಎಂದು ವರ್ಗೀಕರಿಸಿ, ಆ ವ್ಯವಸ್ಥೆಯಿಂದ ಆದಷ್ಟು ಬೇಗ ಕಳಚಿಕೊಂಡು ಬಂಡವಾಳ ಉತ್ಪಾದನಾ ಕ್ರಮವನ್ನು ಹಮ್ಮಿಕೊಳ್ಳುವುದೇ ಅಭಿವೃದ್ಧಿ ಎಂದು ವ್ಯಾಖ್ಯಾನಿಸಲಾಗಿದೆ. ಈ ಸರಳೀಕೃತ ವ್ಯಾಖ್ಯಾನ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಬೇರೆಯದೇ ರೂಪ ಪಡೆದು ಅವರ ಯೋಜನೆಗಳ ಒಟ್ಟು ಉದ್ದೇಶ ಶ್ರೀಮಂತ ರಾಷ್ಟ್ರಗಳು ಸಾಧಿಸಿದ ಸರಕುಗಳ ಅನುಭೋಗದ ಮಟ್ಟವನ್ನು ತಲುಪುವುದೇ ಅಭಿವೃದ್ಧಿಯೆನ್ನುವಂತಾಗಿದೆ. ಈ ಬಗೆಯ ಸರಳರೇಖಾತ್ಮಕ ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಪರಿಸರ ನಾಶದ ಅರಿವು ಇರುವುದಿಲ್ಲ. ಪಶ್ಚಿಮದ ಮಾದರಿಯ ಅಭಿವೃದ್ಧಿ ಪರಿಸರ ನಾಶವನ್ನು ಒಳಗೊಂಡ ಬಗ್ಗೆ ತಿಳಿಯಬೇಕಾದರೆ ಅವರ ಅಭಿವೃದ್ಧಿಯ ಚರಿತ್ರೆಯ ಕಿರುಪರಿಚಯದ ಅಗತ್ಯವಿದೆ.

ಪಶ್ಚಿಮದ ಉತ್ಪಾದನಾ ಸಾಮರ್ಥ್ಯದ ಹೆಚ್ಚಳದ ಹಿಂದೆ 'ಪ್ರಕೃತಿ ಮತ್ತು ಮಾನವ' ಸಂಬಂಧಗಳ ವೈಚಾರಿಕ ನೆಲೆಯಲ್ಲಿ ಆದ ಪರಿವರ್ತನೆಯ ಪಾತ್ರವಿದೆ. ಈ ಬದಲಾದ ವೈಚಾರಿಕತೆಯ ಪ್ರಕಾರ ಆಧುನಿಕ ಮಾನವ ತನ್ನನ್ನು ಪ್ರಕೃತಿಯ ಒಂದು ಅಂಗವೆಂದು ತಿಳಿಯದೆ, ಪ್ರಕೃತಿಯಿಂದ ಹೊರಗಿರುವ ಶಕ್ತಿ ತಾನೆಂದು ತಿಳಿಯಲು ಪ್ರಾರಂಭಿಸಿದ. 'ಪ್ರಕೃತಿಯ ಮೇಲೆ ಪ್ರಭುತ್ವ', 'ಪ್ರಕೃತಿಯ ಶಕ್ತಿಗಳನ್ನು ಮಣಿಸುವುದು' ಮುಂತಾದ ನುಡಿಗಟ್ಟುಗಳು ಪ್ರಧಾನ ವಿಚಾರಧಾರೆಯ ಮೂರ್ತರೂಪಗಳಾದವು. ಅವು ಬೇಕನ್ನನ 'ನ್ಯೂ ಅಟ್ಲಾಂಟಿಸ್' ಕೃತಿಯಷ್ಟು ಹಳೆಯವಾದರೂ ಈಗಲೂ ಚಾಲ್ತಿಯಲ್ಲಿವೆ. ಹತ್ತೊಂಬತ್ತನೆಯ ಶತಮಾನದ ದ್ವಿತೀಯಾರ್ಧದಲ್ಲಿಯಂತೂ ಬೂರ್ಜ್ವಾ ಬುದ್ಧಿ ಜೀವಿಗಳ ಕೃತಿಗಳಲ್ಲಿ ಮಾತ್ರವಲ್ಲ, ಸಮಾಜವಾದೀ ಮತ್ತು ಮಾರ್ಕ್ಸ್‌ವಾದೀ ಬರಹಗಳಲ್ಲಿ ಕೂಡಾ ಈ 'ಪ್ರಕೃತಿಯ ಮೇಲೆ ಪ್ರಭುತ್ವ', 'ನಿಸರ್ಗವನ್ನು ಮಣಿಸುವುದು' ಮುಂತಾದ ನುಡಿಗಟ್ಟುಗಳು ಧಾರಾಳವಾಗಿ ಬಳಕೆಯಾಗಿರುವುದು ಕಾಣುತ್ತದೆ.

ಈ ತಾತ್ವಿಕ ಪರಿವರ್ತನೆ ಸ್ವೀಕೃತಿಗೊಳ್ಳಲು ಬಲವಾದ ಕಾರಣವಿತ್ತು. ಆಧುನಿಕ ಸಮಾಜದ ಪ್ರಮುಖ ಸಮಸ್ಯೆ ಬಡತನ. ಉತ್ಪಾದನೆ ಮತ್ತು ಹೆಚ್ಚು ಹೆಚ್ಚು ಉತ್ಪಾದನೆ ಮಾತ್ರ ಈ ಸಮಸ್ಯೆಗೆ ಪರಿಹಾರ ಎಂದು ಎಲ್ಲ ತಾತ್ವಿಕ ಭಿನ್ನತೆಗಳನ್ನು ಬದಿಗಿಟ್ಟು ಪ್ರತಿಯೊಬ್ಬರೂ ಪ್ರತಿಪಾದಿಸತೊಡಗಿದರು. ನಮ್ಮನ್ನು ಆವರಿಸಿರುವ ನೈಸರ್ಗಿಕ ಪರಿಸರದಲ್ಲಿ ವಿಪರೀತ ಏರುಪೇರು ಮತ್ತು ಹಾನಿಯು ಈ ಉತ್ಪಾದನೆಯ ಹೆಚ್ಚಳಕ್ಕೆ ಸಮಾಜ ತೆರಬೇಕಾದ ಬೆಲೆಯಾದರೂ ಸಮಾಜ ಎದುರಿಸುತ್ತಿರುವ ಬಡತನದ ಅಗಾಧ ಸಮಸ್ಯೆಯ ಎದುರು ಅದು ಗೌಣ ಎಂದು ತಿಳಿಯಲಾಯಿತು. ಬಡತನ ಹೋಗಲಾಡಿಸಲು, ಸಂಪತ್ತನ್ನು ಹೆಚ್ಚಿಸಲು

ಮತ್ತು ಪ್ರಕೃತಿಯನ್ನು ಮನುಷ್ಯನ ಅನುಕೂಲಕ್ಕೆ ತಕ್ಕಂತೆ ಪಳಗಿಸಲು ಆಧುನಿಕ ವೈಜ್ಞಾನಿಕ ಉತ್ಪಾದನೆಯು ಏಕಮಾತ್ರ ಮಾರ್ಗವೆಂಬ ಧೋರಣೆ ಹೆಚ್ಚು ಹೆಚ್ಚು ಪ್ರಚಲಿತವಾಯಿತು.

ಈ ರೀತಿಯ ಬೆಳವಣಿಗೆಯಿಂದಾಗಿ ಪ್ರಕೃತಿಯಲ್ಲಿ ಮನುಷ್ಯನ ಹಸ್ತಕ್ಷೇಪದ ಪರಿಣಾಮಗಳು ಕೈಗಾರಿಕಾ ಕ್ರಾಂತಿಯಿಂದ ಕಣ್ಣಿಗೆ ಕುಕ್ಕುವ ಹಾಗೆ ಎದ್ದು ಕಂಡವು. ಭಾರೀ ಗಣಿ ಕೈಗಾರಿಕೆಗಳು, ಕಬ್ಬಿಣ, ಉಕ್ಕು, ರಾಸಾಯನಿಕ ಉದ್ದಿಮೆಗಳ ಬೆಳವಣಿಗೆ, ಫ್ಯಾಕ್ಟರಿಗಳಲ್ಲಿ ಉತ್ಪಾದನೆಯ ಕೇಂದ್ರೀಕರಣ, ಯಾವುದೇ ಯೋಜನೆಯಿಲ್ಲದೆ ಯದ್ವಾತದ್ವಾ ತಲೆಯೆತ್ತಿದ ನಗರಗಳಿಂದ ಹುಟ್ಟಿಕೊಂಡ ಹೊಸ ಸಮಸ್ಯೆಗಳಾದ ಮನುಷ್ಯ ವಸತಿಯ ತೀವ್ರ ಕೊರತೆ ಮತ್ತು ಪರಿಸರ ಮಾಲಿನ್ಯ - ಈ ಎಲ್ಲದರ ಪರಿಣಾಮಗಳು ಅಸಾಧಾರಣ ಎನ್ನುವಷ್ಟು ಘೋರವಾಗಿದ್ದವು ಎಂಬುದಂತೂ ನಿಜ. ಜಗತ್ತಿನಲ್ಲಿ ಎಲ್ಲೆಲ್ಲಿ ಖನಿಜಗಳು ದೊರೆಯುತ್ತವೆಯೋ ಅಲ್ಲೆಲ್ಲ ಭೂಪ್ರದೇಶದ ಸ್ವಭಾವವೇ ಬದಲಾಗಿ ಬಿಟ್ಟಿದೆ. ಇದರಿಂದ ನಿಸರ್ಗದ ಸಹಜ ನಿರಾಳ ಸ್ಥಿತಿ ಮನುಷ್ಯನ ಎಗ್ಗಿಲ್ಲದ ಹಸ್ತಕ್ಷೇಪದಿಂದಾಗಿ ಕುಲಗೆಡುತ್ತಿದೆ ಎಂಬ ಕೂಗೆದ್ದಿತು.

ಕೈಗಾರಿಕಾ ಕ್ರಾಂತಿಯ ದುಷ್ಪರಿಣಾಮಗಳನ್ನು ವಿರೋಧಿಸುವ ಧೋರಣೆ ಇಂಗ್ಲಂಡಿನಲ್ಲಿ ಆ ಕ್ರಾಂತಿಯ ಮೊದಲ ದಿನಗಳಲ್ಲೇ ಕಾಣಿಸಿಕೊಂಡವು. ಅದಕ್ಕೆ ಕಾರಣ ಸ್ಪಷ್ಟವಾಗಿದೆ. ಅತ್ಯಂತ ತೀವ್ರಗತಿಯ ಔದ್ಯಮೀಕರಣ ಆ ಕಾಲದಲ್ಲಿ ನಡೆದದ್ದು ಇಂಗ್ಲಂಡಿನಲ್ಲಿಯೇ. ರೇಮಂಡ್ಸ್ ತನ್ನ 'ದ ರೈಜ್ ಆಫ್ ಮಾಡರ್ನ್ ಇಂಡಸ್ಟ್ರಿ' ಎಂಬ ಕೃತಿಯಲ್ಲಿ, ಮತ್ತು ಬರ್ಟ್ರಾಂಡ್ ರಸೆಲ್ ತನ್ನ 'ಇಂಪ್ಯಾಕ್ಟ್ ಆಫ್ ಸೈನ್ಸ್ ಆನ್ ಸೊಸೈಟಿ' ಬರಹಗಳಲ್ಲಿ ಔದ್ಯಮೀಕರಣದ ದುಷ್ಪರಿಣಾಮಗಳನ್ನು ಎತ್ತಿ ತೋರಿಸಿದ್ದಾರೆ.

ಅಮೇರಿಕದಲ್ಲಿ ಔದ್ಯಮೀಕರಣ ಬ್ರಿಟನ್‌ನ ನಂತರ ಆರಂಭವಾಯಿತು. ಅಲ್ಲಿಯೂ ಪ್ರಾರಂಭದಲ್ಲಿ ಇದೇ ರೀತಿಯ ಪ್ರತಿಕ್ರಿಯೆ ಕಂಡುಬಂದಿದೆ. ೧೭೭೬ ರಷ್ಟು ಮುಂಚಿತವಾಗಿ ಆಡಮ್ ಸ್ಮಿಥ್‌ನು ಔದ್ಯಮೀಕರಣದ ಆರ್ಥಿಕ ಉಪಯುಕ್ತತೆಯನ್ನು ಹೊಗಳಿದ್ದಾನೆ. ಆದರೆ ಔದ್ಯಮೀಕರಣ ಬಯಸುವ ಸೀಮಿತ ಕ್ಷೇತ್ರದಲ್ಲಿನ ಪರಿಣತಿ ಮತ್ತು ಶ್ರಮದ ವರ್ಗೀಕರಣ (ಡಿವಿಜನ್ ಆಫ್ ಲೇಬರ್) ಗಳು ಮೂರ್ಖರನ್ನೂ ಹುಟ್ಟುಹಾಕುವ ವ್ಯವಸ್ಥೆಯಾಗಬಹುದೆಂದು ಎಚ್ಚರಿಸಿದ್ದಾನೆ. ಪರಿಸರದ ಮೇಲೆ ಔದ್ಯಮೀಕರಣದ ಪ್ರತ್ಯಕ್ಷ ಹಸ್ತಕ್ಷೇಪವನ್ನು ಆಡಮ್‌ಸ್ಮಿಥ್‌ನು ಗುರುತಿಸಲಿಲ್ಲ. ಆದರೆ ಅದು ಯಾವ ರೀತಿಯಲ್ಲಿ ಮತ್ತು ಯಾವ ಉದ್ದೇಶಕ್ಕಾಗಿ ಬಳಸಲಾಗುವುದೆಂಬುದರ ಮೇಲೆ ಅದರ ಪರಿಣಾಮ ಪರಿಸರದ ಮೇಲೆ ಆಗುತ್ತದೆ ಎಂಬುದನ್ನು ಆತ ಪರೋಕ್ಷವಾಗಿ ತಿಳಿಸಿದಂತಾಗಿದೆ.

ಭಾಗ: ೨

ಪಶ್ಚಿಮದ ಅಭಿವೃದ್ಧಿಯಲ್ಲಿ ಅನಿವಾರ್ಯವಾಗಿದ್ದ ಪರಿಸರ ನಾಶದ ಕಿರು ಪರಿಚಯವನ್ನು ಅದರ ಅಭಿವೃದ್ಧಿಯ ಚರಿತ್ರೆಯಿಂದ ಕಂಡುಕೊಂಡಿದ್ದೇವೆ. ಆದರೆ ಅಭಿವೃದ್ಧಿಯ ವ್ಯಾಖ್ಯಾನದೊಳಗೆ ಪರಿಸರ ನಾಶದ ಈ ಚಿತ್ರಣ ಸ್ಫುಟವಾಗಿ ಮೂಡಿ ಬರಲಿಲ್ಲ. ಆದುದರಿಂದ ತೃತೀಯ ಜಗತ್ತಿನ ರಾಷ್ಟ್ರಗಳಿಗೆ ಪಶ್ಚಿಮದ ಮಾದರಿಯ ಅಭಿವೃದ್ಧಿಯೆಂದರೆ ಅವರು ಸಾಧಿಸಿದ ಆರ್ಥಿಕ ಪ್ರಗತಿಯೇ ಆಗಿದೆ. ಈ ಬಗೆಯ ಅಭಿವೃದ್ಧಿಯ ಪರಿಕಲ್ಪನೆಯನ್ನು

ಸ್ವಾತಂತ್ರ್ಯಾನಂತರ ನಾವು ನಮ್ಮ ರಾಜಕೀಯ, ಸಾಮಾಜಿಕ, ಹಾಗೂ ಆರ್ಥಿಕ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ಕಳೆದ ಹಲವು ದಶಕಗಳಿಂದ ನಿರ್ವಹಿಸಿಕೊಂಡು ಬಂದ ನಮ್ಮ ಔದ್ಯಮೀಕರಣ ಹಾಗೂ ಆಧುನೀಕರಣಗಳ ಹಿಂದೆ ಈ ಬಗೆಯ ಸರಳ ರೇಖಾತ್ಮಕ ಅಭಿವೃದ್ಧಿಯ ಕಲ್ಪನೆ ಇದೆ. ಅಭಿವೃದ್ಧಿಯ ಈ ಪರಿಕಲ್ಪನೆ ನಮ್ಮಲ್ಲಿ ಒಂದು ಸಂಕೀರ್ಣ ವ್ಯವಸ್ಥೆಯ ಹುಟ್ಟಿಗೆ ಕಾರಣವಾಗಿದೆ. ಈ ಸಂಕೀರ್ಣ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳುವುದು ಪರಿಸರ ಚಳುವಳಿಗಳ ಮೂಲಭೂತ ಕಾರಣಗಳನ್ನು ಗುರುತಿಸಲು ಅಗತ್ಯವಾಗಿದೆ. ಮೇಲ್ನೋಟಕ್ಕೆ ಪರಿಸರ ಚಳುವಳಿಗಳ ಉದ್ದೇಶ ಉದ್ದಿಮೆಗಳಿಂದಾಗುವ ಪರಿಸರ ನಾಶವನ್ನು ವಿರೋಧಿಸುವಂತೆ ಕಂಡರೂ, ಅದು ಅಷ್ಟೇ ಆಗಿಲ್ಲ. ಬದಲಾಗಿ ಈ ಚಳುವಳಿಗಳು ಆಧುನೀಕರಣದ ವಿಫಲತೆಗೆ ಪ್ರತಿಕ್ರಿಯೆಯಾಗಿ ಕಂಡುಬರುತ್ತಿವೆ. ಈ ಬೆಳವಣಿಗೆಯನ್ನು, ಒಂದು ಕಾಲದಲ್ಲಿ ಕೇವಲ ಪರಿಸರ ಪ್ರೇಮಿಗಳೆಂದು ಗುರುತಿಸಬಹುದಾದ ವ್ಯಕ್ತಿ/ಸಂಘ ಸಂಸ್ಥೆಗಳಿಗೆ ಸೀಮಿತವಾಗಿದ್ದ ಪರಿಸರ ಚಳುವಳಿ ಇಂದು ಸಾಮಾಜಿಕ ಚಳುವಳಿಯಾಗಿ ಪರಿವರ್ತನೆಯಾದುದರ ಹಿನ್ನೆಲೆಯಲ್ಲಿ ಗುರುತಿಸಬಹುದು. ಇದು ಯಾಕೆ ಹೀಗಾಯಿತು ಎಂದು ತಿಳಿಯಬೇಕಾದರೆ ನಮ್ಮ ಅಭಿವೃದ್ಧಿಯ ಉದ್ದೇಶ ಮತ್ತು ಅದು ನಮ್ಮಲ್ಲಿ ಪ್ರಕಟಗೊಂಡ ಬಗೆಯನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಅಭಿವೃದ್ಧಿಯೋಜನೆಗಳ ಮೂಲಕ ಕಾರ್ಯರೂಪಕ್ಕೆ ತರಬಯಸಿದ ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆಯನ್ನು ಅಭಿವೃದ್ಧಿಯ ವ್ಯಾಖ್ಯಾನದಿಂದ ಅರ್ಥಮಾಡಿಕೊಳ್ಳಬಹುದು. ಹಳೆಯದರ ಗೋರಿಯಮೇಲೆ ಹುಟ್ಟಿದ ಹೊಸ ಚಿಗುರಿನಂತೆ ಪಶ್ಚಿಮದಲ್ಲಿ ಊಳಿಗಮಾನ್ಯ ವ್ಯವಸ್ಥೆಯೊಡಲಲ್ಲಿ ಬಂಡವಾಳಶಾಹಿ ವ್ಯವಸ್ಥೆ ಹುಟ್ಟಿಕೊಂಡಿತು. ಆ ಹೊಸ ವ್ಯವಸ್ಥೆ ಹಳೆಯದರ ಕಟ್ಟುಪಾಡುಗಳನ್ನು, ಕಸಬುಗಳನ್ನು, ಕುಟುಂಬ ವ್ಯವಸ್ಥೆಯನ್ನು ನಿರ್ನಾಮ ಮಾಡಿ ಬದಲೀ ವ್ಯವಸ್ಥೆಯನ್ನು ಕೊಡುವಲ್ಲಿ ಯಶಸ್ವಿಯಾಗಿದೆ ಎಂದು ತಿಳಿಯಲಾಯಿತು. ಆದುದರಿಂದಲೇ ಬಂಡವಾಳಶಾಹಿ ಉತ್ಪಾದನಾ ತಂತ್ರಗಳನ್ನು ನಮ್ಮ ಸಾಮಾಜಿಕ ಪರಿಸರದಲ್ಲಿ ಅಳವಡಿಸುವುದರಿಂದ ಬಂಡವಾಳಪೂರ್ವ ವ್ಯವಸ್ಥೆಯ ಬೇರುಗಳು ಕಿತ್ತುಕೊಂಡು ಹೋಗುತ್ತವೆ ಎಂಬ ಗ್ರಹಿಕೆ ಅಭಿವೃದ್ಧಿಯ ವ್ಯಾಖ್ಯಾನದೊಳಗೆ ಸೇರಿಕೊಂಡಿದೆ. ಆದರೆ ಐದು ದಶಕಗಳ ಅಭಿವೃದ್ಧಿ ಪ್ರಕ್ರಿಯೆ ಈ ನಂಬಿಕೆಗೆ ಪೂರಕವಾದ ಫಲಿತಾಂಶವನ್ನು ಕೊಡಲಿಲ್ಲ. ಆರಂಭದಲ್ಲಿ ಇದ್ದ ಬಡತನ, ಅಸಮಾನತೆ, ನಿರಕ್ಷರತೆ ಮುಂತಾದವುಗಳು ಇಂದು ಕೂಡಾ ಸಮಸ್ಯೆಗಳಾಗಿಯೇ ನಮ್ಮ ಮುಂದಿವೆ. ಆಧುನಿಕ ಮತ್ತು ಸಾಂಪ್ರದಾಯಿಕ ವಲಯಗಳು ನಮ್ಮ ಔದ್ಯಮೀಕರಣದ ಮುಖ್ಯ ಲಕ್ಷಣವಾಗಿ ಮುಂದುವರಿಯುತ್ತಿವೆ. ಒಟ್ಟಾರೆಯಾಗಿ ಹೇಳುವುದಾದರೆ ಪಶ್ಚಿಮದ ತಂತ್ರಜ್ಞಾನ ನಮ್ಮ ಬಂಡವಾಳಪೂರ್ವ ವ್ಯವಸ್ಥೆಯನ್ನು ನಾಶಗೊಳಿಸಲಿಲ್ಲ. ಬದಲಿಗೆ ಬಂಡವಾಳಪೂರ್ವ ವ್ಯವಸ್ಥೆ ಮೇಲ್ನೋಟದ ಬದಲಾವಣೆಗಳೊಂದಿಗೆ ಆಧುನಿಕತೆಯ ಕೆಲವು ಅಂಶಗಳನ್ನು ತನ್ನದಾಗಿಸಿಕೊಂಡಿದೆ. ಇಲ್ಲಿ ಆಧುನಿಕತೆ ಕೇವಲ ಸರಕು ಮತ್ತು ಸೇವೆಗಳ ಉತ್ಪಾದನೆ ಹಾಗೂ ಬಳಕೆಗೆ ಸೀಮಿತಗೊಂಡಿದೆ. ಇತರ ವ್ಯವಹಾರಗಳಲ್ಲಿ ಬಂಡವಾಳಪೂರ್ವ ವ್ಯವಸ್ಥೆಯ ಪ್ರಭಾವ ಇನ್ನೂ ಗಾಢವಾಗಿದೆ. ಹುಟ್ಟು, ಮದುವೆ, ಸಾವು ಮುಂತಾದ ಮೂಲಭೂತ ಸಾಮಾಜಿಕ ಸಂಬಂಧಗಳನ್ನು ಹೊರತು

ಪಡಿಸಿ ಸಾಧಾರಣವೆನ್ನಬಹುದಾದ ಆಪ್ತ ಸಹೋದ್ಯೋಗಿಯ ಆಯ್ಕೆ, ಶೈಕ್ಷಣಿಕ ಸಂದರ್ಭಗಳಲ್ಲಿ ಗೆಳೆಯರ ಆಯ್ಕೆ, ವ್ಯಾಪಾರದಲ್ಲಿ ಸಹವರ್ತಿಯ ಆಯ್ಕೆ ಮುಂತಾದವುಗಳಲ್ಲಿ ನಾವು ಇನ್ನೂ ಕೂಡಾ ಸಾಂಪ್ರದಾಯಿಕ ಸಂಸ್ಥೆಗಳ ಪ್ರಭಾವಗಳನ್ನು ಮೀರಿ ಬೆಳೆದಿಲ್ಲ. ದಿನ ನಿತ್ಯ ವೈಜ್ಞಾನಿಕ ವ್ಯವಹಾರಗಳಲ್ಲೇ ಮುಳುಗಿರುವ ವಿಜ್ಞಾನಿಗಳು ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳಲು ಸಂಕಟ ಪಡುತ್ತಿರುವ ಈ ವ್ಯವಸ್ಥೆಯಲ್ಲಿ ಜನಸಾಮಾನ್ಯರಲ್ಲಿ ವಿಮರ್ಶಾತ್ಮಕ ಆಧುನಿಕತೆಯನ್ನು ಊಹಿಸಿಕೊಳ್ಳುವುದೂ ಕಷ್ಟ. ಈ ರೀತಿಯಲ್ಲಿ ನಮ್ಮ ಅಭಿವೃದ್ಧಿ ಯೋಜನೆಗಳ ಸಾಧನೆ ತುಂಬಾ ಸೀಮಿತವಾದುದು ಮತ್ತು ಆ ಸೀಮಿತ ಸಾಧನೆ ಕೂಡಾ ನಮ್ಮ ಪರಿಸರವನ್ನು ಗಣನೀಯವಾಗಿ ನಾಶಮಾಡುವುದರ ಮೂಲಕ ಆಗಿರುವುದು ಪ್ರಸಕ್ತ ಪರಿಸರ ಚಳುವಳಿಯ ಮುಖ್ಯ ಕಾರಣಗಳಾಗಿವೆ.

ಪಶ್ಚಿಮದ ಮಾದರಿಯ ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಪರಿಸರ ನಾಶ ಒಳಗೊಂಡಿದೆ ಅಥವಾ ಅದು ನಮ್ಮಲ್ಲಿ ಮೂಲಭೂತ ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆ ತರಲು ವಿಫಲವಾಗಿದೆ ಎನ್ನುವುದರ ಮೂಲಕ ಬದಲೀ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಒತ್ತು ಕೊಡಬೇಕೆಂಬ ವಾದ ಕೂಡಾ ಇದೆ. ಆದರೆ ಅದು ಅಷ್ಟು ಸುಲಭದ ಕೆಲಸವಲ್ಲ. ಪ್ರಪಂಚದ ಯಾವುದೇ ದೇಶ ಕೂಡಾ ಇಂದು ತನ್ನದೇ ಆದ ಅಂದರೆ ಬಂಡವಾಳಶಾಹಿಯ ಜಾಗತಿಕ ವ್ಯವಸ್ಥೆಗೆ ಪೂರಕವಲ್ಲದ ಉತ್ಪಾದನಾ ತಂತ್ರ ಅಥವಾ ಆರ್ಥಿಕ ನೀತಿಯನ್ನು ಹೊಂದಿದ ದಾಖಲೆಗಳು ಇಲ್ಲ. ಆದಾಗ್ಯೂ ಈ ಶತಮಾನದ ಆರಂಭದಲ್ಲಿ ಎಡಪಂಥೀಯ ದೇಶಗಳಲ್ಲಿ ಈ ನಿಟ್ಟಿನಲ್ಲಿ ಸ್ವಲ್ಪ ಮಟ್ಟಿನ ಪ್ರಯತ್ನಗಳು ನಡೆದಿದ್ದವು. ಆದರೆ ಅಲ್ಲಿ ಕೂಡಾ ಉತ್ಪಾದನಾ ತಂತ್ರದ ವಿಚಾರದಲ್ಲಿ ಮಹತ್ವದ ಬದಲಾವಣೆಗಳಿರಲಿಲ್ಲ. ಆದರೆ ಈಗ ಈ ಅಲ್ಪ ಮಟ್ಟಿನ ಪ್ರಯತ್ನ ಕೂಡಾ ದುಃಸಾಧ್ಯ ಎಂಬುದು ಹಲವಾರು ಎಡ ಪಂಥೀಯ ದೇಶಗಳಲ್ಲಿನ ಪ್ರಸಕ್ತ ಬದಲಾವಣೆಗಳಿಂದ ತಿಳಿದು ಬರುತ್ತದೆ. ನಮ್ಮಲ್ಲಂತೂ ಆರಂಭದಿಂದಲೇ ಸಾಮಜವಾದೀ ಸಮಾಜ ನಿರ್ಮಾಣದ ಘೋಷಣೆಯ ಅಡಿಯಲ್ಲಿ ಅತಿ ಹೆಚ್ಚಿನ ಉತ್ಪಾದನೆಗೆ ಮಹತ್ವ ಕೊಡುವ ಅಭಿವೃದ್ಧಿಯ ಪರಿಕಲ್ಪನೆಯೇ ಜಾರಿಯಲ್ಲಿತ್ತು. ನಾಲ್ಕು ದಶಕಗಳ ನಂತರ ಈಗ ನಾವು ಸ್ವಯಂ ತಂತ್ರವಾದಿ (*liberal*) ನೀತಿಗಳತ್ತ ಗಮನ ಹರಿಸುತ್ತಿದ್ದೇವೆ. ಈ ಬದಲಾವಣೆಗಳಿಗೆ ಕಾರಣ ನಮ್ಮ ಆರ್ಥಿಕ ಚಟುವಟಿಕೆಗಳಿಂದ ಗಣನೀಯವಾದ ಪರಿಸರನಾಶವಾಗಿದೆ ಎಂದಲ್ಲ; ಬದಲಿಗೆ ಸರಕಾರದ ನೇತೃತ್ವದಲ್ಲಿ ನಡೆಯುತ್ತಿದ್ದ ಔದ್ಯಮೀಕರಣ ತೀವ್ರಗತಿಯಲ್ಲಿ ನಡೆಯಲಿಲ್ಲ ಆದ್ದರಿಂದ ಖಾಸಗೀ ಉದ್ಯಮತ್ವಕ್ಕೆ ಹೆಚ್ಚಿನ ಮಹತ್ವ ಕೊಡಬೇಕೆಂಬ ದೃಷ್ಟಿಯಿಂದಾಗಿದೆ. ಇಂತಹ ಬದಲಾವಣೆ ಕೂಡಾ ನಮ್ಮದೇ ಸ್ವಂತ ಅನುಭವ ಅಥವಾ ಅಗತ್ಯಗಳಿಗೆ ಅನುಗುಣವಾಗಿ ಆಗಿಲ್ಲ. ಬದಲಾಗಿ ಇದು ಜಾಗತಿಕ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಅಂಗಗಳಾದ ಐ.ಎಂ.ಎಫ್., ವರ್ಲ್ಡ್ ಬ್ಯಾಂಕ್ ಮುಂತಾದವುಗಳ ಒತ್ತಡದಿಂದ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಅಭಿವೃದ್ಧಿಯ ವ್ಯಾಖ್ಯಾನವನ್ನು ನಮ್ಮ ಸ್ಥಿತಿಗೆ ಅನುಗುಣವಾಗಿ ಮಾರ್ಪಾಟು ಮಾಡಿಕೊಳ್ಳಬೇಕು ಎನ್ನುವ ವಿಚಾರಗಳು ಅವಾಸ್ತವಿಕವಾಗುತ್ತವೆ.

ಅಭಿವೃದ್ಧಿಯ ಬಗೆಗಿನ ಈ ನಮ್ಮ ಚರ್ಚೆಯಲ್ಲಿ ಯುರೋಪಿನಿಂದ ಬಂದ ಸರಳ

ರೇಖಾತ್ಮಕ ಅಭಿವೃದ್ಧಿಯ ಪರಿಕಲ್ಪನೆ ದಿಕ್ಕು ದೆಸೆಯಿಲ್ಲದ ಔದ್ಯಮೀಕರಣ ಹಾಗೂ ವಿಮರ್ಶಾರಹಿತ ಆಧುನಿಕತೆಯನ್ನು ಹೇಗೆ ಹುಟ್ಟು ಹಾಕಿತು ಮತ್ತು ಅದರ ಮೂಲಕ ಹೇಗೆ ನಾವು ನಮ್ಮ ಸಂಸ್ಕೃತಿ ಮತ್ತು ಪರಿಸರದ ಬಗ್ಗೆ ಅಪಾಯಕಾರಿಯಾದ ಅಭಿಪ್ರಾಯಗಳನ್ನು ತಾಳಿದ್ದೇವೆ ಎಂಬುದನ್ನು ಸೂಚಿಸಿದ್ದೇನೆ. ಅಲ್ಲದೆ ಅಭಿವೃದ್ಧಿಯ ಬಗ್ಗೆ ಪಶ್ಚಿಮದ ದೇಶಗಳು ಈವರೆಗೆ ತುಳಿದ ದಾರಿಗಿಂತ ಭಿನ್ನವಾದ ದಾರಿಗಳು ಕಾರ್ಯರೂಪಕ್ಕೆ ಬರದಿದ್ದರೂ ಅವು ಆಯ್ಕೆಗಳಾಗಿ ನಮ್ಮ ಮುಂದಿವೆ ಎನ್ನುವುದನ್ನು ಸೂಚಿಸಬಯಸುತ್ತೇನೆ. ಒಂದು ಬದಲೀ ಅಭಿವೃದ್ಧಿಯ ಕಲ್ಪನೆಯನ್ನು ರೂಪಿಸಬೇಕಾದಾಗ ನಾವು ಒಂದುಕಡೆ ಪಶ್ಚಿಮದ ಬಂಡವಾಳಶಾಹಿ ಅಭಿವೃದ್ಧಿಯ ವಿಮರ್ಶೆಯನ್ನು ಮಾಡುವ ಜತೆ ಜತೆಗೇ ಅದಕ್ಕೆ ಪ್ರತಿಕ್ರಿಯೆಯಾಗಿ ಬಂದ ಪರಿಸರವಾದದ ಕೆಲವು ಲೋಪದೋಷಗಳನ್ನೂ ಇಲ್ಲಿ ನಮೂದಿಸಬೇಕಾಗಿದೆ.

ಪರಿಸರ ಮತ್ತು ಅದರ ರಕ್ಷಣೆಗೆ ಸಂಬಂಧಿಸಿದಂತೆ ವಿಭಿನ್ನ ದೃಷ್ಟಿಕೋನಗಳು ನಮ್ಮಲ್ಲಿವೆ. ವಿವಿಧ ಜಾತಿ, ಮತ, ಪಂಥ, ಭಾಷೆ, ಸಂಸ್ಕೃತಿ ಮತ್ತು ಭೌಗೋಳಿಕ ಲಕ್ಷಣಗಳುಳ್ಳ ಭಾರತದಲ್ಲಿ ಇದು ಸಹಜ ಕೂಡಾ. ಆದಾಗ್ಯೂ ಪ್ರಸಕ್ತ ಪರಿಸರ ಸಮಸ್ಯೆ ಕುರಿತ ಚರ್ಚೆಯಲ್ಲಿ ಎರಡು ಪ್ರಮುಖ ಲೋಪಗಳಿವೆ. ಒಂದನೆಯದಾಗಿ, ಹಲವಾರು ಪ್ರಮುಖ ವಿಚಾರಗಳು ಪ್ರಚಲಿತ ಚರ್ಚೆಯ ವಸ್ತುಗಳಾಗಿಲ್ಲ; ಮತ್ತು ಎರಡನೆಯದಾಗಿ, ಕೆಲವೊಂದು ವಿಚಾರಗಳ ಬಗ್ಗೆ ಪರಿಸರ ಸಂಬಂಧಿತ ಚರ್ಚೆ ಅಗತ್ಯವಾಗಿರುವ ಮಹತ್ವವನ್ನು ಕೊಟ್ಟಿಲ್ಲ. ಕೈಗಾರಿಕೆಗಳು ಪರಿಸರ ಮಾಲಿನ್ಯದ ಮೊದಲ ಕಾರಣವೆಂದು ಪರಿಸರವಾದಿಗಳು ಗುರುತಿಸುತ್ತಾರೆ. ಇದರಲ್ಲಿ ಸ್ವಲ್ಪಮಟ್ಟಿನ ಸತ್ಯಾಂಶವಿದೆ. ಆದರೆ ಇದು ಮಾತ್ರವಲ್ಲದೆ ಇತರ ಹಲವಾರು ಕಾರಣಗಳು ಕೂಡಾ ಪರಿಸರ ಸಮಸ್ಯೆಯನ್ನು ಉಲ್ಬಣಗೊಳಿಸುವಲ್ಲಿ ಸಹಾಯಕವಾಗಿವೆ ಎನ್ನುವ ಅಂಶವನ್ನು ನಮ್ಮ ಪರಿಸರವಾದಿಗಳು ಅಷ್ಟಾಗಿ ಗಮನಿಸಿದಂತೆ ಕಾಣುವುದಿಲ್ಲ. ಉದಾಹರಣೆಗೆ : ಒಂದು, ಖಾಸಗೀ ಬಂಡವಾಳಶಾಹಿಯ ವಿಸ್ತರಣೆ ಮತ್ತು ಅದರಿಂದ ಪ್ರಭಾವಿತವಾದ ಜೀವನ ಶೈಲಿ, ವಸ್ತು / ಸೇವೆಗಳ ಉಪಭೋಗದಲ್ಲಿ ನಿಯಂತ್ರಣ ಹಾಗೂ ಸಂಯಮಗಳಿಲ್ಲದೆ ಇರುವುದು ; ಎರಡು, ಪರಿಸರ ಮಾಲಿನ್ಯಕ್ಕೆ ಜಾಗತಿಕ ಮಟ್ಟದಲ್ಲಿ ಶ್ರೀಮಂತ ರಾಷ್ಟ್ರಗಳ ಜೀವನಶೈಲಿ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಶ್ರೀಮಂತ ವರ್ಗದ ಜೀವನ ಶೈಲಿ ಕಾರಣವಾದಷ್ಟು ಬಡ ರಾಷ್ಟ್ರಗಳು ಮತ್ತು ಬಡ ವರ್ಗಗಳು ಕಾರಣವಾಗಿಲ್ಲದಿರುವುದು; ಮೂರು, ಕೃಷಿಯಿಂದ ಆಗುವ ಪರಿಸರ ಮಾಲಿನ್ಯದತ್ತ ವಿಶೇಷ ಗಮನ ಹರಿಸದಿರುವುದು ; ನಾಲ್ಕು, ಔದ್ಯಮೀಕರಣವನ್ನು ವಿರೋಧಿಸುವ ಭರದಲ್ಲಿ ಬಂಡವಾಳ ಪೂರ್ವ ವ್ಯವಸ್ಥೆಯನ್ನು ಮತ್ತು ಸಂಸ್ಕೃತಿಯನ್ನು ವೈಭವೀಕರಿಸುವುದು - ಇವೇ ಮೊದಲಾದವುಗಳು ಪರಿಸರ ಸಂಬಂಧಿತ ಚರ್ಚೆಯ ಕೇಂದ್ರ ಬಿಂದುಗಳಾಗಿಲ್ಲ ಅಥವಾ ಚರ್ಚೆ ಪರಿಸರ ಚಳುವಳಿಯ ಅಗತ್ಯಗಳಿಗೆ ಅನುಗುಣವಾಗಿ ಆಗುತ್ತಿಲ್ಲ. ಈ ವಿಚಾರಗಳನ್ನು ಪ್ರಸಕ್ತ ಚರ್ಚೆಯ ವ್ಯಾಪ್ತಿಯೊಳಗೆ ತಂದ ಕೂಡಲೇ ಪರಿಸರ ಸಮಸ್ಯೆಯ ಎಲ್ಲಾ ನಿಗೂಢತೆಗಳು ತೆರೆದುಕೊಳ್ಳುತ್ತವೆ ಎಂದು ನಾನು ಭಾವಿಸುವುದಿಲ್ಲ. ಆದಾಗ್ಯೂ ಪರಿಸರ ಸಮಸ್ಯೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಲ್ಲಿ ಈ ಮೇಲಿನ ವಿಚಾರಗಳು ಸಹಕಾರಿಯಾಗಬಹುದು

ಎಂಬುದು ನನ್ನ ಆಶಯ. ಮೇಲಿನ ಎಲ್ಲಾ ಪ್ರಶ್ನೆಗಳನ್ನು ಚರ್ಚಿಸಲು ನಾನು ಇಷ್ಟಪಡುವುದಿಲ್ಲ. ಪರಿಸರ ಚಳುವಳಿಗಳು ಸಾಮಾಜಿಕ ಚಳುವಳಿಗಳಾಗಿ ಪರಿವರ್ತನೆಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಪ್ರಮುಖವಾದ ಎರಡು ವಿಚಾರಗಳ ಬಗ್ಗೆ ನನ್ನ ಅಭಿಪ್ರಾಯಗಳನ್ನು ಓದುಗರ ಮುಂದಿಡಲು ಇಚ್ಛಿಸುತ್ತೇನೆ.

ಒಂದು, ಈ ಹಿಂದೆ ಸೂಚಿಸಿದಂತೆ ನಮ್ಮ ಅನುಭೋಗ ಶೈಲಿಯ ಮೂಲಭೂತ ಪರಿವರ್ತನೆಯ ಬಗೆಗಿನ ಪ್ರಶ್ನೆಯನ್ನು ಒಳಗೊಳ್ಳದ ಪರಿಸರವಾದ ಅಪೂರ್ಣವೇ ಸರಿ. ಅನುಭೋಗಶೈಲಿಯಲ್ಲಿ ಪರಿವರ್ತನೆ ಇಲ್ಲದೆ ಕೇವಲ ಔದ್ಯಮೀಕರಣವನ್ನು ವಿರೋಧಿಸುವ ಮೂಲಕ ನಮ್ಮ ಪರಿಸರ ರಕ್ಷಣೆ ಸಾಧ್ಯವಾಗಲಿಕ್ಕಿಲ್ಲ. ಈ ರೀತಿಯ ಪರಿಸರವಾದದಿಂದ ಅಥವಾ ಚಳುವಳಿಯಿಂದ ಹೆಚ್ಚೆಂದರೆ ನಾವು ಪರಿಸರ ಸಮಸ್ಯೆಯನ್ನು ಸ್ಥಳಾಂತರಿಸಬಹುದು ಅಥವಾ ಮುಂದಕ್ಕೆ ಹಾಕಬಹುದು ಹೊರತು ಮಾಲಿನ್ಯರಹಿತ ಉತ್ಪಾದನಾ ವ್ಯವಸ್ಥೆಯ ನಿರ್ಮಾಣಕ್ಕೆ ಪ್ರಯತ್ನಿಸಿದಂತಾಗುವುದಿಲ್ಲ. ಇಂದು ಪಶ್ಚಿಮದ ಶ್ರೀಮಂತ ರಾಷ್ಟ್ರಗಳು ಇದನ್ನೇ ಅಂದರೆ ಪರಿಸರ ಮಾಲಿನ್ಯವನ್ನು ವರ್ಗಾಯಿಸುವ ಕೆಲಸವನ್ನೇ ಮಾಡುತ್ತಿವೆ. ತಮ್ಮ ಪರಿಸರ ಮಾಲಿನ್ಯಕ್ಕೆ ಕಾರಣವಾಗಬಹುದಾದ ಸರಕುಗಳ ಉತ್ಪಾದನೆಯನ್ನು ಸ್ವಯಂ ತಂತ್ರನೀತಿಗಳ ಹೆಸರಿನಲ್ಲಿ ಇತರ ಬಡ ರಾಷ್ಟ್ರಗಳಿಗೆ ವರ್ಗಾಯಿಸುತ್ತಿದ್ದಾರೆ. ಇದೇ ಪ್ರವೃತ್ತಿಯನ್ನು ರಾಷ್ಟ್ರೀಯ ಮಟ್ಟದಲ್ಲೂ ಕಾಣಬಹುದು. ಪ್ರಭಾವೀ ರಾಜ್ಯಗಳು / ಜಿಲ್ಲೆಗಳು ತಮ್ಮ ಪರಿಸರ ಮಾಲಿನ್ಯಕ್ಕೆ ಕಾರಣವಾಗಬಹುದಾದ ಉದ್ದಿಮೆಗಳನ್ನು ತಮ್ಮ ಕ್ಷೇತ್ರಗಳಲ್ಲಿ ಸ್ಥಾಪನೆಯಾಗದಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಆದರೆ ಈ ಬಗೆಯ ಪರಿಸರವಾದ / ಚಳುವಳಿಗಳಿಂದ ಪರಿಸರ ಸಮಸ್ಯೆಗೆ ಖಾಯಂ ಆದ ಒಂದು ಪರಿಹಾರ ಕಂಡುಕೊಂಡಂತಾಗುವುದಿಲ್ಲ.

ಎರಡು, ಔದ್ಯಮೀಕರಣವನ್ನು ವಿರೋಧಿಸುವ ಭರದಲ್ಲಿ ಬಂಡವಾಳಪೂರ್ವ ವ್ಯವಸ್ಥೆಯನ್ನು ಮತ್ತು ಅದರ ಸಂಸ್ಕೃತಿಯನ್ನು ವೈಭವೀಕರಿಸುವ ಒಂದು ಪ್ರವೃತ್ತಿ ನಮ್ಮ ಪರಿಸರವಾದದ ಜತೆ ಜತೆಗೇ ಕಂಡುಬರುತ್ತಿದೆ. ನಮ್ಮ ಸಂಸ್ಕೃತಿಯನ್ನು ವೈಭವೀಕರಿಸುವುದು ತಪ್ಪೇನಲ್ಲ. ಆದರೆ ಇಂದಿನ ರಾಜಕೀಯ ಸಂದರ್ಭದಲ್ಲಿ 'ನಮ್ಮ ಸಂಸ್ಕೃತಿ' ಎಂಬ ಪದಕ್ಕೆ ಹಿಂದೂ ರಾಷ್ಟ್ರೀಯವಾದಿಗಳ 'ಸಂಸ್ಕೃತಿ'ಗಿಂತ ಭಿನ್ನವಾದ ಅರ್ಥ ನೀಡುವುದು ಕಷ್ಟಕರ. ಔದ್ಯಮೀಕರಣವನ್ನು ವಿರೋಧಿಸುವ ಭರದಲ್ಲಿ 'ನಮ್ಮ ಸಂಸ್ಕೃತಿಯ' ಬೇರನ್ನು ಹುಡುಕಬೇಕು, ಅದರಲ್ಲೂ ಅರ್ಥವಿದೆ, ಅದರಲ್ಲೂ ಸತ್ವವಿದೆ ಎನ್ನುವ ಮಾತುಗಳು ನಮ್ಮನ್ನು ನೇರವಾಗಿ ರೈಟಿಸ್ಟ್/ಫ್ಯಾಸಿಸ್ಟ್ ವಾದಗಳತ್ತ ಒಯ್ಯಬಹುದು. 'ಸಂಸ್ಕೃತಿ' ಪದದ ಈ ರೀತಿಯ ಬಳಕೆ ಪರದೇಶೀ ಸಂಸ್ಕೃತಿಗೆ ಮಾತ್ರ ವಿರೋಧವಲ್ಲ, ಜತೆಗೆ ಅಲ್ಪ ಸಂಖ್ಯಾತರ ಮತ್ತು ಹಿಂದುಗಳಲ್ಲಿನ ಕೆಳವರ್ಗದ ಜನರ ಸಂಸ್ಕೃತಿಗೂ ವಿರೋಧವನ್ನೊಳಗೊಂಡಿದೆ. ಈ ಹಿನ್ನೆಲೆಯಲ್ಲಿ ಪರಿಸರವಾದದೊಂದಿಗೆ ತೂರಿಕೊಳ್ಳುವ 'ನಮ್ಮ ಸಂಸ್ಕೃತಿ'ಯ ಪರಿಕಲ್ಪನೆ ಪರಿಸರ ಚಳುವಳಿಯ ದಿಕ್ಕು ತಪ್ಪಿಸುವ ಸಾಧ್ಯತೆಗಳಿವೆ.

ಪ್ರಸಕ್ತ ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಪರಿಸರ ನಾಶ ಒಳಗೊಂಡಿದೆ ಎನ್ನವುದರ ಮೂಲಕ, ಪರಿಸರ ಚಳುವಳಿಗಳು ವ್ಯರ್ಥ ಎಂದು ವಾದಿಸುವ ಉದ್ದೇಶ ಇಲ್ಲ. ಹಾಗೆ ನೋಡಿದರೆ ಭಾರತದ ಇಂದಿನ ಸಂದರ್ಭದಲ್ಲಿ ಪರಿಸರ ಚಳುವಳಿಗಳ ಅಗತ್ಯ ತುಂಬಾ ಇದೆ.

ಆಧುನಿಕತೆ ನಮ್ಮಲ್ಲಿ ಕೆಲವೊಂದು ವಿಕೃತ ರೂಪಗಳಲ್ಲಿ ಪ್ರಕಟಗೊಳ್ಳುವುದನ್ನು ಬಿಟ್ಟರೆ ಆಧುನಿಕ ಸಮಾಜದ ಅಗತ್ಯಗಳಾದ ಸಿವಿಕ್ ಬಾಡಿಗಳಾಗಲೀ, ಪ್ರಜಾತಂತ್ರವಾಗಲೀ, ಅಧಿಕಾರಶಾಹಿಯಾಗಲೀ ಇನ್ನೂಕೂಡಾ ಸಾಂಪ್ರದಾಯಿಕ ಪ್ರಭಾವವನ್ನು ಮೀರಿ ಬೆಳೆದಿಲ್ಲ. ಖಾಸಗೀ / ಸಾರ್ವಜನಿಕ ಉದ್ಯಮತ್ವ ಈ ಪರಿಸ್ಥಿತಿಯ ಲಾಭ ಪಡೆಯುವುದರಲ್ಲಿ ಸಂದೇಹವಿಲ್ಲ. ಈ ಸಂದರ್ಭದಲ್ಲಿ ಪರಿಸರಸಂಬಂಧಿತ ಕಾನೂನುಗಳನ್ನು ಜಾರಿಗೆ ತರುವಲ್ಲಿ ಅಧಿಕಾರಶಾಹಿಯನ್ನು ಮತ್ತು ಆ ಕ್ರಮಗಳನ್ನು ಚಾಚೂ ತಪ್ಪದೆ ಅನುಸರಿಸುವಂತೆ ಉದ್ಯಮಿಗಳ ಮೇಲೆ ಒತ್ತಡ ಹೇರುವಲ್ಲಿ ಪರಿಸರ ಚಳುವಳಿಗಳ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. ಈ ಚಳುವಳಿಗಳು ಅಂತಿಮವಾಗಿ ನಮ್ಮನ್ನು ಪ್ರಗತಿಶೀಲವಾದ ಹಾಗೂ ಸಾಧ್ಯವಾಗಬಹುದಾದ ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ಯಬಹುದು ಎನ್ನುವ ಆಶಾಭಾವನೆಯಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆ. □

ಇದು ಒಂದು ಪ್ರಪಂಚ. ನಾವಿರುವ ಭೂಮಿ ಒಂದೇ ಮನೆ. ಅದರಲ್ಲಿ ಜೀವಿಸುವ ಹಕ್ಕು ಕ್ರಿಮಿಕೀಟಗಳಿಂದ ಹಿಡಿದು ಮನುಷ್ಯ ಪ್ರಾಣಿಯ ತನಕ ಎಲ್ಲರಿಗೂ ಇದೆ. ನಮ್ಮೆಲ್ಲರನ್ನು ಸೃಷ್ಟಿಸಿದ್ದು ಅದಾವುದೋ ಒಂದು ಶಕ್ತಿ. ನಮ್ಮ ಇಚ್ಛೆಗಳು ನಮಗೆ ತಿಳಿದಿದ್ದರೂ ಅದರ ಇಚ್ಛೆಯೇನೆಂದು ತಿಳಿದಿದ್ದೇವೆ ಎನ್ನುವುದು ಜಂಭದ ಮಾತು. ಆ ಜಂಭವನ್ನು ಬಿಟ್ಟು ಬಾಳಬೇಕು. ಮನುಷ್ಯಕುಲದ ಹಿತಕ್ಕಾಗಿ ಮಾತ್ರವಲ್ಲ, ಎಲ್ಲ ಜೀವಿಗಳ ಹಿತಕ್ಕಾಗಿಯೂ ಬಾಳುವ ರೀತಿಯನ್ನು ಕಲಿತರೆ, ಆಗ ನಾವು ನಾಗರಿಕತೆಯ ಹೊಸ್ತಿಲನ್ನು ದಾಟಿದ ಮನುಷ್ಯರೆನಿಸುತ್ತೇವೆ.

- ಶಿವರಾಮ ಕಾರಂತ

ಹೊಸ ಓದು

ಹಾರುವ ಹಕ್ಕಿ (ಕಥೆಗಳು)
ಲೇ : ಬಾಳಾಸಾಹೇಬ ಲೋಕಾಪುರ
ಪ್ರ : ಸುಬಾಹು ಪ್ರಕಾಶನ ಬಾಗಲಕೋಟೆ
ಪುಟ : ೯೬ ಬೆಲೆ : ರೂ. ೩೫/-

'ಕಥಾಪ್ರಕಾರ : ಹೊಸತನದ ಹುಡುಕಾಟದಲ್ಲಿ'

ಬಾಳಾಸಾಹೇಬ ಲೋಕಾಪುರ ಅವರ ಈ ಕಥಾ ಸಂಕಲನವನ್ನು ಓದಲು ಕೈಗೆತ್ತಿಕೊಂಡಾಗ ಹಲವು ಪ್ರಶ್ನೆಗಳೊಂದಿಗೆ ಕುತೂಹಲ ಮೂಡುತ್ತದೆ. ಯಾವದೇ ಲೇಖಕರ ಮೊದಲ ಕೃತಿಗಳಲ್ಲಿ ಒಬ್ಬ ವಿಮರ್ಶಕ, ಅಥವಾ ಈ ಲೇಖಕ ಆ ಲೇಖಕ ಪ್ರತಿನಿಧಿಸುವ ಸಾಹಿತ್ಯಕ ಚಳುವಳಿಯ ಪ್ರಸಿದ್ಧರಿಂದ ಮುನ್ನುಡಿ ಇಲ್ಲವೇ ಬೆನ್ನುಡಿ ಇರುವುದು ಕನ್ನಡದಲ್ಲಿ ಇತ್ತೀಚಿನ ವರ್ಷಗಳಲ್ಲಿ ಒಂದು ರೂಢಿ ಎಂಬಂತಾಗಿದೆ. ಈ ಮುನ್ನುಡಿ - ಬೆನ್ನುಡಿಗಳು ವಿಮರ್ಶೆಯನ್ನು ಗೌಣವಾಗಿಸಿ ಕೃತಿಗೆ ಪ್ರವೇಶ ನೀಡುವ ಬದಲು ಏಕಮುಖತೆಯಲ್ಲಿ ನಿಲ್ಲಿಸುವಂತಿರುತ್ತವೆ. ಆದರೆ ಬಾಳಾಸಾಹೇಬ ಲೋಕಾಪೂರ ಅವರು ಇಂಥ ಮುನ್ನುಡಿ ಬೆನ್ನುಡಿಗಳ ಗೋಜಿಗೆ ಹೋಗದೆ ತಮ್ಮ ಬೆನ್ನುಡಿಯಮಾತುಗಳಲ್ಲಿ ಸದ್ಯದ ಕನ್ನಡ ಸಾಹಿತ್ಯಕ್ಷೇತ್ರದ ವಾತಾವರಣದತ್ತ ನಮ್ಮ ಗಮನ ಸ್ವಲ್ಪವಾದರೂ ಹರಿಯುವಂತಹ ಮಾತುಗಳನ್ನು ಬರೆದಿದ್ದಾರೆ : 'ಸಾಹಿತ್ಯದಲ್ಲಿನ ಗುಂಪುಗಾರಿಕೆ, ಪಂಥಗಳು, ಹೊಟ್ಟೆಕಿಚ್ಚು, ಜಾತೀಯತೆ ಇವೆಲ್ಲಾ ನನ್ನನ್ನು ದಿಕ್ಕು ತಪ್ಪಿಸಿವೆ. ಇಷ್ಟಾಗಿಯೂ ನನ್ನನ್ನು ನನ್ನ ಸುತ್ತಲಿನ ಗೆಳೆಯರ ಪರಿವಾರ ಬಹಳ ಪ್ರೀತಿಯಿಂದಲೇ ನೋಡಿಕೊಂಡಿದೆ.... ನಾನು ಕಂಡುಂಡ ಅನುಭವಗಳನ್ನು ಕಥೆಯಾಗಿಸುವಲ್ಲಿ ಸಂತೋಷಪಟ್ಟಿದ್ದೇನೆ. ಈ ಪ್ರಕ್ರಿಯೆಯಲ್ಲಿ ನಿಜವಾದ ಸಾಹಿತ್ಯ ಮಾತ್ರ ಮನುಷ್ಯ - ಮನುಷ್ಯರ ನಡುವೆ ಎದ್ದ ಈ ಗೋಡೆಗಳನ್ನು ಕೆಡವಿ ಅಲ್ಲಿ ಪ್ರೀತಿ ಹುಟ್ಟಿಸಬಲ್ಲದು ಎಂದು ತಿಳಿದಿದ್ದೇನೆ'. ಈ ಮಾತುಗಳು ಬಾಳಾಸಾಹೇಬ ಅವರ ಒಬ್ಬರ ಮಾತಾಗದೇ ಇತ್ತೀಚೆಗೆ ಬರವಣಿಗೆ ಆರಂಭಿಸುತ್ತಿರುವ ಹಲವರ ಮಾತುಗಳಂತಿವೆ. 'ನಿಜವಾದ ಸಾಹಿತ್ಯ ಸೃಷ್ಟಿ' ಎನ್ನುವುದು ಎಲ್ಲ ರೀತಿಯ ಸಂಕುಚಿತತೆ ಯ ಸೀಮೆಗಳನ್ನು ಮೀರಿ ನಿರ್ಮಾಣಗೊಳ್ಳುವಂತಹದು. ಯಾವುದೇ ಲೇಖಕ ಬರವಣಿಗೆಯ ಏಕಾಂತದ ಕ್ಷಣಗಳಲ್ಲಿ ಹೊರಗಿನ ಎಲ್ಲ ಸಣ್ಣತನಗಳ ಆಚೆಯಿದ್ದು ತನ್ನ ಪ್ರತಿಭಾಸಾಮರ್ಥ್ಯದಲ್ಲಿ ತನ್ನ ಸೃಜನಶೀಲತೆಗೆ ಅಭಿವ್ಯಕ್ತಿ ನೀಡುತ್ತಿರುತ್ತಾನೆ. ಈ ಕ್ಷಣಗಳಲ್ಲಿ ಆತ ಒಂದು ಬದ್ಧತೆಗೆ ಒಳಗಾಗಿರಲಿ ಇಲ್ಲದಿರಲಿ, ತಾನು ಮುಖಾಮುಖಿಯಾಗುತ್ತಲಿರುವ ಒಳತೋಟಿಗೆ, ಅಂತರ್ಯದಿಂದ ಪುಟಿವ ಧ್ವನಿಗಳಿಗೆ ಒಂದು ರೂಪ ಕೊಡುತ್ತಿರುತ್ತಾನೆ; ಇಲ್ಲಿ ಅವನು ತನ್ನದೇ ಆದ ಮಾರ್ಗವೊಂದರಲ್ಲಿ ನಡೆಯುತ್ತಿರುತ್ತಾನೆ ಇಲ್ಲವೇ ತನ್ನನ್ನು ಪ್ರಭಾವಿಸಿರುವ ಮಾರ್ಗದ ಅನುಕರಣೆಯಲ್ಲಿರುತ್ತಾನೆ. ಒಂದು ರೀತಿಯಲ್ಲಿ ಇದು ಆಯಾ ಲೇಖಕನ ಒಳವ್ಯಕ್ತಿತ್ವವನ್ನು ಹೊಮ್ಮಿಸುವಂಥದು. ಇದು ಸೃಜನಶೀಲ ಲೇಖಕನನ್ನು ಅಂತರ್ಯಕ್ಕೆ ಎಳೆಯುವಂಥದಾದರೆ, ಆತನನ್ನು ಬಹಿರ್ಮುಖತೆಯಲ್ಲಿ ಗುರುತಿಸುವುದು

ಸಾಹಿತ್ಯ ವಲಯ.

ಆದರೆ ಸದ್ಯದ ಕನ್ನಡ ಸಾಹಿತ್ಯಕ್ಷೇತ್ರದಲ್ಲಿನ ವಾತಾವರಣ ಹೊಸದಾಗಿ ಬರವಣಿಗೆ ಆರಂಭಿಸಿರುವವರಿಗೆ ಅಂತರ್ಮುಖ - ಬಹಿರ್ಮುಖದ ಎರಡೂ ನಿಟ್ಟುಗಳನ್ನು ಗೊಂದಲದಲ್ಲಿ ನಿಲ್ಲಿಸುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ ಎನ್ನುವುದನ್ನು ಬಾಳಾಸಾಹೇಬರ ಮಾತುಗಳು ಸೂಚ್ಯವಾಗಿ ತೋರುತ್ತವೆ. ಸಾಹಿತ್ಯಕ್ಷೇತ್ರದ ಇಂಥ ಸಣ್ಣತನಗಳನ್ನು ದಾಖಲಿಸುವಂಥ ಪರಿಸ್ಥಿತಿ ಏಕಿದೆ ಎನ್ನುವುದು ಈ ಕಥಾಸಂಕಲನದಲ್ಲಿನ ಕಥೆಗಳನ್ನು ಪರಿಶೀಲನೆಗೆ ಒಡ್ಡುವ ಸಂದರ್ಭಕ್ಕೆ ಹೊರತಾದುದಾದರೂ ಇದೂ ಕೂಡ ಒಬ್ಬ ಲೇಖಕನಿಗೆ ತನ್ನತನವನ್ನು ಕಾಯ್ದುಕೊಳ್ಳುವ, ತನ್ನದೆ ಆದ ಮಾರ್ಗವನ್ನು ಈ ಎಲ್ಲವನ್ನೂ ಮೀರಿದಾಗ ಕಂಡುಕೊಳ್ಳುವ ಒಂದು ಬಿಕ್ಕಟ್ಟನ್ನು ಒಳಗೊಂಡಿರುವಂಥದು ಎಂಬುದರಿಂದ ಇಲ್ಲಿ ಈ ಬಗೆಗೆ ಪ್ರಸ್ತಾಪಿಸಬೇಕಾಗಿದೆ. ದಲಿತ - ಬಂಡಾಯದ ನಂತರ ಒಂದು ಹೊಸತನವನ್ನು ಪಡೆಯಲು ತವಕಿಸುತ್ತಿರುವ ಕನ್ನಡ ಸಾಹಿತ್ಯಕ ಪ್ರತಿಭೆ ಚಳುವಳಿಗಿಂತ ಹೊರತಾಗಿರುವ ಮಾರ್ಗದಲ್ಲಿಯೇ ತನ್ನ ಸಮೃದ್ಧ ಪರಂಪರೆಯನ್ನು ಮುಂದುವರಿಸುತ್ತದೇನೋ ...ಕಾಯ್ದು ನೋಡಬೇಕಾಗಿದೆ.

ಬಾಳಾಸಾಹೇಬರ ಇಲ್ಲಿನ ಕಥೆಗಳತ್ತ ಹೊರಳುವ ಮೊದಲು, ಈ ಶತಮಾನದ ಮಹಾನ್ ಕಥೆಗಾರ, ಯಿದ್ದಿಶ್ ಲೇಖಕ ಬಾಷೆವಿಸ್ ಸಿಂಗರ್ ತನ್ನ 'ಕಲೆಕ್ಟೆಡ್ ಸ್ಟೋರೀಸ್' ಸಂಕಲನಕ್ಕೆ ಬರೆದಿರುವ ಟಿಪ್ಪಣಿಯಲ್ಲಿನ ಕೆಲವು ಮಾತುಗಳನ್ನು ನೋಡುವುದು ಸೂಕ್ತವಿದೆ. ಇವು ಕಥಾಸಾಹಿತ್ಯದ ಬಗ್ಗೆ ಕೆಲವೇಮಾತುಗಳಲ್ಲಿ ಮಹತ್ವದ ಒಳನೋಟವನ್ನು ತೋರುತ್ತವೆ: '' ... ಸಣ್ಣಕಥೆ ಇಂದಿನ ದಿನಗಳಲ್ಲಿ ರೂಢಿಗತದ್ದಾಗಿಲ್ಲ. ಇದು ಸೃಜನಶೀಲ ಲೇಖಕನಿಗೆ ಸವಾಲಿನದ್ದಾಗಿ ರೂಪುಗೊಳ್ಳುತ್ತಿದೆ ಎನ್ನುವುದನ್ನು ನಾನು ಈಗಲೂ ನಂಬಿಕೊಂಡಿದ್ದೇನೆ. ಕಾದಂಬರಿಯಂತೆ ಸಮೀಕ್ಷಾತ್ಮಕವಾಗಿಯೂ, ದೀರ್ಘವಾದ ಅಡ್ಡ ಹೊರಳುವಿಕೆಯಲ್ಲಿಯೂ ಗತ ಸ್ಮರಣ ಮತ್ತು ತೆಳು ಚೌಕಟ್ಟಿನಲ್ಲಿ ಮುಳುಗದ ಸಣ್ಣಕಥೆ ನೇರವಾಗಿ ತನ್ನ ಕೊನೆತಿರುವು (ಕ್ಲೈಮ್ಯಾಕ್ಸ್) ತಲುಪುವ ಗುರಿ ಹೊಂದಿರುತ್ತದೆ. ಇದು ವಿವರಣಾತ್ಮಕತೆಗಳ ಒತ್ತಾಯವಿಲ್ಲದೆ ತೀವ್ರತೆ ಮತ್ತು ರಹಸ್ಯವನ್ನು ಒಳಗೊಂಡಿರುತ್ತದೆ. ಜೊತೆಗೆ ಸಂಕ್ಷೇಪತೆ ಇದರ ತುಂಬ ಮುಖ್ಯವಾದ ಸತ್ವ. ಸಣ್ಣಕಥೆ ಖಂಡಿತವಾಗಿಯೂ ಒಂದು ಯೋಜನಾ ಬದ್ಧತೆಯದು; ಸಾಹಿತ್ಯದೊಳಗಿನ ಹರಟೆಯಾದ 'ಜೀವಿತದ ಒಂದು ತೂತು' ಅಲ್ಲ...''.

ಈ ಮಾತುಗಳಲ್ಲಿ ಸಿಂಗರ್ ಸಣ್ಣಕತೆಯ ಒಳಲಕ್ಷಣಗಳು ಎಂಥವು ಎನ್ನುವುದನ್ನು ಸ್ಪಷ್ಟಮಾತುಗಳಲ್ಲಿ ಹೇಳಿದ್ದಾನೆ. ಇವು ಅನುಭವೀ ಕತೆಗಾರನ ಮಾತುಗಳಾಗಿರುವುದರಿಂದ ಕಥೆಗಾರರಿಗೆ ಮಾರ್ಗದರ್ಶಿಯಾಗುವ ಹಿತನುಡಿಗಳೆಂಬಂತೆಯೂ ಇವೆ.

ಸಿಂಗರ್‌ನ ಈ ಮಾತುಗಳು, ಸದ್ಯ ಕನ್ನಡ ಸಾಹಿತ್ಯ ಕ್ಷೇತ್ರದ ಪರಿಸ್ಥಿತಿಯ ಬಗ್ಗೆ ಬಾಳಾಸಾಹೇಬರು ಗಮನ ಸೆಳೆದಿರುವ ಅಂಶಗಳನ್ನು ಹೊರತಾಗಿಸಿಯೇ ಅವರ ಕಥೆಗಳನ್ನು ಓದಲು ಪ್ರವೇಶಿಸಿದಾಗ ಈ ಕಥೆಗಾರ ಕಥಾಪ್ರಕಾರದ ಹುಡುಕಾಟದಲ್ಲಿರುವುದು ಕಾಣುತ್ತದೆ. ಇಲ್ಲಿನ ಮೊದಲ ಕಥೆ 'ಅವ್ವ'ದಲ್ಲಿ ಈಗಾಗಲೇ ರೂಢಿಗತವಾಗಿರುವ ಗ್ರಾಂಥಿಕ ಭಾಷೆಯಲ್ಲಿ

ಇದ್ದರೆ 'ಒಂಟಿ ಕಾಗಿ ಭವಿಷ್ಯ ಮತ್ತು ಬೆಕ್ಕು' ಕಥೆಗೆ ಬರುವಲ್ಲಿಗೆ ಪ್ರಾದೇಶಿಕ ಭಾಷೆಯನ್ನು ಸಾಂದ್ರ ಹರವಿನಲ್ಲಿ ದುಡಿಸಿಕೊಳ್ಳುವಲ್ಲಿಗೆ ಬರವಣಿಗೆಯ ಶೈಲಿ ಬದಲುಗೊಳ್ಳುತ್ತದೆ. ನಗರಕೇಂದ್ರಿತ ಬದುಕಿನಿಂದ ಗ್ರಾಮೀಣ ಬದುಕು ಭಾಷೆಯತ್ತ ಹೊರಳಿಕೊಳ್ಳುವ ದೃಷ್ಟಿಕೋನವನ್ನು ತೋರುವ ಈ ಜಾಡಿನಲ್ಲಿ ಹೊಸತನ ತಂದುಕೊಳ್ಳುವ ಹವಣಿಕೆ ಇರುವಂತೆಯೇ ಮಿತಿಗಳೂ ಇವೆ. ಭಾಷೆ ಮತ್ತು ವಸ್ತು ದ್ರವ್ಯವನ್ನು ತನ್ನ ಸುತ್ತಲಿನ ಬದುಕಿನಿಂದ ಹೆಕ್ಕುವ ಕಥೆಗಾರ ಪೂರ್ವಾಗ್ರಹಗಳಿಂದ ಪಾರಾಗಿ ನಿಲ್ಲುತ್ತಿದ್ದಾನೆಯೇ ಎಂದಾಗ ಮಾತ್ರ ಸೀಮಿತತೆಯಲ್ಲಿ ನಿಲ್ಲುತ್ತಾನೆ. ಕಥಾ ನಿರೂಪಣೆಯಲ್ಲಿ ಪಾತ್ರಗಳ ಒಳಗನ್ನು ಬಗೆದು ತೋರುವಂಥದಾಗಲೀ, ಸನ್ನಿವೇಶಗಳ ನಾಟಕೀಯತೆಯನ್ನು ನಿರೂಪಣೆಯೊಳಗೆ ಮಿಂಚಿಸುವುದಾಗಲೀ ಕಾಣುವುದಿಲ್ಲ. ಗಂಡ ಸತ್ತಮೇಲೆ ಒಂಟಿಯಾಗಿ ತನ್ನ ಊರಿನಲ್ಲಿ ಇರಲಾಗದೆ ಮಗನೊಂದಿಗೆ ಗೋವಾಕ್ಕೆ ಹೋಗುವ ತಾಯಿಯ ಪಾತ್ರ 'ಅವ್ವ'ಕಥೆಯಲ್ಲಿ ಗಟ್ಟಿತನದ ಪಾತ್ರವಾಗಿ ಒಡಮೂಡುವುದಿಲ್ಲ. ಈ ಕತೆಯೊಳಗೆ ಪ್ರಾದೇಶಿಕತೆಯೂ ತೆಳು ಹಂದರದಲ್ಲಿದೆ. ಉತ್ತಮ ಕಥೆಯಾಗುವ ಲಕ್ಷಣವಿದ್ದೂ ಈ ಕಥೆ ಸಾರ್ವತ್ರಿಕತೆಯತ್ತ ಚಿಗಿಯುವುದಿಲ್ಲ. ತಾಯಿಯ ಪಾತ್ರದ ಮತ್ತೊಂದು ಪ್ರತಿರೂಪವಾಗಿರುವ 'ನಾನು ಆಯಿ ಮತ್ತು ಮಗ' ಕಥೆಯಲ್ಲಿ ಕೂಡ ಈ ಅಂಶವೇ ಮರುಕಳಿಸುತ್ತದೆ. ಇಲ್ಲಿ ನಿರೂಪಣೆಯ ಮೇಲಿರುವ ಬಿಗಿ ಹಿಡಿತ 'ಸೂಲಗಿತ್ತಿ ಸಂಗವ್ವ'ನ ಪಾತ್ರದ ದುರಂತವನ್ನು ಆ ಪಾತ್ರದ ಒಳತುಡಿತಗಳ ಕೇಂದ್ರದಲ್ಲಿಯೇ ಹರಿಯುವಂಥ ಯತ್ನದಲ್ಲಿ ತೊಡಗುವುದಿಲ್ಲ. ನಿರೂಪಣೆ ವಾಚ್ಯತೆಯತ್ತ ಜಾರುವುದರಿಂದ ಈ ಕಥೆ ಬೀರಬಹುದಾಗಿದ್ದ ದಟ್ಟಪರಿಣಾಮ ಕೂಡ ವಿಷಾದದ ಧ್ವನಿಪೂರ್ಣತೆಯನ್ನು ಪರಿಮಿತಗೊಳಿಸುತ್ತದೆ.

'ಒಂಟಿ ಕಾಗಿ ಭವಿಷ್ಯ ಮತ್ತು ಬೆಕ್ಕು'ಕಥೆಯಲ್ಲಿ ಗ್ರಾಮೀಣ ಬದುಕಿನಲ್ಲಿ ಬೆರೆತಿರುವ ಮುಗ್ಧತೆಯೊಂದಿಗಿನ ನಂಬಿಕೆಯ ಸೂಕ್ಷ್ಮಗಳು ಹೊಳೆಯುವುದೇ ಇಲ್ಲ. ಕಥೆಗಾರನೇ ಒಂದು ಸಾಂದರ್ಭಿಕತೆಯ ದುರಂತ ಹಾಗೂ ವಿಷಾದವನ್ನು ಭವಿಷ್ಯದ ಚೌಕಟ್ಟಿಗೆ ನಿಲ್ಲಿಸುವ ಯತ್ನದಲ್ಲಿ ಮುಳುಗುತ್ತಾನೆ. ಭಾಷೆಯ ಬಳಕೆಯಲ್ಲಿ ಗಟ್ಟಿತನವಿದ್ದೂ ಈ ಕಥೆ ತನ್ನೊಳಗಿನ ಸೂಕ್ಷ್ಮ ಎಳೆಗಳನ್ನು ಹರಡಿಕೊಳ್ಳುವುದಿಲ್ಲ.

ಇಲ್ಲಿನ ಎಲ್ಲ ಕಥೆಗಳಲ್ಲಿಯೂ ಕಥೆಗಾರನೇ ಪ್ರಮುಖನಾಗುತ್ತಾನೆ. ಕಥೆಗಳಲ್ಲಿ ಆತ ಹಿಂದೆ ಸರಿಯುತ್ತ ಕಥೆಗಳ ಎಳೆ ಹೊರಳಿಕೊಳ್ಳುವ ಸೂಕ್ಷ್ಮಾಂಶಗಳನ್ನು ಬಿಂಬಿಸುವ, ಕಥೆಯನ್ನು ತನ್ಮಯದೊಳಗೆ ಕಟ್ಟುವ ನಿಟ್ಟಿನತ್ತ ಗಮನ ನೀಡದಿರುವುದರಿಂದ ಇವು ಸಾಫಲ್ಯತೆಯತ್ತ ನಡೆಯುವುದಿಲ್ಲ. 'ಅವ್ವ'ಕಥೆ ಒಂದು ಜೈನ ಕುಟುಂಬದೊಳಗಿನದು ಎನ್ನುವುದು 'ಕಾಲೋಕಾರ ಮಂತ್ರ'ವನ್ನು ಮೊಮ್ಮಗನಿಗೆ 'ಕಲಿಸಿಲ್ಲ ಯಾನ ?' ಎಂದು ತಾಯಿ ಕೇಳುವುದರಿಂದ ಮಾತ್ರ ತೋರುತ್ತದೆ ಹೊರತು ಜೈನ ಸಂಸ್ಕೃತಿಯ ಹಿನ್ನೆಲೆಯಲ್ಲಿ ಕಥೆ ದಟ್ಟವಿವರಗಳನ್ನು ಒಳಗೊಳ್ಳುವುದಿಲ್ಲ. ನಗರ - ಗ್ರಾಮೀಣ ಬದುಕಿನ ಮುಖಾಮುಖಿಯೂ ಈ ಕಥೆಯೊಳಗೆ ಸೂಚ್ಯವಾಗಿದ್ದು ತೆಳುವಾಗಿ ಸಂಚಾರೀಭಾವದಲ್ಲಿ ಹಾಯ್ದು ಹೋಗುತ್ತದೆ. ಸಿಂಗರ್ - ಮಾಸ್ತಿ ಅಂಥವರ ಕಥೆಗಳು ಸಾಂಸ್ಕೃತಿಕ ವಿವರಗಳ ಸಮೃದ್ಧತೆಯಲ್ಲಿ ಸತ್ಯವನ್ನೂ ದಟ್ಟ ಅನುಭವ ನೀಡುವಂಥ ಪರಿಣಾಮವನ್ನೂ ಮೂಡಿಸುವುದು ನಮ್ಮ ಮುಂದೆ ಸ್ಪಷ್ಟವಾಗಿ

ಕಾಣುತ್ತಿದ್ದರೂ ಈ ವಿವರಗಳನ್ನು ದುಡಿಸಿಕೊಳ್ಳದ , ಇವನ್ನು ಸ್ಪರ್ಶಿಸಲೂ ಅಳುಕುವ ಮನೋಭಾವ ಬರಿಯ ಮೇಲ್ಮೆಲೆಯ ಬರಡುತನವನ್ನು ತೋರುತ್ತದೆ ಎನ್ನುವುದನ್ನು ಬಾಳಾಸಾಹೇಬರನ್ನೂ ಮೊದಲುಗೊಂಡು ಹಲವು ಕಥೆಗಾರರಲ್ಲಿ ಕಾಣಬಹುದು. ಬದುಕಿನ ಸಾಮಾಜಿಕತೆಗೇ ಹೆಚ್ಚಿನ ಒತ್ತು ನೀಡುವುದು ಒಂದೇ ಮಾದರಿಯ ಕಥೆಗಳನ್ನು ಸೃಷ್ಟಿಸುವ ಪರಿಮಿತತೆಗೆ ನಿಲ್ಲಿಸುತ್ತದೆ ಎನ್ನುವುದನ್ನೂ ಇತ್ತೀಚಿನ ಹಲವು ಕಥೆಗಳು ಒಂದನ್ನು ಮತ್ತೊಂದು ನೆನಪಿಸುವ ನಿದರ್ಶನದಲ್ಲಿ ನೋಡಬಹುದು .

ಈ ಸಂಕಲನದಲ್ಲಿನ ಕಥೆಗಳಲ್ಲಿ ಬಾಳಾಸಾಹೇಬ ಅವರು 'ಮಧ್ಯಾಹ್ನ ಮನೆಗೆ ಬಂದ ಮುದುಕ'ದಲ್ಲಿ ಮಾತ್ರ ಅಯಾಚಿತವಾಗಿ ದಕ್ಕಿರುವ ತನ್ಮಯತೆಯಲ್ಲಿ ಸಫಲತೆಯನ್ನು ತೋರುತ್ತಾರೆ. ಒಬ್ಬ ಕಲಾವಿದನ ಹಸಿವಿನೊಂದಿಗೆ ಬೆರೆತಿರುವ ನಗರ ಬದುಕಿನ ಸಂಕೀರ್ಣತೆ ಇಲ್ಲಿ ಮನಮುಟ್ಟುವಂತೆ ಚಿತ್ರಣಗೊಂಡಿದೆ. ಈ ಕಥೆಯಲ್ಲಿ ಕಥೆಗಾರನ ತನ್ಮಯತೆ ಚೆಕಾಫ್‌ನ 'ವರ್ಕ್ ಆಫ್ ಆರ್ಟ್'ಕಥೆಯಲ್ಲಿನಂಥ ಚೌಕಟ್ಟನ್ನು ನಿರ್ಮಿಸಿದೆ .ನೀಳ್ಗತೆಯೊಂದರ ಹರವಿರುವ 'ರೇಶಿಮೆ ಪರಕಾರ' ನವ್ಯಕಥೆಯ ಛಾಯೆಯಲ್ಲಿ ಸಾಗುತ್ತದೆ.

ಒಂದು ಹೊಸತನದ ಹೊಮ್ಮುವಿಕೆಗಾಗಿ ಕಾಯುತ್ತಿರುವ ಕಥಾಪ್ರಕಾರ ಈ ಹಿಂದಿನ ತನ್ನ ಸಾಹಿತ್ಯಕ ಚಳುವಳಿಗಳನ್ನು ಮೀರಿ ಹೊರನಿಲ್ಲುವ ಪ್ರಬುದ್ಧ ರಚನೆಗಳನ್ನು ನೀಡಿರುವಂತೆಯೇ ಮುಂದೆಯೂ ನೀಡಬಲ್ಲದು .ತನ್ನ ಶ್ರೀಮಂತಿಕೆಯನ್ನು ಉಳಿಸಿ ಕೊಳ್ಳುತ್ತಲೇ ನಿರಂತರತೆಯನ್ನು ಕಾಯ್ದುಕೊಳ್ಳಬಲ್ಲದು ಎನ್ನುವುದನ್ನು ಬಾಳಾಸಾಹೇಬ ಅವರಂಥವರ ಹೊಸತನದ ಹುಡುಕಾಟ ತೋರಿಸುತ್ತದೆ.

-ಲಿಂಗರಾಜು

ಶಿವಾನುಭವ (ಪ್ರವಾಸಕಥನ)
ಲೇ: ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು
ಪ್ರ: ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಸಿರಿಗೆರೆ
ಪುಟ: ೮೦ ಬೆಲೆ: ರೂ ೨೫/-

ಕನ್ನಡದಲ್ಲಿ ಅನೇಕ ಪ್ರವಾಸಕಥನಗಳು ಪ್ರಕಟವಾಗಿವೆ .ಕೆಲವು ಪ್ರವಾಸ ಕಥನಗಳಂತೂ ಮಹತ್ವದ ಸಾಂಸ್ಕೃತಿಕ ದಾಖಲೆಗಳಾಗಿವೆ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರಿಂದ ರಚಿತವಾದ 'ಶಿವಾನುಭವ ' ಕೃತಿ ಎರಡು ಕಾರಣಗಳಿಗಾಗಿ ಗಮನಸೆಳೆಯುತ್ತದೆ. ಇದು ಕೇವಲ ಪ್ರವಾಸಾನುಭವವಾಗಿರದೆ ಶಿವಾನುಭವವಾಗಿರುವುದು ಹಾಗೂ ಸ್ವಾಮಿಗಳವರಂತೆ ಇತರರೂ ಸಾಮೂಹಿಕವಾಗಿ ತಮ್ಮ ಅನುಭವಗಳನ್ನು ಹೇಳಿಕೊಂಡಿರುವುದು .ಹೀಗೆ ಪ್ರವಾಸವೊಂದು ಸಾಮುದಾಯಿಕ ಕ್ರಿಯೆಯಾಗಿ, ತನ್ನೊಳಗನ್ನು ತಿಳಿದುಕೊಳ್ಳುವ ಪ್ರಕ್ರಿಯೆಯಾಗುವುದರೊಂದಿಗೆ ಸಮೂಹದ ಅಭಿವ್ಯಕ್ತಿಯಾಗಿ ಮೂಡಿಬಂದಿರುವುದನ್ನು 'ಶಿವಾನುಭವ'ಕೃತಿಯಲ್ಲಿ ಕಾಣಬಹುದಾಗಿದೆ.

ಈ ಪುಟ್ಟ ಪುಸ್ತಕದಲ್ಲಿ ಎರಡು ಭಾಗಗಳಿವೆ .ಮೊದಲ ಭಾಗದಲ್ಲಿ ಶ್ರೀ ಪಂಡಿತಾರಾಧ್ಯರು ಪ್ರವಾಸದ ಬಗೆಗೆ ತಮ್ಮ ಅನುಭವಗಳನ್ನು ಹೇಳಿದರೆ, ಎರಡನೇ ಭಾಗದಲ್ಲಿ

ಪ್ರವಾಸಕ್ಕೆ ಹೋಗಿದ್ದ ನೂರಾಹನ್ನೊಂದು ಜನರಲ್ಲಿ ಹದಿನಾರು ಪ್ರವಾಸಿಗರು ತಮ್ಮ ತಮ್ಮ ಅನುಭವಗಳನ್ನು ಹೇಳಿಕೊಂಡಿದ್ದಾರೆ.

ಮೊದಲ ಭಾಗದಲ್ಲಿ ಶ್ರೀ ಪಂಡಿತಾರಾಧ್ಯರು ತಾವು ಪ್ರವಾಸಮಾಡಿದ ದಕ್ಷಿಣ ಭಾರತದ ಐತಿಹಾಸಿಕ ಸ್ಥಳಗಳ ಬಗೆಗೆ ಮಾಹಿತಿ ನೀಡಿದ್ದಾರೆ. 'ಈ ದೇವರ ಮರೆಯಲ್ಲಿ ಸಹಸ್ರಾರು ಜನರು ಸುಖವಾಗಿ ಹೊಟ್ಟೆ ಹೊರೆಯುತ್ತಿದ್ದಾರೆ. ಅಂಥವರಲ್ಲಿ ಮೊದಲ ಸ್ಥಾನ ಪುರೋಹಿತರದು '(ಪುಟ :೨೦) ಎಂಬ ಕಟುಸತ್ಯವನ್ನು ಓದುಗರ ಮುಂದಿಡುತ್ತಾರೆ. ಕನ್ಯಾಕುಮಾರಿಯಲ್ಲಿ ನಡೆಯುವ ವ್ಯವಹಾರಗಳನ್ನು ಕುರಿತು 'ಅವರ ಮೋಸದ ವ್ಯವ ಹಾರವೆತ್ತ? ವಿವೇಕಾನಂದರ ಆದರ್ಶವೆತ್ತ?' (ಪುಟ:೪೨) ಎಂದು ವಿಷಾದಿಸಿದ್ದಾರೆ. ಈ ಪ್ರವಾಸದ ಅವಧಿಯಲ್ಲಿ ಭಕ್ತರಿಗೆ ಶರಣರ ವಚನಗಳ ಮೂಲಕ ಶಿವಾನುಭವ ಕುರಿತು ಹೇಳಿದ್ದನ್ನು ಲೇಖಕರು ಈ ಭಾಗದಲ್ಲಿ ಪ್ರಸ್ತಾಪಿಸಿದ್ದಾರೆ. ತಾವು ಪ್ರವಾಸ ಕೈಕೊಂಡ ಪ್ರೇಕ್ಷಣೀಯ ಹಾಗೂ ಐತಿಹಾಸಿಕ ಸ್ಥಳಗಳ ಬಗೆಗೆ ಪರಿಚಯಾತ್ಮಕ ಟಿಪ್ಪಣಿಗಳನ್ನು ಮಂಡಿಸಿದ್ದಾರೆ. ಆದರೆ ಇತಿಹಾಸದ ಎಳೆಗಳ ಮೂಲಕ ಸಾಂಸ್ಕೃತಿಕ ಸಂಘರ್ಷವನ್ನುಂಟು ಮಾಡಿದ್ದರೆ ಈ ಪ್ರವಾಸ ಕಥನಕ್ಕೆ ಒಂದು ಹೊಸ ಆಯಾಮ ದೊರೆ ಯುತ್ತಿತ್ತು. ಧರ್ಮ - ಸಂಸ್ಕೃತಿ - ಸಮಾಜದ ಬಗೆಗೆ ಗಂಭೀರವಾಗಿ ಆಲೋಚಿಸಬಲ್ಲ ಶ್ರೀ ಪಂಡಿತಾರಾಧ್ಯರಿಗೆ ಇದು ಸಾಧ್ಯವಿತ್ತು.

ಎರಡನೆಯ ಭಾಗದಲ್ಲಿ ಹದಿನಾರು ಜನ ಪ್ರವಾಸಿಗರು ಹೇಳಿರುವ ಅನುಭವಗಳಲ್ಲಿ ಸ್ವಾಮೀಜಿಯವರೇ ಕೇಂದ್ರ ಬಿಂದುವಾಗಿದ್ದಾರೆ. '' ಆ ವಿವೇಕಾನಂದರು ಮತ್ತೆ ನಮ್ಮ ಗುರುಗಳ ರೂಪದಲ್ಲಿ ಜನ್ಮವೆತ್ತಿ ಬಂದಂತಿತ್ತು ''(ಪುಟ :೬೩) ; ''ಪ್ರವಾಸದಲ್ಲಿ ಯಾವ ದೇವಾಲಯದಲ್ಲಿಯೇ ಆಗಲಿ, ದೇವರನ್ನು ನೋಡಿದರೆ ನನಗೆ ಅಲ್ಲಿ ತಮ್ಮ ಭಾವಚಿತ್ರವೇ ಕಂಡಂತಾಗುತ್ತಿತ್ತು ''(ಪುಟ :೬೫) ಎಂದು ಹೇಳಿರುವ ಈ ಪ್ರವಾಸಿಗರ ಅನುಭವಗಳಲ್ಲಿ ಪ್ರವಾಸದ ಸ್ಥಳಗಳು ಹಾಗೂ ಅವುಗಳ ಐತಿಹಾಸಿಕ ಪರಂಪರೆಗಿಂತ ಹೆಚ್ಚಾಗಿ ತಮ್ಮ ಗುರುಗಳು ನೀಡಿದ ದೀಕ್ಷೆ ಹಾಗೂ ಬೋಧೆ - ಪ್ರವಚನಗಳೇ ಮುಖ್ಯವಾಗಿ ಕಂಡಿವೆ. ಈ ಪ್ರವಾಸಿಗರ ಅನುಭವಗಳು, ಟ್ರೇನಿಂಗ್ ಶಾಲೆಯ ವಿದ್ಯಾರ್ಥಿಗಳ ಅನುಭವಗಳಂತಿವೆಯೇ ಹೊರತು ಅದರಲ್ಲಿ ವಿಶೇಷತೆ ಇಲ್ಲ. ಐತಿಹಾಸಿಕವಾಗಿ - ಸಾಂಸ್ಕೃತಿಕವಾಗಿ ಈ ಪುಸ್ತಕ ಹೊಸದೇನನ್ನೂ ಹೇಳದಿದ್ದರೂ, ಮೂಢನಂಬಿಕೆ - ಅಂಧಸಂಪ್ರದಾಯಗಳನ್ನು ತೊರೆದು, ಕಾಣಿಕೆ - ತೀರ್ಥ - ಅಭಿಷೇಕಗಳನ್ನು ನಿಷೇಧಿಸಿ ಇಲ್ಲಿಯ ಪ್ರವಾಸಿಗರು ಶಿವಶರಣರ ವಿಚಾರದಂತೆ ಶಿವಾನುಭವಿಗಳಾಗಲು ಪ್ರಯತ್ನಿಸಿರುವುದು ಬಹುಮುಖ್ಯ ಸಂಗತಿಯಾಗುತ್ತದೆ. ಭಕ್ತರ ದುಶ್ಚಟಗಳನ್ನು ಬಿಡಿಸಿ, ಶರಣರ ಸೂಳ್ನುಡಿಗಳನ್ನು ತಿಳಿಸುವ ಇಂತಹ ಪ್ರವಾಸಗಳು ಹೆಚ್ಚಾದಂತೆಲ್ಲಾ ಜನಸಮುದಾಯದಲ್ಲಿ ಪ್ರವಾಸದ ಬಗೆಗೆ ಸರಿಯಾದ ಪರಿಕಲ್ಪನೆ ಮೂಡಬಹುದಾಗಿದೆ. ಸಿರಿಗೆರೆ, ಸಾಣೇಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಶ್ರೀ ತರಳಬಾಳು ಸ್ವಾಮಿಗಳು ಇಂತಹ ಜಾಗ್ರತೆಯನ್ನುಂಟುಮಾಡುತ್ತಲೇ ಬಂದಿದ್ದಾರೆ. ಪ್ರವಾಸದ ಮೂಲಕ ಭಕ್ತರಿಗೆ ಶಿವಾನುಭವವನ್ನು ಕಲ್ಪಿಸಿಕೊಟ್ಟ ಶ್ರೀ ಪಂಡಿತಾರಾಧ್ಯರು ಅಭಿನಂದನಾರ್ಹರಾಗಿದ್ದಾರೆ.

- ಡಾ. ಬಸವರಾಜ ಸಬರದ

೩. ಸಪ್ತಪದಿ (ಕವಿತೆಗಳು)
ಲೇ : ರಾಮಚಂದ್ರ ಶರ್ಮ
ಪ್ರ : ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು - ೨೯
ಪುಟ : ೮೦ ಬೆಲೆ : ರೂ. ೪೦ /-

ಕವಿ ರಾಮಚಂದ್ರಶರ್ಮರು ನಲವತ್ತು ವರ್ಷಗಳಿಗಿಂತಲೂ ದೀರ್ಘವಾದ ಕವಿತ್ವದ ಇತಿಹಾಸವುಳ್ಳವರು. ಕನ್ನಡದ ನವ್ಯ ಕಾವ್ಯದ ಸಂದರ್ಭದಲ್ಲಿ ಗೋಪಾಲಕೃಷ್ಣ ಅಡಿಗರ ನಂತರದ ಮಹತ್ವದ ಹೆಸರೆಂದರೆ ರಾಮಚಂದ್ರ ಶರ್ಮರದೇ ಆಗಿತ್ತು. ಸಮಕಾಲೀನ ಕನ್ನಡ ಕಾವ್ಯದ ಸಂದರ್ಭದಲ್ಲಿಯೂ ರಾಮಚಂದ್ರ ಶರ್ಮರು ಅತ್ಯಂತ ಕ್ರಿಯಾಶೀಲರಾಗಿದ್ದು ಕಾವ್ಯ ಮತ್ತು ಸಂಗೀತಗಳ ನಡುವಿನ ಸಂಬಂಧದ ಬಗ್ಗೆ, ಧ್ವನಿಸುರುಳಿಗಳ ಹಾವಳಿಯ ಬಗ್ಗೆ ತೀಕ್ಷ್ಣವಾದ ವಾಗ್ವಾದಗಳನ್ನು ಸೃಷ್ಟಿಸಿ ಪಾಲುಗೊಂಡಿದ್ದಾರೆ. ಕನ್ನಡದ ನಾಸ್ತಿಕ ಕವಿಯಾದ ಶರ್ಮರು ವೈಯುಕ್ತಿಕ ಅನುಭವಗಳ ನೆಲೆಯಲ್ಲಿಯೇ ಕಾವ್ಯವನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆನ್ನುವ ವೀರ ಹಟವುಳ್ಳವರು.

ರಾಮಚಂದ್ರಶರ್ಮರ ಎಂಟನೆಯ ಕವನಸಂಕಲನ 'ಸಪ್ತಪದಿ'. ಈ ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ ಡಾ. ಡಿ. ಆರ್. ನಾಗರಾಜ ಅವರು ಶರ್ಮರ ಕಾವ್ಯವ್ಯಕ್ತಿತ್ವದ ವೈಶಿಷ್ಟ್ಯಗಳನ್ನು ಸ್ಪಷ್ಟವಾಗಿ ಗುರುತಿಸುತ್ತಾರೆ. ರಾಮಚಂದ್ರಸರ್ಮರು ಸಂಕಲ್ಪದಿಂದ ಕವಿಯಾದವರು - ಕಾವ್ಯಕಟ್ಟುವವರು ಎಂತೆನ್ನುವ ಮಾತು ಅದರ ಶಬ್ದಶಃ ಅರ್ಥದಲ್ಲಿ ಕೇವಲ ಶರ್ಮರಿಗೆ ಮಾತ್ರ ಅನ್ವಯವಾಗಲಾರದು. ಕಾವ್ಯ ಅಥವಾ ಸಾಹಿತ್ಯ ಸೃಷ್ಟಿಯ ಹಿಂದೆ ಸಂಕಲ್ಪ ಬಲವಿದ್ದೇ ಇರಬೇಕಾಗುತ್ತದೆ. ಹುತ್ತಗಟ್ಟುವ ಕ್ರಿಯೆ ಇಲ್ಲದಲ್ಲಿ ಹೊಸ ಮಾನಸಿಕ ಸೃಷ್ಟಿ ಸಾಧ್ಯವಾಗದು. ಆದರೆ ನಾಗರಾಜರ ಮಾತಿನ ಇನ್ನೊಂದು ನೆಲೆಯಲ್ಲಿನ ಸೂಕ್ಷ್ಮಾರ್ಥವು ಶರ್ಮರ ಕಾವ್ಯಶರೀರ ಮತ್ತು ಭಾಷಿಕ ನುಡಿಗಟ್ಟುಗಳನ್ನು ಕುರಿತಂತೆ ತುಂಬ ಸರಿಯಾಗಿ ಅನ್ವಯವಾಗುವಂತಿದೆ. ಶರ್ಮರ ಕಾವ್ಯದಲ್ಲಿ ಬಳಕೆಗೊಳ್ಳುವ ಭಾಷಿಕ ನುಡಿಗಟ್ಟು ತೀವ್ರವಾದ ವೈಯುಕ್ತಿಕ ಜರೂರಿನಲ್ಲಿ 'ಸೃಷ್ಟಿಸಿ'ಕೊಂಡ ಗ್ರಾಂಥಿಕಭಾಷೆಯನ್ನು ಮುರಿದು (ಹುರಿದು!) ಕಟ್ಟಿಕೊಂಡ ನುಡಿಗಟ್ಟಾಗಿದೆ. ವ್ಯಕ್ತಿಯೊಬ್ಬ ತನ್ನ ಜೀವನಕಾಲಾವಧಿಯಲ್ಲಿ ಸೃಷ್ಟಿಸಿಕೊಳ್ಳುವ ಭಾಷೆ (ಪಡೆದುಕೊಳ್ಳುವ ಗುಣಧರ್ಮ - ಲ್ಯಾಮಾರ್ಕ್‌ನ ಭಾಷೆಯಲ್ಲಿ) ಮತ್ತು ಸಾಂಸ್ಕೃತಿಕ ವಿಕಾಸದಲ್ಲಿ ರೂಪುಗೊಂಡಿರುವ ಸಮಷ್ಟಿಯ ಭಾಷೆ ಇವುಗಳ ನಡುವೆ ಇರುವ ಇತ್ಯಾತ್ಮಕ ನೇತ್ಯಾತ್ಮಕ ಅಂತರಗಳು ಶರ್ಮರ ಕಾವ್ಯಾಭಿವ್ಯಕ್ತಿಯ ಇತಿ ಮಿತಿಗಳನ್ನು ನಿರ್ಧರಿಸುತ್ತವೆ. (ನಾಗರಾಜರು ಶರ್ಮರ ಕಾವ್ಯದಲ್ಲಿ ಬಳಕೆಗೊಳ್ಳುವ ಭಾಷೆಯನ್ನು ಭಾಷಾಂತರದ ಭಾಷೆ ಎನ್ನುತ್ತಾರೆ). ಈ ಭಾಷಾ ಶೈಲಿಯು ಶರ್ಮರ ಕಾವ್ಯಕ್ಕೆ ಸೇರಿಸುವ ಒಂದು ಇತ್ಯಾತ್ಮಕ ಅಂಶ 'ವೆಂದರೆ, ಅದು ಕಾವ್ಯಕ್ಕೆ 'ಸ್ವತಂತ್ರ'ಗೊಂಡ ಅಸ್ತಿತ್ವವೊಂದನ್ನು ನೀಡುವುದು. ಶರ್ಮರ ಕವಿತೆಗಳು ನನಗೆ ಭಾಷಿಕ ದ್ವೀಪಗಳಂತೆ ತೋರುತ್ತವೆ. ಹೀಗೆನ್ನುವುದು ಇವರ ಕಾವ್ಯದ ಬಗೆಗಿನ ಟೀಕೆಯಾಗಿರದೆ ಅದರ ಸ್ವರೂಪದ ಬಗೆಗಿನ ತಿಳುವಳಿಕೆಯ ಪ್ರಯತ್ನವಾಗಿದೆ. ಕವಿತೆಗೆ ಇರಬಹುದಾದ ಸಾವಿರಾರು ಭಾಷಿಕ ಸ್ವರೂಪಗಳಲ್ಲಿ ಶರ್ಮರದು ತನ್ನ ವೈಶಿಷ್ಟ್ಯದಿಂದ ತಲೆ

ಎತ್ತಿ ನಿಲ್ಲುತ್ತದೆ. ಕನ್ನಡದಲ್ಲಿ ಶರ್ಮರದು ವಿಶಿಷ್ಟಬಗೆಯ ಕಾವ್ಯವಾಗಿದೆ.

ಶರ್ಮ ಅವರ ಕಾವ್ಯಾಭಿವ್ಯಕ್ತಿಯ ಇಂಥ ರೀತಿ ಒಂದು ಅನಿವಾರ್ಯವಾದ ಬೇಡಿಕೆಯನ್ನು ಮಂಡಿಸುತ್ತದೆ. ಅದೆಂದರೆ, ತೀವ್ರವಾದ ವೈಯುಕ್ತಿಕ ಅನುಭವ ಮಾತ್ರ ಕಾವ್ಯಾಭಿವ್ಯಕ್ತಿಯ ಕ್ರಿಯೆಗೆ ಲಭ್ಯವಾಗಬೇಕು ಎನ್ನುವುದು. ಇದೀಗ ಸಾಮಾನ್ಯೀಕರಣದ ಸಮಸ್ಯೆ ತಲೆದೋರುತ್ತದೆ. ಶರ್ಮರು ಈ ಸವಾಲನ್ನು ಅನ್ಯೋಕ್ತಿ ಮಾರ್ಗದ ಅಭಿವ್ಯಕ್ತಿಯ ಮೂಲಕ ಎದುರಿಸುತ್ತಾರೆ. ಇದು ಒಂದುರೀತಿಯಾಗಿ ಪ್ರತಿಮೆ ರೂಪಕಗಳ ರೆಕ್ಕೆಗಳನ್ನು ಕತ್ತರಿಸುವ ಮಾರ್ಗ. ಹೀಗೆ ಇವುಗಳ ರೆಕ್ಕೆಗಳನ್ನು ಕತ್ತರಿಸಿ ಅವುಗಳನ್ನು ಕೇವಲ ಅನ್ಯೋಕ್ತಿಗಳನ್ನಾಗಿಸುವ ಕೆಲಸ ನಡೆಯುತ್ತದೆ. ಇಂಥಲ್ಲಿ ಕೆಲವು ಸಲ ಸಂವಹನದ ಗೊಂದಲವನ್ನು ಎದುರಿಸಬೇಕಾಗಿ ಬರಬಹುದು. ಇದಕ್ಕೆ ಸಂಬಂಧಿಸಿದಂತೆ ಎರಡು ಉದಾಹರಣೆಗಳನ್ನು ಆಯ್ದು ಕೊಡುತ್ತೇನೆ.

ಒಂದು : 'ನೀನೆ ದೀಪದ ಮನೆ' ಕವನದ ಕೊನೆಯ ಸಾಲುಗಳಲ್ಲಿ ಬರುವ ಶಬ್ದಚಿತ್ರ -

ಒಡೆದ ಹಡಗಿಗೆ ನೀನೆ ದಡದ ದೀಪದ ಮನೆ -
ನಿನಗೇನು ಕೊಡಲಿ, ಹೇಳಿಬಿಡು, ಹೆಣ್ಣೆ.

ಇಲ್ಲಿ, ಒಡೆದ ಹಡಗಿಗೆ ದೀಪದ ಮನೆಯ(*light house*) ಹಂಗು ಇನ್ನೇನಿದೆ? ಏನಿದ್ದರೂ ಹಡಗು ಒಡೆಯುವ ಮೊದಲಿಗೆ ದೀಪದ ಮನೆಯ ಉಪಯುಕ್ತತೆ ಎನ್ನುವ ಭಾವ ಮೂಡಿದರೆ ಕವಿತೆಯ ಸಂವಹನ ಕುಸಿಯುತ್ತದೆ. ಆದರೆ, ಇಲ್ಲಿ 'ಒಡೆದ ಹಡಗು' ಎನ್ನುವುದು ಕೇವಲ ಅನ್ಯೋಕ್ತಿಯಾಗಿ, ಕವಿ ಅಥವಾ ಗಂಡೊಂದರ ಬದಲಿಗೆ ಬಂದದ್ದು. ಹಾಗಿರುವುದರಿಂದಲೇ ಅದರ ಮುಂದಿನ ಸಾಲಿನಲ್ಲಿ 'ನಿನಗೇನು ತಾನೆ ಕೊಡಲಿ ಹೇಳಿಬಿಡು ಹೆಣ್ಣೆ' ಎಂತೆನ್ನುವ ವೈಯುಕ್ತಿಕ, ಮಾನುಷ ಉದ್ಗಾರ ಬರಲು ಸಾಧ್ಯವಾಗುತ್ತದೆ. 'ಒಡೆದ ಹಡಗು' ಎಂತೆನ್ನುವುದು ಸ್ವತಂತ್ರ ಪ್ರತಿಮೆಯಾಗದೇ, ತಕ್ಷಣವೇ 'ಇವನು/ ಕವಿ/ ಗಂಡಸು' ಎಂದಾದಾಗ ಈ ಶಬ್ದಚಿತ್ರದ ಔಚಿತ್ಯಕ್ಕೆ ಭಂಗವೇನೂ ಉಂಟಾಗಲಾರದು.

ಎರಡು : ಆದರೆ 'ಆತ್ಮ' ಕವನದಲ್ಲಿ ಬರುವ ಈ ಶಬ್ದಚಿತ್ರವನ್ನು ನೋಡಿರಿ -

ಅವನ ಎದೆಯೆನ್ನುವುದು ಗಣಿ, ಅದರ ತಳಕ್ಕೆ
ಕಲ್ಲು ಮಣ್ಣುಗಳಲ್ಲಿ ಚಿನ್ನದದಿರಿನ ಹಾಗೆ
ಬಚ್ಚಿಟ್ಟುಕೊಂಡಿರುವ ನಿಜವನ್ನು ಮರ್ತ್ಯಕ್ಕೆ
ಹೊರತಂದು ಇಲ್ಲಿ ಈ ನೆಲದ ಗಾಳಿಬೆಳಕಿಗೆ
ಒಡ್ಡಿ ಸಾಕ್ಷಾತ್ಕರಿಸುವುದೇ ಅವಳ ಬಯಕೆ.
ಹೀಗೆ ಘಟಿಸುವ ಅಪರಂಜಿ ಹಿಟ್ಟನ್ನು ನಾದಿ
ಲಟ್ಟಿಸಿ ಕುಟ್ಟಿ ತೀಡಿ ತಿದ್ದಿ ಪಡೆದದ್ದಕ್ಕೆ
ಸಿಂಗಾರಮಾಡಿ ಹಾಡಿ ತನ್ನೆದೆಯ ಗಾದಿ
ಮೇಲಿಟ್ಟು ಪೂಜಿಸಿ ಬದುಕ ತೇಯುವ ಹುಚ್ಚು.

- ಹೀಗೆನ್ನುವಲ್ಲಿ 'ಅಪರಂಜಿ ಹಿಟ್ಟು', 'ನಾದಿ', 'ಲಟ್ಟಿಸಿ', 'ಕುಟ್ಟಿ' ಎಂತೆನ್ನುವ ವರೆಗಿನ (ಇಲ್ಲಿಯೂ ಒಂದಿಷ್ಟು ತಿರುವುಮುರುಗು ಇದೆ) ಕ್ರಿಯಾಸರಣಿ ಅದರ ಮುಂದಿನ ಕ್ರಿಯಾ

ಸರಣಿಗೆ ಹೊಂದಿಕೊಳ್ಳದೇ ಗೊಂದಲ ಮೂಡುತ್ತದೆ. ಇಷ್ಟದೇವತಾ ವಿಗ್ರಹವನ್ನು ಪಡೆಯುವ ಕ್ರಿಯಾಸರಣಿಗೆ ರೊಟ್ಟಿತಟ್ಟುವ ಕ್ರಿಯಾಸರಣಿ ತುಂಬ ಭಿನ್ನವಾಗಿ, ಹೊಂದಿಕೊಳ್ಳದೇ ಹೋಗುತ್ತದೆ.

ಶರ್ಮರಂತಹ ಅನುಭವೀ ಹಿರಿಯ ಕವಿಯ ಕವಿತೆಗಳನ್ನು ನಾವು ಹೀಗೆ ಈ ತರದ ಪರೀಕ್ಷೆಗೆ ಒಳಪಡಿಸುವ ಸಂದರ್ಭ ಬರುವುದು ಅವರ ಕವಿತೆಯು ತಾಳುವ ವಿಶಿಷ್ಟ ರೂಪದ ಮೂಲಕ ಮತ್ತು ಅವುಗಳಲ್ಲಿ ಅಡಕಗೊಳ್ಳುವ ಅತ್ಯಂತ ವೈಯುಕ್ತಿಕವಾದ ಶಬ್ದ ಚಿತ್ರಗಳ ಮೂಲಕ. 'ಇಂಗ್ಲೆಂಡಿನೊಂದು ಮೇ ಹಗಲು ನೀನು ' ಕವಿತೆಯಲ್ಲಿ ಬರುವ ಒಂದು ಚಿತ್ರ ಹೀಗಿದೆ :

> ಬೆಂಕಿ ಹದ ಬಂದಂತೆ ಹತ್ತಕ್ಕೆ ಹುಚ್ಚು ಸೆಕೆ
> ಕಪ್ಪಿಟ್ಟ ಋಷಿಮುಖದ ಆಕಾಶ ಆಮೇಲೆ

ಇಲ್ಲಿನ 'ಕಪ್ಪಿಟ್ಟ ಋಷಿಮುಖ ' ಎನ್ನುವ ಚಿತ್ರ ಅತ್ಯಂತ ವೈಯುಕ್ತಿಕ ಪರಿಭಾವನೆಯ ಚಿತ್ರವಾಗಿದೆ. ಈ ಚಿತ್ರದ ವಿವರಣೆಯು (ಧ್ಯಾನಸ್ಥ ,ಕಪ್ಪು ಬಿಳಿ ಮೋಡಗಳ ಆಕಾಶ ...ಇತ್ಯಾದಿ) ನಮಗೆ 'ಋಷಿಮುಖ'ವನ್ನು ಅನಿವಾರ್ಯ ಎನ್ನಿಸುವಂತೆ ಮಾಡುವುದಿಲ್ಲ.

೦

೦

ಶರ್ಮರು ಅಪ್ಪಟ ನವ್ಯಕವಿ. ಕಾವ್ಯವನ್ನು ಅತ್ಯಂತ ನಿಷ್ಠವಾದ ಅನುಭವ ಪ್ರಾಮಾಣ್ಯದಲ್ಲಿ ನೆನೆಸಿ ಹದಮಾಡಿ ಕಟ್ಟುವವರು. ಇದು ಶರ್ಮರ ಕವಿತೆಗೆ ಹೊಸ ಶೋಭೆಯನ್ನು ನೀಡುವಂತೆಯೇ ಸಂವಹನದ ತೊಡಕನ್ನೂ ನಿರ್ಮಿಸುತ್ತದೆ. ಆದರೆ ಈ ತೊಡಕುಗಳನ್ನು ಬಿಡಿಸಿಕೊಂಡು ಅವರ ಕಾವ್ಯದ ಅನುಸಂಧಾನದಲ್ಲಿ ತೊಡಗುವುದು ಜೀವನಾನುಭವವನ್ನು ಮೂರ್ತ ಮತ್ತು ಅಮೂರ್ತಗಳ ನೆಲೆಗಳಲ್ಲಿ ಏಕಕಾಲಕ್ಕೆ ಎದುರುಗೊಳ್ಳುವ ಸಂತೋಷದಾಯಕ ಕ್ರಿಯೆಯಾಗುತ್ತದೆ. ನನ್ನ ಈ ಮಾತಿಗೆ ಪೂರಕವಾಗಿರುವ ,ಸಂಕಲನದಲ್ಲಿನ ,ನನಗೆ ಇಷ್ಟವಾದ ಅನೇಕ ಪದ್ಯಗಳಲ್ಲಿ ಒಂದಾದ 'ಅಕ್ಕ-ತಂಗಿ 'ಯನ್ನು ಇಲ್ಲಿ ನಿಮ್ಮ ಮುಂದೆ ಇಟ್ಟು ಶರ್ಮರ ಕಾವ್ಯದ ಬಗೆಗಿನ ಈ ಪುಟ್ಟ ಟಿಪ್ಪಣಿಯನ್ನು ಮುಗಿಸುತ್ತೇನೆ.

> ಅವಳೇ ಬೇರೆ, ನೀನೇ ಬೇರೆ, ತಾಯಿಬೇರು
> ನಿಮಗೆ ಊಡಿಸಿದ ಅಂತಸ್ಸಾರ ಒಂದಾದರೂ
> ಬಿಟ್ಟೆನೆಂದರೆ ಬಿಡದೆ ಕನಸು ಬೆಂಬತ್ತಿರಲು
> ಬಟ್ಟೆ ಕಳಚಿ ಮನೆ ಬಿಟ್ಟು ಅಡವಿ ಹೊಕ್ಕವಳು
> ಅವಳು. ಒಡಲ ಅಷ್ಟು ಅಷ್ಟೂ ಕಳವಳ ಹೊತ್ತು,
> ನನ್ನ ಈ ಗುಡಿಸಲಿನಲ್ಲಿ ಅನುಮಾನವುಟ್ಟು
> ಇವೊತ್ತಿಗೂ ಉಳಿದವಳು ನೀನು.
>   ಕಾಣುತ್ತ
> ಕಾಣುತ್ತ ಕಂಗಳ ಮುಚ್ಚಿ ಒರಗಿ ಮೈಮರೆತ

ಅವಳ ಸಾವಿಲ್ಲದ ರೂಹಿಲ್ಲದ ಆ ಚೆನ್ನ
ಅವತರಿಸಿ ಬಂದಂತೆ ಪಕ್ಕ ಮಲಗಿದ ನನ್ನ
ಬಕ್ಕ ತಲೆ ಮೇಲೆ ನಿನ್ನ ಬೆರಳುಗಳ ನೇವರಿಕೆ .
ಕಾಮಿಸಿ ಕಲ್ಪಿಸಿ ಮರುಳಾದವಳ ಕನವರಿಕೆ .

ತೆರೆಯದೆ ತೋರೆಯದೆ ನಿಂತ ನಿನಗೂ ಇದ್ದಂತೆ
ಚೆನ್ನ ಒಲಿವನೋ ಒಲಿಯನೋ ಎಂಬ ಚಿಂತೆ . (ಅಕ್ಕ -ತಂಗಿ)

-ರಾಘವೇಂದ್ರ ಪಾಟೀಲ

ಸಂಪಾದಕನ ಟಿಪ್ಪಣಿಗಳು ...

ಎಷ್ಟು ಕಾಡತಾವ ಕಬ್ಬಕ್ಕಿ
ನಾ ಮನಿಯಾಗಿರುವಾಕಿ ಒಬ್ಬಾಕಿ ...

ಅಂತನ್ನುವ ಹಾಡಿನ ಸಾಲುಗಳು ನೆನಪಾಗುತ್ತಿವೆ . ಏನೆಲ್ಲ ಪ್ರಯತ್ನಗಳ ನಡುವೆ - ಏನೆಲ್ಲ ವಿಘ್ನಗಳು ಬಂದು ನಾನು ಅಂದುಕೊಂಡಂತೆ ಆಗದೇ, ನಿಮ್ಮೆಲ್ಲರ ಅತೃಪ್ತಿಯನ್ನು ಹೆಚ್ಚಿಸುತ್ತ ಇದು ತಡವಾಗಿ ನಿಮ್ಮ ಎದೆಯ ಕದ ತಟ್ಟುತ್ತಿದೆ... ತಪ್ಪುಮಾಡಿದ ಹುಡುಗ ತಲೆ ತಗ್ಗಿಸುವಂತೆ ನಾನು ಈಗ ರೋಮ್ಯಾಂಟಿಕ್ಕಾಗಿ ಮಾತಾಡಬೇಕಾಗಿದೆ.... ಇದು ನಿತ್ಯ ನಡೆದು ನಿಮ್ಮ ಬೇಸರ ಇನ್ನಷ್ಟು ಇನ್ನಷ್ಟು ಹೆಚ್ಚುತ್ತಿರಬೇಕು . ನಿತ್ಯ ಕ್ಷಮಾಯಾಚನೆಯ ಕ್ರಿಯೆಯಿಂದ 'ಕ್ಷಮೆ' ಎಂಬ ಶಬ್ದದ ಸವಕಳಿಯಾಗುತ್ತದೆನ್ನುವುದು ಗೊತ್ತು . ಆದರೆ ಕೇಳದಿರಲು ಹೇಗೆ ಸಾಧ್ಯ! ... ಈಸಲ ನನ್ನ ಬೆನ್ನುನೋವಿನ ಕಾರಣ . ಕೂರಲು ಸಾಧ್ಯವಾಗದಂತಹ , ಮೆದುಳು ಬಳ್ಳಿಯು ಮಡಿಚಿಕೊಳ್ಳುತ್ತಿದೆಯೇನೋ ಎನ್ನಿಸುವಂತಹ ತೀವ್ರತರವಾದ ನೋವು . ಮುಕ್ಕಾಲು ಭಾಗ ಡಿಟಿಪಿಯನ್ನು ಎಂದೋ ಮುಗಿಸಿದ ನಾನು ಮುಂದಿನ ಕಾಲು ಭಾಗದ ಕೆಲಸವನ್ನು ಮಾಡಲಾಗದಂತಹ ನೋವಿನಲ್ಲಿ ಕಳೆದೆನು . ಈ ದೈಹಿಕ ನೋವಿನ ಜೊತೆಗೆ ಒಂದು ಸಾವು ತಂದ ನೋವು ಮನಸ್ಸನ್ನು ಘಾಸಿಗೊಳಿಸಿತು ... ಅಣ್ಣ -ತಮ್ಮಂದಿರು , ಅಕ್ಕ ತಂಗಿಯರು ... ಹೀಗೆ ಒಂದು ಪೀಳಿಗೆಯೊಳಗೆ ಕಾಣಿಸಿಕೊಳ್ಳುವ ಮೊಟ್ಟಮೊದಲ ಸಾವು ಆ ಪೀಳಿಗೆಯ ಸದಸ್ಯರಲ್ಲಿ ಹುಟ್ಟಿಸುವ ಆಘಾತದ ಅನುಭವ ಅತ್ಯಂತ ತೀವ್ರತರವಾದದ್ದು ... ಸಾವು ನಮ್ಮ ಪಕ್ಕಕ್ಕೆ ಬಂದು ಕೂತಂತೆ ! ಅದು ಭಯವನ್ನು ಮಾತ್ರ ಬಿತ್ತುವುದಿಲ್ಲ - ಆಳವಾದ ವಿಹ್ವಲತೆಯನ್ನು ಹುಟ್ಟಿಸುತ್ತದೆ . ಇಂಥ ವಿಹ್ವಲತೆ ಮತ್ತು ಆ ಮೂಲಕ ಒಳಸೇರಿದ ಮಾನಸಿಕ ನಿಷ್ಕ್ರಿಯತೆ ಈಗೆರಡು ತಿಂಗಳುಗಳಿಂದ ನನ್ನನ್ನು ತುಂಬ ಕಾಡಿಸಿವೆ . ಯಾವುದರಲ್ಲಿಯೂ ತೀವ್ರವಾಗಿ ತೊಡಗಲಾರದ ಸ್ಥಿತಿ . ಈ ಸ್ಥಿತಿ ಕೊನೆಗೊಳ್ಳುತ್ತಿದೆ ಎನ್ನುವ ನಂಬಿಕೆ ಹುಟ್ಟುತ್ತಿದೆ. ಈ ನಂಬಿಕೆಯ ಜೊತೆಗೆ , ಇದುವರೆಗೆ ವಿಶ್ರಾಂತಿಯಲ್ಲಿದ್ದ ಗೆಳೆಯ ಡಿ. ಎಸ್. ನಾಗಭೂಷಣ ಮತ್ತು ಸವಿತಾ ನಾಗಭೂಷಣ, ಸಂವಾದದ ಸಂಪಾದನೆಯ ಕೆಲಸದಲ್ಲಿ ತೊಡಗಿಕೊಳ್ಳಲಿದ್ದಾರೆ

ಬೇಂದ್ರೆಯವರನ್ನು ಕುರಿತಾದ ಸಂವಾದದ ವಿಶೇಷ ಸಂಚಿಕೆಯೊಂದು ಹಿರಿಯರಾದ ಪ್ರೊ. ಕೀರ್ತಿನಾಥ ಕುರ್ತಕೋಟಿ ಅವರ ಸಂಪಾದಕತ್ವದಲ್ಲಿ ರೂಪುಗೊಳ್ಳುತ್ತಿದೆ. ಬೇಂದ್ರೆ ವಿಶೇಷ ಸಂಚಿಕೆಯ ಕೆಲಸದ ನಂತರ ನನಗೆ ವಿಶ್ರಾಂತಿಯ ಅವಕಾಶ ದೊರೆಯುತ್ತದೆನ್ನುವ ನಂಬಿಕೆ ಇದೆ.

೦

೦

ಚುನಾವಣೆಗಳು ಇದೀಗ ಮುಗಿದಿವೆ. ಚುನಾವಣೆಗಳು ನಡೆಯುವ ರೀತಿ - ಮತದಾರರಿಗೆ ಹೆಂಡ ಹಣ ಹಂಚುವವಿಕೆ... ಯಾವದೇ ಪಕ್ಷವಿರಲಿ ನಮ್ಮ ಜಾತಿಯವನಿಗೇ ಓಟು ಕೊಡುವುದು ಎಂತೆನ್ನುವ ಶಿಕ್ಷಿತರಲ್ಲಿಯೇ ಇರುವ ಜಾತೀಯ ಭಾವನೆ... ಎಲ್ಲ ಬೇಸರ ತರಿಸುತ್ತವೆ. ಇಂಥ ಸಾಮಾಜಿಕ - ರಾಜಕೀಯ ಅಧಃಪತನದ ಸಂದರ್ಭದಲ್ಲಿ ಕಾರಂತರ ಉಗ್ರ ನೈತಿಕ ವ್ಯಕ್ತಿತ್ವದ ನೆನಪು ಪ್ರಖರಗೊಳ್ಳುತ್ತದೆ. ಜಾತಿ - ಅಧಿಕಾರ - ಪ್ರಗತಿವಾದದ ಸೋಗಲಾಡಿತನ ಇವೆಲ್ಲವುಗಳನ್ನು ಕೆತ್ತಿ ಜಾಡಿಸುತ್ತಿದ್ದ ಕಾರಂತರು ಸಮಾಜವನ್ನು ಇಡಿಯಾಗಿ ನೋಡುವ ವ್ಯಾಪ್ತ ದೃಷ್ಟಿಕೋನವನ್ನು ಹೊಂದಿದ್ದರು. ಇಂಥ ನೆಲೆಯಲ್ಲಿಯೇ ಅವರು ಪರಿಸರ ರಕ್ಷಣೆಯ ಚಳುವಳಿಗಳಲ್ಲಿ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡರು.

ಈ ಸೃಷ್ಟಿಯಲ್ಲಿರುವ ಜೀವಿಗಳ ಪರಸ್ಪರ ಸಂಬಂಧಗಳ ಒಳಹೆಣಿಗೆ(*web of life*)ಯ ಅರಿವು ಇದ್ದವನಿಗೆ ಸಮಾಜದಲ್ಲಿರುವ ಒಳಹೆಣಿಗೆಯ ಸೂಕ್ಷ್ಮತೆಯ ಪರಿಕಲ್ಪನೆ ಸ್ಪಷ್ಟವಾಗಿರುತ್ತದೆ. ಅಂಥವನು ಭೌತಿಕ ಪರಿಸರ - ಸಾಮಾಜಿಕ ಪರಿಸರಗಳಲ್ಲದೇ ವ್ಯಕ್ತಿಗಳಲ್ಲಿ ಅಂತರ್ಗತವಾಗಿರುವ ಮಾನಸಿಕ ಪರಿಸರ - ಇವೆಲ್ಲವುಗಳನ್ನು ಒಳಗೊಂಡ ವೈಶಾಲ್ಯದ ನೆಲೆಯಲ್ಲಿ ಪರಿಸರದ ಆರೋಗ್ಯವನ್ನು ಚಿಂತಿಸುವುದು ಸಾಧ್ಯವಾಗುತ್ತದೆ. ಕಾರಂತರದು ಇಂತಹ ಪರಿಕಲ್ಪನಾತ್ಮಕ ಶಕ್ತಿ. ಅವರ ಎಲ್ಲ ಚಟುವಟಿಕೆಗಳ ಹಿಂದೆ ಈ ವಿಸಾಲ ವ್ಯಾಪ್ತಿಯ ಅಂತರ್‌ಸಂಬಂಧದ ಒಳಹೆಣಿಗೆಯ ಕಲ್ಪನೆ ಜಾಗೃತವಾಗಿರುತ್ತಿತ್ತು. ಇಂಥ ನೆಲೆಯಲ್ಲಿ ಕಾರಂತರ ಕಾದಂಬರಿಗಳು ಕೂಡ ಪರಿಸರದ ರೋಗಗಳನ್ನು ಗುರುತಿಸುವ ಮತ್ತು ಅದರ ಆರೋಗ್ಯಕ್ಕಾಗಿ ಹಂಬಲಿಸುವ ಸಾಹಿತ್ಯ ರೂಪಗಳಾಗಿವೆ.... ಎಲ್ಲ ಅನಾರೋಗ್ಯಗಳ ನಡುವೆ ಆರೋಗ್ಯಶಾಲಿಯಾಗಿದ್ದುಕೊಂಡು, ತಮ್ಮ ಆರೋಗ್ಯದ ಅಂಶಗಳನ್ನು ತಮ್ಮ ಸುತ್ತಲಿನ ಪರಿಸರಕ್ಕೆ ನೀಡಲು ಪ್ರಯತ್ನಿಸಿದ ಕಾರಂತರು ಇನ್ನಿಲ್ಲದಾಗಿದ್ದಾರೆ. ಆದರೆ ಅವರು ಸೃಷ್ಟಿಸಿದ ಮಾರ್ಗಗಳು ಇದ್ದೇ ಇವೆ. ಅವುಗಳನ್ನು ಪರಿಭಾಪಿಸುವುದು ಬಿಡುವುದು ನಮ್ಮ ಭವಿಷ್ಯದ ಪ್ರಶ್ನೆಗಳಾಗಿವೆ.

ಕನ್ನಡದ ಇನ್ನೊಬ್ಬ ಸೂಕ್ಷ್ಮ ಸಂವೇದನಾಶೀಲ ವ್ಯಕ್ತಿತ್ವದ ಪಿ. ಶ್ರೀನಿವಾಸರಾವ್ ಇಲ್ಲವಾಗಿದ್ದಾರೆ. ನಿಶಿತ ವಿಮರ್ಶಾಪ್ರಜ್ಞೆಯ ಶ್ರೀನಿವಾಸರಾವ್ ಅವರು ಅಮೇರಿಕೆಯಿಂದ ಮರಳಿಬಂದು ಕನ್ನಡದಲ್ಲಿ ನೆಲೆನಿಂತಿದ್ದರೆ ನಮ್ಮ ಸಾಹಿತ್ಯಲೋಕಕ್ಕೆ ಹೊಸ ಸೂಕ್ಷ್ಮತೆಯ ಮೈಗಳು ಲಭ್ಯವಾಗುತ್ತಿದ್ದವು. ಅವರ ಸಾವು ನಮ್ಮನ್ನು ಇಂಥ ಅವಕಾಶಗಳಿಂದ ವಂಚಿಸಿದೆ.

೦

೦

ಡಾ. ಎಮ್. ಎಮ್. ಕಲ್ಬುರ್ಗಿಯವರು ಕನ್ನಡ ವಿಶ್ವವಿದ್ಯಾಲಯ ಹಂಪಿಯ ಹೊಸ ಕುಲಪತಿಗಳಾಗಿ ನೇಮಕಗೊಂಡಿರುವುದು ಸಂತೋಷದ ಸಂಗತಿ. ಈ ಹಂಪಿ ಯುನಿವರ್ಸಿಟಿಯದೊಂದು ಕರ್ಮಕಥೆ. ಕಂಬಾರರು ಅಲ್ಲಿ ಒಂದಿಷ್ಟು ಕಮಲಗಳನ್ನು ಬೆಳೆದಿದ್ದಾರಾದರೂ ಅವುಗಳ ಜೊತೆಗೆ ಸಾಕಷ್ಟು ಕೆಸರನ್ನೂ ಸೃಷ್ಟಿಸಿದ್ದಾರೆ. ಡಾ. ಕಲ್ಬುರ್ಗಿಯವರು ಇಲ್ಲಿ ಕಾಣುವ ಒಳಿತಿನ ಮುಗುಳುಗಳನ್ನು ಕಾಪಾಡಿಕೊಂಡು ಈ ಮುಗುಳುಗಳನ್ನು ತಿಂದುಹಾಕಲು ಸೃಷ್ಟಿಗೊಂಡ ಅಪಾರ ಪ್ರಮಾಣದ ಕೀಟಗಳ ಬಾಧೆಯನ್ನು ನಿವಾರಿಸಬೇಕಾಗಿದೆ. ಕನ್ನಡ ವಿಶ್ವವಿದ್ಯಾಲಯವು ಮುಖ್ಯವಾಗಿ ಸಂಶೋಧನೆಯ ಕಾರ್ಯಚಟುವಟಿಕೆಗಳ ಮೂಲಕ ಕನ್ನಡ ಪರಿಸರದ ಸಮೃದ್ಧಿಯನ್ನು ಸಾಧಿಸುವ ಗುರಿಯನ್ನು ಇಟ್ಟುಕೊಂಡಿರುವಂತಹದು. ಕಲ್ಬುರ್ಗಿಯವರು ಮೂಲಭೂತವಾಗಿ ಸಂಶೋಧಕರಾಗಿರುವುದರಿಂದ ಜ್ಞಾನವನ್ನು ನಿರ್ಮಿಸುವ ಈ ಸಂಸ್ಥೆಯನ್ನು ಅತ್ಯಂತ ಯಶಸ್ವಿಯಾಗಿ ನಡೆಸುತ್ತಾರೆನ್ನುವ ಆಸೆ ಮತ್ತು ನಂಬಿಕೆಗಳನ್ನು ವ್ಯಕ್ತಪಡಿಸುತ್ತೇವೆ. ಇದಲ್ಲದೆ ತಮಗೆ ಬಂದ ಪಂಪ ಪ್ರಶಸ್ತಿಯ ಹಣದ ಮೊತ್ತವನ್ನು ಸಾರ್ವಜನಿಕ ಕಾರ್ಯಕ್ಕೆ ನೀಡಿದ ಕಲ್ಬುರ್ಗಿಯವರು ಸಾರ್ವಜನಿಕ ಹಣದ ಬಗೆಗೆ ಶಿಸ್ತು ಮತ್ತು ಪ್ರಾಮಾಣಿಕತೆಯನ್ನು ತೋರುವುದರಲ್ಲಿ ಯಾವ ಸಂಶಯಗಳೂ ಇರಲಾರವು.

ಹಂಪಿಯ ವಿಶ್ವವಿದ್ಯಾಲಯದ ಬಗ್ಗೆ ಮಾತಾಡುವಾಗ ಯಾಕೋ ಅನಂತಮೂರ್ತಿಯವರ ಡಾಲರ್ ಕಾಲನಿಯ ಮನೆಯ ನೆನಪು ಬರುತ್ತದೆ. ಕಳೆದ ಒಂದೆರಡು ತಿಂಗಳುಗಳಲ್ಲಿ ಈ ಡಾಲರ್ ಕಾಲನಿಯ ಮನೆಯ ಧೂಳು ಸಾಹಿತ್ಯವಲಯದಲ್ಲಿರುವವರೆಲ್ಲರ ಕಣ್ಣುಗಳಲ್ಲಿ ಬಿದ್ದಿದೆ. ಮುಖ್ಯವಾಗಿ ಈ ವಿಷಯ ವೈಯುಕ್ತಿಕ ನೈತಿಕತೆಯ ಪ್ರಶ್ನೆ. ಆದರೆ ಈ ವಿಷಯವನ್ನು ಕೆಲವು ಪತ್ರಿಕೆಗಳು ರಾಜಕೀಯ ವಿಷಯವನ್ನಾಗಿಯೂ ಇನ್ನು ಕೆಲವು ಸಾಹಿತಿಗಳು ಇದನ್ನು ಕಾನೂನಿನ ಪ್ರಶ್ನೆಯನ್ನಾಗಿಯೂ ಮಾಡಿದರು. ಹೀಗೆ ಮಾಡುವುದರೊಂದಿಗೆ ಅನಂತಮೂರ್ತಿಯವರನ್ನು ನೈತಿಕತೆಯ ಸವಾಲಿನಿಂದ ಬಿಡುಗಡೆಗೊಳಿಸಿಬಿಟ್ಟರು. ಅದಾಗ ಅನಂತಮೂರ್ತಿಯವರು ಈ ಸವಾಲನ್ನು ಸುಲಭವಾಗಿ ಎದುರಿಸುವಂತಾಯಿತು. ಅನಂತಮೂರ್ತಿಯವರು ಹೊಂದಿರುವ ರಾಜಕೀಯ ಸಂಪರ್ಕಗಳ ಮೂಲಕ ರಾಜಕೀಯ ಸಮಸ್ಯೆಯನ್ನು ಮತ್ತು ಕೋರ್ಟ್‌ಗಳ ಮೂಲಕ ಕಾನೂನಿನ ಸವಾಲುಗಳನ್ನು ಎದುರಿಸುತ್ತಾರೆ. ಪ್ರತಿಯೊಂದು ಕಾನೂನಿನ ಕೆಳಗೆ ತೂರಿಕೊಳ್ಳುವುದಕ್ಕೆ ಇಷ್ಟಗಲದ ಕಿಂಡಿಗಳು ಇದ್ದೇ ಇರುತ್ತವೆ. ಚಿತ್ರದುರ್ಗದ ಒಂದು ಸಂವಾದದ ಕಾರ್ಯಕ್ರಮದಲ್ಲಿ ಒಂದಿಷ್ಟು ಜನ ಗೆಳೆಯರು ನನ್ನನ್ನು ಅನಂತಮೂರ್ತಿಯವರ ಸಾಹಿತ್ಯವನ್ನು ನಾವು ಈಗ ಹೇಗೆ ಸ್ವೀಕರಿಸಬೇಕು? ಎಂದು ಪ್ರಶ್ನಿಸಿದರು. ನಾನು ಹೇಳಿದ್ದೆಂದರೆ - ಅನಂತಮೂರ್ತಿಯವರ ಸಾಹಿತ್ಯವನ್ನು, ಯಾವದೇ ಸಾಹಿತ್ಯವನ್ನು ಸ್ವೀಕರಿಸುವ ರೀತಿಯಲ್ಲಿಯೇ ಸ್ವೀಕರಿಸಬೇಕು. ಇನ್ನು ಅವರ ವ್ಯಕ್ತಿತ್ವವನ್ನು ಸ್ವೀಕರಿಸುವ ಸಂದರ್ಭದಲ್ಲಿ ಬೇಕಾದರೆ ನೀವು ಅವರ ಈ ಡಾಲರ್ ಕಾಲನಿಯ ಘಟನೆಯನ್ನು ಪರಿಗಣಿಸಬಹುದು. ಅಲ್ಲಿಯೂ ನೀವು ಅದನ್ನು ಒಂದು ಕಾನೂನಿನ ವಿಷಯವಾಗಿ ಪರಿಗಣಿಸಿದರೆ ಕೋರ್ಟು ಕೊಡುವ ನಿರ್ಣಯವನ್ನು ಅವಲಂಬಿಸಿ ಅನಂತಮೂರ್ತಿಯವರ ವ್ಯಕ್ತಿತ್ವವನ್ನು ಸ್ವೀಕರಿಸ

ಬೇಕಾಗುತ್ತದೆ . ಒಟ್ಟು ಸಾಮಾಜಿಕ ಬದುಕಿನಲ್ಲಿ ನೈತಿಕತೆಯ ಮೌಲ್ಯಗಳು ಅಧಃಪತನ ಗೊಂಡಾಗ ದುರ್ಬಲ ಮನಸ್ಸಿನ ವ್ಯಕ್ತಿಗಳು ಒಟ್ಟು ಸಮಾಜದ ಮೌಲ್ಯವ್ಯವಸ್ಥೆಯಲ್ಲಿ ತಮ್ಮನ್ನು ಗುರುತಿಸಿಕೊಳ್ಳುವಲ್ಲಿ ಅಷ್ಟಾಗಿ ಹಿಂದೆಗೆಯುವುದಿಲ್ಲ . ಮತ್ತು ಬಹುಶಃ ಕನ್ನಡ ಸಾಹಿತ್ಯ ಲೋಕದಲ್ಲಿರುವವರೆಲ್ಲ, ಅಂತಮೂರ್ತಿ , ಲಂಕೇಶ್, ತೇಜಸ್ವಿ, ಮುಂತಾದವರು ಸೇರಿದಂತೆ, ನಮಗಿಂತ ಮೊದಲ ತಲೆಮಾರಿನ ಲೇಖಕರು ಮತ್ತು ಇಂದಿನ ತಲೆಮಾರಿನ ನಾವೆಲ್ಲ ಲೇಖಕರು ದುರ್ಬಲ ಮನಸಿನವರೇ ಆಗಿದ್ದೇವೆ . ಅದರಲ್ಲಿಯೂ ಇಂದಿನ ತಲೆಮಾರಿನ ಲೇಖಕರಂತೂ ಯಾವದೇ ತೀವ್ರವಾದ ನೈತಿಕ ಸವಾಲನ್ನು ಎದುರಿಸುವ ಯಾವ ಮಾನಸಿಕ ಸ್ಥೈರ್ಯವನ್ನು ಹೊಂದಿದವರಾಗಿಲ್ಲ . ನನ್ನ ಗೆಳೆಯರೊಬ್ಬರು ತುಂಬ ಚೆನ್ನಾಗಿರುವ ಕೆಲಸದಲ್ಲಿದ್ದರೂ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಕೇಳಿದ್ದನ್ನು ನನ್ನ ಇನ್ನೊಬ್ಬ ಗೆಳೆಯ ಟೀಕಿಸಿದರು . ಅದಕ್ಕೆ ನನ್ನ ಮೊದಲನೆಯ ಗೆಳೆಯ , ಸಮಾಜದ ವ್ಯವಸ್ಥೆಯಲ್ಲಿ ಇದಕ್ಕೆ ಅವಕಾಶವಿರುವ ವರೆಗೆ ನಾನು ಆ ಭೂಮಿಯನ್ನು , ಸ್ವತಃ ಉಳಲು ಸಾಧ್ಯವಾಗ ದಿದ್ದರೂ, ಅದರ ಒಡೆತನವನ್ನು ಬಿಟ್ಟುಕೊಡುವುದಿಲ್ಲ ಎನ್ನುವ ವಿವರಣೆ ನೀಡಿದ್ದಲ್ಲದೆ ನೀವು ಏಕೆ ನಿಮ್ಮ ಹೆಸರಿನಲ್ಲಿ ಎರಡು ಸೈಟುಗಳನ್ನು ಹೊಂದಿದ್ದೀರಿ ಎಂದು ಕೇಳಿದರು . ನನ್ನ ಈ ಗೆಳೆಯನ ಅಭಿಪ್ರಾಯವೇ ನನ್ನದೂ ಆಗಿರುವಂತಿದೆ . ನನ್ನದಷ್ಟೇ ಏಕೆ ಬಹುಶಃ ಒಂದಿಷ್ಟು ಯೋಚಿಸುವಂತೆ ತೋರುವ ಸಮಾಜದಲ್ಲಿನ ಎಲ್ಲರದೂ ಆಗಿದೆ ಎನ್ನಿಸುತ್ತದೆ . ಇನ್ನೊಬ್ಬ ಸಮಾಜವಾದೀ ಗೆಳೆಯ ...ಹಂಪಿಯ ವಿಶ್ವವಿದ್ಯಾಲಯದ ಅಧಿಕಾರಿಗಳ ಆಶೀರ್ವಾದ ವಿದ್ದದ್ದರಿಂದ ಅವನ ಲೆಟರ್‌ಹೆಡ್ ಪ್ರಕಾಶನ ಸಂಸ್ಥೆಗೆ ಪುಸ್ತಕಗಳ ಪೂರೈಕೆಯ ಅವಕಾಶ ದೊರೆತು ಆತ ಕೂತ ಕೂತಲ್ಲಿಯೇ ಲಕ್ಷಾಂತರ ರೂಪಾಯಿಗಳ ಕಮಿಶನ್ ಗಳಿಸಿದ . ಪುಸ್ತಕ ಅಂಗಡಿಗಳವರು ಅವನಿಗಾಗಿ , ಅವನ ಹೆಸರಿನಲ್ಲಿ ಹಂಪಿಯ ವಿಶ್ವವಿದ್ಯಾಲಯಕ್ಕೆ ತಾವೇ ಪುಸ್ತಕಗಳನ್ನು ಪೂರೈಸಿದರು . ಇವನು ಒಂದು ಕಡ್ಡಿಯನ್ನೂ ಇತ್ತಿನಿಂದ ಅತ್ತಕಡೆಗೆ ಇಡಲಿಲ್ಲ. ಎಲ್ಲ ತನ್ನಷ್ಟಕ್ಕೆ ತಾನು ನಡೆದು ಇವನಿಗೆ ಕಮಿಶನ್ ಸಿಕ್ಕಿತು . (ಮುಂದೆ ಇವೇ ಪುಸ್ತಕಗಳು ತುಂಗಭದ್ರೆಯ ಒಡಲಿನಲ್ಲಿ ಕೊಚ್ಚಿಹೋದುವಂತೆ !) ಇದರಬಗ್ಗೆ ನನ್ನನ್ನೂ ಸೇರಿದಂತೆ ಎಲ್ಲರ ಪ್ರತಿಕ್ರಿಯೆ ಹೇಗಿರುತ್ತದೆಂದರೆ ...ನಮ್ಮ ಈ ಗೆಳೆಯ ವ್ಯವಹಾರವನ್ನು ಬಲ್ಲವನು ! ಇನ್ನೊಬ್ಬ ಪತ್ರಿಕಾ ಸಂಪಾದಕ ತಪ್ಪು ಲೆಕ್ಕ ತೋರಿಸಿ ಪಡೆದ ನ್ಯೂಜ್ ಪ್ರಿಂಟನ್ನು ಕಾಳಸಂತೆಯಲ್ಲಿ ಮಾರಿಕೊಂಡು ದುಡ್ಡು ಮಾಡುತ್ತಾನೆ . ನಾನು ಸಾಹಿತ್ಯಲೋಕದಲ್ಲಿರು ವವರ ಬಗ್ಗೆ ಹೇಳುತ್ತಿದ್ದೇನೆ . ಇನ್ನು ರಾಜಕೀಯ ಮತ್ತು ಅಧಿಕಾರೀ ವಲಯದಲ್ಲಿರುವವರ ಸಂಗತಿ ಹೇಗಿರಬಹುದು ಎಂದು ನಾವು ಊಹೆ ಮಾಡಿಕೊಳ್ಳಬಲ್ಲೆವು. ಇದನ್ನೆಲ್ಲ ಹೇಳುತ್ತಿರುವಾಗ ನನ್ನ ಮನಸ್ಸಿನಲ್ಲಿ ಇಡೀ ಸಮಾಜವನ್ನು ಆವರಿಸಿರುವ ಕೊಳಕು ಮತ್ತು ಅದರಲ್ಲಿ ನಾವೆಲ್ಲ 'ಸುಖ'ವಾಗಿ ಜೀವಿಸುತ್ತಿರುವ ಬಗೆಗಿನ ವಿಷಾದವಿದೆಯೇ ಹೊರತು ಅನಂತಮೂರ್ತಿಯವರನ್ನಾಗಲೀ ಮತ್ತೆ ಯಾರನ್ನಾಗಲೀ ಬೆಂಬಲಿಸುವ ಅಥವಾ ವಿರೋಧಿಸುವ ನಿಲುವು ಇಲ್ಲ ....ಏನು ಮಾಡಿದರೇನು ಭವ ಹಿಂಗದು ...ಎಂತೆನ್ನುವ ಬೇಸರದಿಂದ ಇಷ್ಟು ಮಾತುಗಳು ....

- ರಾಘವೇಂದ್ರ ಪಾಟೀಲ

ಕೇಂದ್ರ ಸಾಹಿತ್ಯ ಅಕಾದೆಮಿಯ ಕನ್ನಡ ಪ್ರಕಟಣೆಗಳು

ಕಾದಂಬರಿ

೦ ಕತ್ತಲೆಯಿಂದ ಕಗ್ಗತ್ತಲೆಗೆ ೦ ಕೆಂಪುಮೀನು ೦ ಎರಡು ಬಳ್ಳ ೦ ಜನುಮದ ಜೋಡಿ ೦ನಾರಾಯಣರಾವ್ ೦ ಪಾರ್ಥಿಬನ ಕನಸು ೦ ನಾರಿ ೦ ಆರು ಬೀಘ ಭೂಮಿ ೦ ಯಾರು ಲಕ್ಷಿಸುವರು ೦ ಕಾಲ ೦ ನನ್ನಜ್ಜನಿಗೊಂದು ಆನೆಯಿತ್ತು

ಕಥಾಸಂಕಲನ

೦ ಶಕ್ತಿ ವೈದ್ಯ ೦ ತಿರು ಜಾನಕಿರಾಮನ್‌ರ ತಮಿಳು ಕಥಾ ಸಂಕಲನ ೦ ಆಯ್ದ ಮಲೆಯಾಳಿ ಕಥೆಗಳು ೦ಸಾವಿರದೊಂದು ರಾತ್ರಿ - ಅರೇಬಿಯನ್ ನೈಟ್ಸ್

ಜಾನಪದ

೦ಜನಪದ ಗೀತಾಂಜಲಿ / ಸಂ. ದೇ ಜವರೇಗೌಡ ೦ಜನಪದ ಮತ್ತು ಗಿರಿಜನರ ಕತೆಗಳು/ ಸಂ. ಎಲ್. ಆರ್. ಹೆಗಡೆ ೦ ಉತ್ತರ ಕರ್ನಾಟಕದ ಜನಪದ ಕತೆಗಳು / ಸಂ. ಸಿಂಪಿ ಲಿಂಗಣ್ಣ ೦ ದಕ್ಷಿಣ ಕರ್ನಾಟಕದ ಜಾನಪದ ಕತೆಗಳು / ಸಂ. ಜಿ. ಶಂ. ಪರಮಶಿವಯ್ಯ

ನಾಟಕ

೦ಏಕಾಂಕ ಸಂಗ್ರಹ ಭಾಗ ಒಂದು / ಸಂ. ಸಿಂಧುವಳ್ಳಿ ಅನಂತಮೂರ್ತಿ ೦ ಮೀಡಿಯಾ - ಯೂರಿಪಿಡಿಸ್ ನಾಟಕಗಳು ೦ಚಂದ್ರಗುಪ್ತ ೦ ತೆಲುಗು ಏಕಾಂಕ ನಾಟಕಗಳು ೦ ಇಬ್ಸೆನ್ ನಾಟಕಗಳು ೦ ಮೊಲಿಯೇರ್‌ನ ಎರಡು ನಾಟಕಗಳು

ಇತರೆ

೦ ಭಾಸ ೦ ಸಾರ್ಥವಾಹ ೦ ವಾಲ್ಮೀಕಿ ರಾಮಾಯಣ ೦ ಹೊಸಗನ್ನಡ ಪ್ರಬಂಧ ಸಂಕಲನ ೦ ರಸಸಿದ್ಧಾಂತ ೦ ರಾಜೇಂದ್ರಪ್ರಸಾದರ ಆತ್ಮಕಥೆ ೦ ಠಾಗೂರರ ನಿಬಂಧಮಾಲೆ - ಭಾಗ ಒಂದು ೦ ಕಬೀರ ವಚನಾವಲಿ

ಕಾವ್ಯ

೦ ಕುಮಾರನ್ ಆಶಾನ್ ಮೂರು ಕವಿತೆಗಳು ೦ ಭಗ್ನಮೂರ್ತಿ ೦ ಹುಲ್ಲಿನ ದಳಗಳು ೦ ಬಸವಣ್ಣನವರ ವಚನಗಳು ೦ ಸರ್ವಜ್ಞನ ವಚನಗಳು ೦ ಕುಮಾರ ವ್ಯಾಸ ಭಾರತ ೦ ಕನ್ನಡ ಕಾವ್ಯ ಸಂಚಯ ೦ ಠಾಗೂರರ ನೂರೊಂದು ಕವನ ೦ ಭಾರತಿಯವರ ಕವಿತೆಗಳು

ಭಾರತೀಯ ಸಾಹಿತ್ಯ ನಿರ್ಮಾಪಕರು ಮಾಲಿಕೆ

೦ ಹಂಪೆಯ ಹರಿಹರ ೦ಪುರಂದರ ದಾಸರು ೦ ಡಿ ವಿ ಗುಂಡಪ್ಪ ೦ ಗಳಗನಾಥ ೦ ಫ ಗು ಹಳಕಟ್ಟಿ ೦ ಆನಂದಕಂದ ೦ ಪ್ರೇಮಚಂದ್ ೦ ರಾಹುಲ ಸಾಂಕೃತ್ಯಾಯನ್ ೦ ಶ್ರೀರಂಗ ೦ ಶಿಶುನಾಳ ಶರೀಫ ಸಾಹೇಬರು ೦ ಹರ್ಡೇಕರ್ ಮಂಜಪ್ಪ ೦ ರಾಜಾರಾಮ ಮೋಹನ ರಾಯ್

ಪ್ರತಿಗಳಿಗೂ ಮತ್ತು ವಿವರಗಳಿಗೂ ಸಂಪರ್ಕಿಸಿರಿ :

ಸಾಹಿತ್ಯ ಅಕಾದೆಮಿ

ದಕ್ಷಿಣ ಪ್ರಾದೇಶಿಕ ಕಾರ್ಯಾಲಯ ೧೯೯ ಜೆ. ಸಿ. ರಸ್ತೆ ಬೆಂಗಳೂರು ೫೬೦೦೦೨

★ ಡಾ. ಪುರುಷೋತ್ತಮ ಬಿಳಿಮಲೆ ಅವರ 'ಕೂಡು ಕಟ್ಟು' ಜಾನಪದ ಸಂಸ್ಕೃತಿ ಕುರಿತಾದ ಗ್ರಂಥಕ್ಕೆ ಹುನಗುಂದದ ಮೃತ್ಯುಂಜಯ ಸಾರಂಗಮಠ ಪ್ರತಿಷ್ಠಾನ ನೀಡುವ **ವರ್ಷದ ಶ್ರೇಷ್ಠ ಪುಸ್ತಕ** ಪ್ರಶಸ್ತಿ ದೊರೆತಿದೆ. ಆನಂದಕಂದ ಗ್ರಂಥ ಮಾಲೆ ಇದಕ್ಕಾಗಿ ಹೆಮ್ಮೆ ಪಡುತ್ತದೆ.

ಡಾ. ಪುರುಷೋತ್ತಮ ಬಿಳಿಮಲೆ ಇವರಿಗೆ **ಸಂವಾದ ಪ್ರಕಾಶನ** ಮತ್ತು **ಆನಂದಕಂದ ಗ್ರಂಥಮಾಲೆ** ಅಭಿನಂದನೆಗಳನ್ನು ಸಲ್ಲಿಸುತ್ತವೆ.

ಆನಂದಕಂದರ ಅತ್ಯಂತ ತೀವ್ರವಾದ ಆಶಯವು ಸಾಹಿತ್ಯ ಮತ್ತು ಪತ್ರಿಕೆಗಳ ಮೂಲಕ ಜೀವನದ ಬಗೆಗಿನ ರುಚಿ ಪ್ರಜ್ಞೆಯೊಂದನ್ನು ಜನಾಂಗದಲ್ಲಿ ಮೂಡಿಸುವುದು ಆಗಿದ್ದಿತು. ಇಂಥ ಉದ್ದೇಶ ಅವರ ಹೆಸರಿನಲ್ಲಿ ಆರಂಭಗೊಳ್ಳುತ್ತಿರುವ '**ಆನಂಧಕಂದ ಗ್ರಂಥಮಾಲೆ**'ಯದು.

ಆನಂದಕಂದ ಗ್ರಂಥಮಾಲೆಯು ಪ್ರತಿಭೆಗೆ ಪ್ರಾಶಸ್ತ್ಯ ದೊರಕಿಸಿ ಕೊಡುವುದರಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುತ್ತದೆ. ಆನಂದಕಂದ ಗ್ರಂಥಮಾಲೆಯು ಜಾತಿಮತಗಳ ಸಂಕುಚಿತತೆಯ ಆಚೆ ಗಿರುತ್ತದೆ. ಅದರ ಸುತ್ತಲಿರುವುದು ಕನ್ನಡದ ವಿಶಾಲ ಬಯಲು ಮತ್ತು ಅದರ ಪ್ರತಿಭೆಗಳು ಮಾತ್ರ.

ಆನಂದಕಂದ ಗ್ರಂಥಮಾಲೆಯು ಪ್ರತಿವರ್ಷ ೫೦೦ಪುಟಗಳ ಅತ್ಯುತ್ತಮ ಸಾಹಿತ್ಯವನ್ನು ನೀಡುತ್ತದೆ.

ಈಸಾಂಸ್ಕೃತಿಕ ಆಶಯದ ಆನಂದಕಂದ ಗ್ರಂಥಮಾಲೆಯನ್ನು ಕಟ್ಟಲು ನಿಮ್ಮೆಲ್ಲರ ಸಹಭಾಗಿತ್ವಕ್ಕಾಗಿ ವಿನಂತಿಸಿಕೊಳ್ಳುತ್ತೇನೆ. ದಯವಿಟ್ಟು ಚಂದಾದಾರರಾಗುವುದರ ಮೂಲಕ ಸಹಕರಿಸಿ.

ವಾರ್ಷಿಕ ಚಂದಾ : ರೂ.೨೦೦ /
ಆಜೀವ ಚಂದಾ : ರೂ.೨೦೦೦ /

ಚಂದಾಹಣವನ್ನು **ರಾಘವೇಂದ್ರ ಪಾಟೀಲ, ಸಂಚಾಲಕ, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ ಚಿತ್ರದುರ್ಗ ಜಿಲ್ಲೆ -೫೭೭೫೩೧** ಈ ವಿಳಾಸಕ್ಕೆ ಡಿಡಿ ಮೂಲಕ ಕಳಿಸಬಹುದು. ಮಲ್ಲಾಡಿಹಳ್ಳಿಯ ಹೊರಗಿನ ಬ್ಯಾಂಕ್‌ಗಳ ಚೆಕ್ /ಡಿಡಿಗಳಿಗೆ ರೂ.೧೨/ ಹೆಚ್ಚಿಗೆ ಸೇರಿಸಿ ಕಳಿಸಬೇಕು.

SAHITYA SAMVADA - 46 July - Agust 1998

Edited Published and Printed by Raghavendra Patil at Lipi Mudrana, Bangalore - 4, for Samvada Prakashana Malladihalli - 577531 Phone : 08191 - 89501